ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಜೂನ್ 29 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 74 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಡಿಕೆಶಿಗೆ ಸಿಎಂ ಸ್ಥಾನ ಹೇಳಿಕೆ ಹಿಂದಿದ್ಯಾ ಕುತಂತ್ರ?: ಆಪ್ತರ ಬಳಿ ಸಿಎಂ ತೀವ್ರ ಅಸಮಾಧಾನ

ನವದೆಹಲಿ, ಜೂ. 28– ಕಾಂಗ್ರೆಸ್‌ನಲ್ಲಿ ಹೆಚ್ಚುವರಿ ಡಿಸಿಎಂಗಳ ನಿಯೋಜನೆ ಕದನ ಇದೀಗ ಮುಖ್ಯಮಂತ್ರಿಯನ್ನೇ ಬದಲಿಸುವ ಮಟ್ಟಕ್ಕೆ ತಿರುವು ಪಡೆದುಕೊಳ್ಳುತ್ತಿದೆ. ದೆಹಲಿಗೆ ತೆರಳಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಸ್ವಾಮೀಜಿ ಹೇಳಿಕೆಯಿಂದ ತೀವ್ರ ಮುಜುಗರವಾದಂತೆ ಕಂಡು ಬರುತ್ತಿದೆ.

ಇಂದು ದೆಹಲಿಯ ಕರ್ನಾಟಕ ಭವನದಲ್ಲಿ ಸುದ್ದಿಗೋಷ್ಠಿ ನಡೆಸುವ ವೇಳೆ ರಾಜಕೀಯದಲ್ಲಿ ಸ್ವಾಮೀಜಿಗಳ ಹಸ್ತಕ್ಷೇಪ ನಡೆಯುತ್ತಿದೆಯೇ? ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸದೇ ಸಿಎಂ ಲಿಫ್ಟ್ ಒಳಗೆ ತೆರಳಿದ್ದರು. ಲಿಫ್ಟ್‌ಗೆ ನುಗ್ಗುತ್ತಿದ್ದಂತೆಯೇ ಸಿದ್ದರಾಮಯ್ಯನವರು 'ಯಾರೋ ಹೇಳಿಕೊಟ್ಟು ಮಾಡಿಸಿದ್ದಾರೆ' ಎಂದು ತಮ್ಮಷ್ಟಕ್ಕೆ ತಾವೇ ಹೇಳಿಕೊಂಡಾಗ ಗೃಹಸಚಿವ ಡಾ. ಜಿ. ಪರಮೇಶ್ವರ್ 'ಹೌದು' ಎಂದು ಪ್ರತಿಕ್ರಿಯಿಸಿದ್ದಾರೆ. ● 6ನೇ ಪುಟಕ್ಕೆ

ಮುಂಬರುವ ಬಜೆಟ್‌ನಲ್ಲಿ ಹೆಜ್ಜಾಲ–ಚಾಮರಾಜನಗರ ರೈಲ್ವೆ ಮಾರ್ಗ ಸೇರ್ಪಡೆ



ನವದೆಹಲಿ, ಜೂ. 28– ಹೆಜ್ಜಾಲ–ಚಾಮರಾಜನಗರ ನಡುವಿನ ರೈಲ್ವೆ ಯೋಜನೆಯನ್ನು ಮುಂಬರುವ ಕೇಂದ್ರ ಬಜೆಟ್‌ನಲ್ಲಿ ಸೇರಿಸಲಾಗುವುದು ಎಂದು ಕೇಂದ್ರ ರೇಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. ಈ ಕುರಿತು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿಯವರಿಗೆ ಬರೆದ ಪತ್ರದಲ್ಲಿ ಅವರು ತಿಳಿಸಿದ್ದಾರೆ.

ಹೆಜ್ಜಾಲ–ಚಾಮರಾಜನಗರ ನಡುವಿನ ಮಾರ್ಗವು ಕನಕಪುರ, ಮಳವಳ್ಳಿ, ಕೊಳ್ಳೇಗಾಲ, ಯಳಂದೂರು ಮಾರ್ಗವಾಗಿ ಹಾದು ಹೋಗಲಿದೆ. ಈ ಯೋಜನೆ ಈ ಭಾಗದ ಜನರ ಬಹುದಿನಗಳ ಕನಸಾಗಿದೆ. ಈ ರೈಲ್ವೆ ಮಾರ್ಗವನ್ನು ಮಂಜೂರು ಮಾಡುವ ಕುರಿತು ಮಾಜಿ ಶಾಸಕ ಡಾ.ಕೆ.ಅನ್ನದಾನಿ ಅವರು ರೈಲ್ವೆ ಸಚಿವರಿಗೆ ಪತ್ರ ಬರೆದು ಮನವಿ ಮಾಡಿದ್ದರು. ● 6ನೇ ಪುಟಕ್ಕೆ

ಮೇಕೆದಾಟು ಯೋಜನೆಗೆ ಅನುಮತಿಸಿ; ಭದ್ರಾ ಮೇಲ್ದಂಡೆ ಯೋಜನೆಗೆ ಹಣ ಕಲ್ಪಿಸಿ

● ಕೇಂದ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯ ● ರಾಜ್ಯದ ಹತ್ತು–ಹಲವು ಯೋಜನೆಗೆ ಅನುಮತಿ; ಅನುದಾನಕ್ಕೆ ಮನವಿ ● ಇದಕ್ಕಾಗಿ ಕೇಂದ್ರದ ಮೇಲೆ ಒತ್ತಡ ತರಲು ರಾಜ್ಯದ ಸಂಸದರಿಗೂ ಕಿವಿಮಾತು

ಬೆಂಗಳೂರು, ಜೂ. 28(ಕೆಎಂಶಿ)– ಕೃಷ್ಣರಾಜ ಸಾಗರ ಅಣೆಕಟ್ಟೆಗೆ ಸಮಾನಾಂತರವಾಗಿ ಮೇಕೆದಾಟು ಬಳಿ ಜಲಾಶಯ ನಿರ್ಮಾಣಕ್ಕೆ ಅನುಮತಿ, ಭದ್ರಾ ಮೇಲ್ದಂಡೆ ಯೋಜನೆಗೆ ನೀಡಿರುವ ಭರವಸೆಯಂತೆ ಹಣ ಬಿಡುಗಡೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಬೆಂಗಳೂರು ಮತ್ತು ಸುತ್ತಮುತ್ತಲ ಜನ ವಸತಿ ಪ್ರದೇಶಗಳಿಗೆ ನಿರಂತರ ಕುಡಿಯುವ ನೀರು ಪೂರೈಕೆ ಹಾಗೂ ಅಣೆಕಟ್ಟೆಯಿಂದ ಹರಿಯುವ ನೀರಿನಿಂದ ವಿದ್ಯುತ್ ಉತ್ಪಾದಿಸಲು 67 ಟಿಎಂಸಿ ಸಾಮರ್ಥ್ಯದ ಮೇಕೆದಾಟು ಯೋಜನೆ ರೂಪಿಸಲಾಗಿದೆ. ಈ ಪ್ರಸ್ತಾವನೆಗೆ ತುರ್ತಾಗಿ ಅನುಮತಿ ಕೊಡಿ ಎಂದಿದ್ದಾರೆ. ಕೇಂದ್ರದ ಮುಂದೆ ಬಾಕಿ ಇರುವ ರಾಜ್ಯದ ಯೋಜನೆಗಳ ಅನುಷ್ಠಾನ ಸಂಬಂಧ ನಿನ್ನೆ ಕೇಂದ್ರದಲ್ಲಿ ಕರ್ನಾಟಕ ಪ್ರತಿನಿಧಿಸುವ ಸಚಿವರು ಮತ್ತು ಸಂಸದರೊಂದಿಗೆ ಚರ್ಚೆ ನಂತರ ದೆಹಲಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮಿಳುನಾಡಿಗೆ ನಿಗದಿಪಡಿಸಿರುವ ಕಾವೇರಿ ನೀರನ್ನು ಹರಿಸಿದ ನಂತರ ಸಮುದ್ರಕ್ಕೆ ಪೋಲಾಗುವ ನೀರನ್ನು ಸಂಗ್ರಹಿಸುವ ಯೋಜನೆ ಇದಾಗಿದೆ ಎಂದರು. ನಾಳೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲೂ ಮೇಕೆದಾಟು ಹಾಗೂ ● 6ನೇ ಪುಟಕ್ಕೆ



ಮುಖ್ಯಮಂತ್ರಿ ಸಿದ್ದರಾಮಯ್ಯ



ಮೇಕೆದಾಟು ಯೋಜನೆ



ಭದ್ರಾ ಮೇಲ್ದಂಡೆ ಯೋಜನೆ

ಬೆವರು ಸುರಿಸದೇ ಜೀವನ ಮಾಡುವವರು ಸ್ವಾಮೀಜಿಗಳು ಸಚಿವ ಕೆ.ಎನ್.ರಾಜಣ್ಣ ಕಿಡಿ



ತುಮಕೂರು, ಜೂ. 28– ತಮಗೆ ಮತ ಮಾಡಿ ಕೊಡುತ್ತೇವೆ ಎಂಬ ಶ್ರೀ ಚಂದ್ರಶೇಖರನಾಥ ಸ್ವಾಮಿಜಿಗಳ ಸಲಹೆಯನ್ನು ಪರಿಶೀಲಿಸುತ್ತೇನೆ. ಬೆವರು ಸುರಿಸದೇ ಜೀವನ ಮಾಡಲು ಸ್ವಾಮೀಜಿಗಳು ಸಲಹೆ ಮಾಡಿದ್ದಾರೆ ಎಂದು ಸಚಿವ ಕೆ.ಎನ್ ರಾಜಣ್ಣ ಕಿಡಿಕಾರಿದ್ದಾರೆ.

ತುಮಕೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜಣ್ಣಗೆ ಮತ ಮಾಡಿಕೊಡ್ತೀವಿ ಎಂಬ ಚಂದ್ರಶೇಖರನಾಥ ಸ್ವಾಮೀಜಿ ಹೇಳಿಕೆ ವಿಚಾರವಾಗಿ ಅವರು ಪ್ರತಿಕ್ರಿಯಿಸಿದ್ದಾರೆ. ದೇಶದಲ್ಲಿ ಬಹಳ ಜನ ಸ್ವಾಮಿಗಳು ಇದ್ದಾರೆ. ಅವರೆಲ್ಲ ಸಲಹೆ ಕೊಡುತ್ತಾರೆ. ಅದೇ ರೀತಿ ಇವರ ಸಲಹೆಯನ್ನೂ ನಾನು ಪರಿಶೀಲನೆ ಮಾಡುತ್ತೇನೆ ಎಂದರು. ಹೆಚ್ಚುವರಿ ಡಿಸಿಎಂ ಹೇಳಿಕೆ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಈ ಹೇಳಿಕೆಗಳಲ್ಲಿ ತಪ್ಪೇನಿದೆ. ಈ ಬಗ್ಗೆ ಅಂತಿಮವಾಗಿ ನಿರ್ಧಾರ ತೆಗೆದುಕೊಳ್ಳುವುದು ಕಾಂಗ್ರೆಸ್ ಹೈಕಮಾಂಡ್. ನಾವು ಕೇಳದೇ ಇದ್ದರೆ, ಅವರ ಗಮನಕ್ಕೆ ಹೇಗೆ ಹೋಗುತ್ತೆ. ಅಂತಿಮವಾಗಿ ಹೈಕಮಾಂಡ್‌ನವರು ಏನು ನಿರ್ಣಯ ತೆಗೆದುಕೊಳ್ಳುತ್ತಾರೋ ಅದಕ್ಕೆ ನಾವು ಬದ್ಧರಾಗಿರುತ್ತೇವೆ ಎಂದರು. ಹೊಸಬರನ್ನು ಮಂತ್ರಿಗಳನ್ನಾಗಿ ಮಾಡುವುದು, ಸಂಪುಟ ವಿಸ್ತರಣೆ ಮಾಡುವುದು ಮುಖ್ಯಮಂತ್ರಿಗಳು ಹಾಗೂ ಹೈಕಮಾಂಡ್‌ಗೆ ಬಿಟ್ಟಿದ್ದು. ಇಂದು ಹೈಕಮಾಂಡ್ ಜೊತೆ ಹೆಚ್ಚುವರಿ ಡಿಸಿಎಂ ಸ್ಥಾನದ ಬಗ್ಗೆ ಸಿಎಂ ಸಿದ್ದರಾಮಯ್ಯ ಹಾಗೂ ಡಿ.ಕೆ ಶಿವಕುಮಾರ್ ಪ್ರಸ್ತಾಪ ಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ. ಈ ವಿಚಾರ ಹೈಕಮಾಂಡ್ ● 6ನೇ ಪುಟಕ್ಕೆ

ಮೈಸೂರು ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ಫ್ಲೈಓವರ್ ನಿರ್ಮಾಣಕ್ಕೆ ಗಡ್ಕರಿಗೆ ಸಿಎಂ ಮನವಿ

ಮೈಸೂರು ರಿಂಗ್ ರಸ್ತೆಯಲ್ಲಿ 9 ಗ್ರೇಡ್ ಸೆಪರೇಟರ್‌ಗಳ ನಿರ್ಮಾಣಕ್ಕೂ ಅನುಮೋದನೆಗೆ ಕೋರಿಕೆ

ಬೆಂಗಳೂರು, ಜೂ. 28(ಕೆಎಂಶಿ)–ವಾಹನ ದಟ್ಟಣೆ ಇರುವ ರಾಜ್ಯದ ಹೆದ್ದಾರಿಗಳನ್ನು ಉನ್ನತೀಕರಿಸುವಂತೆ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ. ದೆಹಲಿಯಲ್ಲಿಂದು ಗಡ್ಕರಿ ಅವರನ್ನು ಭೇಟಿ ಮಾಡಿದ ಅವರು, ಮೈಸೂರು ನಗರದ ಮಣಿಪಾಲ್ ಆಸ್ಪತ್ರೆ ಜಂಕ್ಷನ್ (ಕೊಲಂಬಿಯ ಏಷ್ಯಾ ಆಸ್ಪತ್ರೆ) ಫ್ಲೈಓವರ್ ನಿರ್ಮಾಣಕ್ಕೆ ಅನುಮೋದನೆ ನೀಡಿ. ಅಲ್ಲದೆ, ಮೈಸೂರು ರಿಂಗ್‌ರಸ್ತೆಯಲ್ಲಿ 9 ಗ್ರೇಡ್ ಸೆಪ ರೇಟರ್‌ಗಳ ನಿರ್ಮಾಣಕ್ಕೆ ಅನುಮೋದನೆ ದೊರಕಿ ಸುವಂತೆ ಕೋರಿದ್ದಾರೆ.



ಈಗಾಗಲೇ ತಾತ್ವಿಕ ಅನುಮೋದನೆ ದೊರೆತಿರುವ ಕೇರಳದ ಕಲ್ಪೆಟ್ಟದಿಂದ ಮಾನಂದವಾಡಿ, ಹೆಚ್.ಡಿ.ಕೋಟೆ, ಜಯಪುರ ಮೂಲಕ ಮೈಸೂರು ಸಂಪರ್ಕಿಸುವ 90 ಕಿ.ಮೀ. ಹೆದ್ದಾರಿ, ಮೈಸೂರಿನಿಂದ ಬನ್ನೂರು ಮೂಲಕ ಮಳವಳ್ಳಿ ಸಂಪರ್ಕಿಸುವ 45 ಕಿ.ಮೀ. ಹೆದ್ದಾರಿ ಹಾಗೂ ಬೆಳಗಾವಿ ಜಿಲ್ಲೆಯ ಸಂಕೇಶ್ವರದಿಂದ ಗೋಕಾಕ–ಯರಗಟ್ಟಿ–ಮನ್ವಳ್ಳಿ ಮೂಲಕ ನರಗುಂದ ಸಂಪರ್ಕಿಸುವ 127 ಕಿ.ಮೀ. ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳಾಗಿ ಉನ್ನತೀಕರಿಸಲು ಮುಖ್ಯಮಂತ್ರಿ ಮನವಿ ಮಾಡಿದರು.

ರಾಷ್ಟ್ರೀಯ ಹೆದ್ದಾರಿ–766, ಕೊಳ್ಳೆಗಾಲ–ಕ್ಯಾಲಿಕಟ್ ನಡುವಿನ 106 ಕಿ.ಮೀ. ರಸ್ತೆಯನ್ನು ಚತುಷ್ಪಥ ಮತ್ತು ಆರು ಪಥದ ಹೆದ್ದಾರಿಯಾಗಿ ಅಭಿವೃದ್ಧಿ ಪಡಿಸುವುದು.

ಸಾರ್ವಜನಿಕ ಸಾರಿಗೆ ನಿಗಮ: ನಿವೃತ್ತ ನೌಕರರಿಗೆ ವೇತನ ಪರಿಷ್ಕರಿಸಿ ಸರ್ಕಾರ ಆದೇಶ

ಬೆಂಗಳೂರು, ಜೂ. 28– ಸಾರ್ವಜನಿಕ ಸಾರಿಗೆ ಬಸ್ ದರ ಏರಿಕೆ ಮಾಡುವ ಪ್ರಸ್ತಾಪದ ಮಧ್ಯೆ ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ನಿವೃತ್ತ ನೌಕರರಿಗೆ ವೇತನ ಪರಿಷ್ಕರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. 2023ರ ಮಾರ್ಚ್‌ನಲ್ಲಿ ನಿವೃತ್ತಿಯಾದ ನೌಕರರಿಗೆ ಶೇ 15 ರಷ್ಟು ಹೆಚ್ಚುವರಿ ನಿವೃತ್ತಿ ವೇತನ ಇನ್ನು ಮುಂದೆ ಸಿಗಲಿದೆ.

2023ರ ಮಾರ್ಚ್‌ನಲ್ಲಿ ನಿವೃತ್ತಿ ಹೊಂದಿದ ಅಧಿಕಾರಿ ಮತ್ತು ನೌಕರರಿಗೆ 2019ರ ಡಿ.31ರಂದು ಅವರು ಪಡೆಯುತ್ತಿದ್ದ ಮೂಲವೇತನ ಪರಿಗಣಿಸಿ ಶೇ. 15 ರಷ್ಟು ಹೆಚ್ಚಿಸಿ ವೇತನ ಶ್ರೇಣಿ ಪರಿಷ್ಕರಿಸಲು ಆದೇಶ ಹೊರಡಿಸಲಾಗಿದೆ.

ನಿವೃತ್ತಿಯಾದ ನೌಕರರಿಗೆ ವೇತನ ಪರಿಷ್ಕರಣೆಯ ಹೆಚ್ಚುವರಿ ಹಣ ನೀಡಲು ನಾಲ್ಕು ಸಾರಿಗೆ ನಿಗಮಗಳಿಗೆ 220 ಕೋಟಿ ರೂ. ಅಗತ್ಯವಿದೆ ಎಂದು ಅಂದಾಜಿಸಲಾಗಿದೆ. 2023ರ ಮಾರ್ಚ್ 1 ರಂದು ಸಂಸ್ಥೆಯ ಸೇವೆಯಲ್ಲಿದ್ದ ಅಧಿಕಾರಿ ನೌಕರರಿಗೆ 2020ರ ಜನವರಿ 1 ರಿಂದ 2023ರ ಫೆಬ್ರವರಿ 28ರ ಅವಧಿಯನ್ನು ಪರಿಗಣಿಸಿ ವೇತನ ನಿಗದಿಪಡಿಬೇಕು.

ವರುಣಾ ಮೇಲ್ಗಾಲುವೆ ಪಿಲ್ಲರ್‌ಗಳ ಡ್ರಿಲ್ ಮೂಲಕ ಕೊರೆದು ಜಾಹೀರಾತು ಫಲಕ ಅಳವಡಿಕೆ;

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಆರಂಭದಲ್ಲೇ ಆತಂಕ


● ಮಂಡ್ಯ, ಮೈಸೂರು ರೈತರ ಜೀವನಾಡಿಗೆ ಅಪಾಯ ● ಮೊದಲೇ ಸೋರುತ್ತಿರುವ ಮೇಲ್ಗಾಲುವೆಗೆ ಮತ್ತೊಂದು ಹಾನಿಗೆ ನಾಂದಿ

ಮೈಸೂರು, ಜೂ.28(ಎಂಕೆ)– ಸಿದ್ದಲಿಂಗಪುರ ಬಳಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಮೇಲೆ ಹಾದು ಹೋಗುವ ವರುಣಾ ಮೇಲ್ಗಾಲುವೆ (ಅಕ್ವಾಡಕ್ಟ್)ಯನ್ನು ಅಸ್ಥಿರಗೊಳಿಸುವ ಯತ್ನ ನಡೆದಿದೆ. ಇದರ ಬಗ್ಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹೌದು! ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ಕೃಷಿ ಭೂಮಿಗೆ ನೀರು ಒದಗಿಸುವ ವರುಣಾ ನಾಲೆಗೆ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲೇ ದೊಡ್ಡ ಕಂಟಕ ಎದುರಾಗಿದ್ದು, ಕಂಡ ಕಂಡಲ್ಲಿ ಜಾಹೀರಾತು ಫಲಕ ಅಳವಡಿಸುವಂತೆ ಈಗ ವರುಣಾ ಮೇಲ್ಗಾಲುವೆ ಪಿಲ್ಲರ್‌ಗಳ ಅಸ್ಥಿರಗೊಳಿಸಲಾಗುತ್ತಿದೆ.

ದ ಏಟ್ರಿಯಂ ಹೋಟೆಲ್ ಪಕ್ಕದಲ್ಲಿ ಹಾದು ಹೋಗುವ ನಾಲೆಯ ಪಿಲ್ಲರ್‌ಗಳ ಮೇಲೆ ಬೃಹತ್ ಹೋರ್ಡಿಂಗ್ ಅಳವಡಿಸಿದ್ದು, ರೈತರ ಹಿತಾಸಕ್ತಿ ದಿಕ್ಕರಿಸುವುದರ ಜೊತೆಗೆ ಜನರ ಪ್ರಾಣಕ್ಕೂ ಕಂಟಕವಾಗಿ ಪರಿಣಮಿಸಿದೆ. ಪಿಲ್ಲರ್‌ಗಳನ್ನು ಡ್ರಿಲ್ ಮಾಡಿ ● 6ನೇ ಪುಟಕ್ಕೆ

> “ಅಕ್ವಾಡಕ್ಟ್ ಸರ್ಕಾರಿ ಸ್ವತ್ತಾಗಿದ್ದು, ಖಾಸಗಿ ಕಂಪನಿಯವರು ಹೋರ್ಡಿಂಗ್ಸ್ ಹಾಕುವುದು ತಪ್ಪು. ಆದರೂ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಆರಂಭದಲ್ಲಿ(ಟೋಲ್‌ಗೇಟ್) ಹಾದು ಹೋಗುವ ವರುಣಾ ನಾಲೆಯ ಮೇಲ್ಗಾಲುವೆ ಪಿಲ್ಲರ್‌ಗಳಿಗೆ ಬೃಹತ್ ಹೋರ್ಡಿಂಗ್ಸ್‌ಗಳನ್ನು ಅಳವಡಿಸಲಾಗಿದೆ. ನೀರು ಹರಿಸುವ ಅತ್ಯಂತ ಸೂಕ್ಷ್ಮ ನಿರ್ಮಾಣದ ಮೇಲೆ ಹೋರ್ಡಿಂಗ್ ಹಾಕಿರುವುದನ್ನು ನೋಡಿದರೆ, ಕನ್ನಂಬಾಡಿ ಅಣೆಕಟ್ಟೆಗೂ ಮೊಳೆ ಹೊಡೆದು ಜಾಹೀರಾತು ಬೋರ್ಡ್ ನೇತು ಹಾಕುವ ಪ್ರಯತ್ನದ ಮೊದಲ ಹೆಜ್ಜೆಯಂತಿದೆ. ಅಕ್ವಾಡಕ್ಟ್‌ನ ಪಿಲ್ಲರ್‌ಗಳಿಗೆ ಮೊಳೆ ಹೊಡೆದು, ಡ್ರಿಲ್ ಮಾಡಿ ಹೋರ್ಡಿಂಗ್ಸ್‌ಗಳನ್ನು ಹಾಕಲಾಗಿದೆ. ಸರ್ಕಾರಿ ಸ್ವತ್ತಿಗೆ ಅದರಲ್ಲೂ ನೀರು ಹರಿಯುವ ಸೂಕ್ಷ್ಮ ನಿರ್ಮಾಣಕ್ಕೆ ಈ ರೀತಿಯ ಹೋರ್ಡಿಂಗ್ಸ್‌ಗಳ ಅಳವಡಿಸುವುದು ಅತ್ಯಂತ ಅಪಾಯಕಾರಿ. ಇಂತಹದಕ್ಕೆ ಅಧಿಕಾರಿಗಳು ಅನುಮತಿ ಕೊಡುವಂತಿಲ್ಲ. ನಾಳೆ ನಾಲೆಯ ಪಿಲ್ಲರ್‌ಗಳು ದುರ್ಬಲಗೊಂಡು ಕುಸಿದು ಬಿದ್ದರೆ ಯಾರು ಹೊಣೆ.
>
> – ಪ್ರಜ್ಞಾವಂತ ನಾಗರಿಕರು



ವರುಣಾ ನಾಲೆಯ ಮೇಲ್ಗಾಲುವೆಯ ಪಿಲ್ಲರ್‌ಗಳ ಮೇಲೆ ಬೃಹತ್ ಹೋರ್ಡಿಂಗ್ಸ್‌ಗಳ ಅಳವಡಿಸಿರುವುದನ್ನು ಕಾಣಬಹುದು.

ಶೇ.50:50ರ ಅನುಪಾತ, ಪ್ರೋತ್ಸಾಹದಾಯಕ ನಿವೇಶನ ಹಂಚಿಕೆ ಹಗರಣ: ಅಧಿಕಾರಿಗಳ ತಂಡದಿಂದ ಸತತ 7 ಗಂಟೆ

ಮುಡಾ ಆಯುಕ್ತರ ವಿಚಾರಣೆ

ಪ್ರಾಧಿಕಾರದ ಕಚೇರಿ, ಆಯುಕ್ತರ ಅಧಿಕೃತ ನಿವಾಸದಿಂದ 140 ಕಡತಗಳು ವಶಕ್ಕೆ

ಎಸ್.ಟಿ. ರವಿಕುಮಾರ್

ಮೈಸೂರು, ಜೂ. 28– ಸುಮಾರು 30ವರ್ಷಗಳಿಂದ 85 ಸಾವಿರಕ್ಕೂ ಅಧಿಕ ಮಂದಿ ಅರ್ಜಿ ಸಲ್ಲಿಸಿ ನಿವೇಶನಕ್ಕಾಗಿ ಕಾಯುತ್ತಿದ್ದರೂ, ಅಧಿಕಾರಿಗಳೇ ಎಲ್ಲವನ್ನೂ ನಿರ್ಧರಿಸಿ, ನಿಯಮ ಧಿಕ್ಕರಿಸಿ ಶೇ.50:50ರ ಅನುಪಾತ ಹಾಗೂ ಪ್ರೋತ್ಸಾಹದಾಯಕ (ಇನ್‌ಸೆಂಟಿವ್) ನಿವೇಶನಗಳನ್ನು ಬೇಕಾಬಿಟ್ಟಿ ಹಂಚಿಕೆ ಮಾಡಿದ್ದು, ಈ ಹಗರಣ ಈಗ ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದೆ.

ಸರ್ಕಾರದ ನಿರ್ದೇಶನವನ್ನು ಧಿಕ್ಕರಿಸಿ ಮೈಸೂರು ವಿಜಯನಗರ, ದಟ್ಟಗಳ್ಳಿ, ಜೆ.ಪಿ.ನಗರ, ಆರ್.ಟಿ.ನಗರ, ಹಂಚ್ಯಾ–ಸಾತಗಳ್ಳಿಯಂತಹ ಪ್ರತಿಷ್ಠಿತ ಬಡಾವಣೆಗಳಲ್ಲಿ ಕೋಟ್ಯಾಂತರ ರೂ. ಬೆಲೆ ಬಾಳುವ 4,500ರಿಂದ 5000 ನಿವೇಶನಗಳನ್ನು ಹಂಚಿಕೆ ಮಾಡುವ ಮೂಲಕ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ಕ್ಕೆ ಸುಮಾರು 5000 ಕೋಟಿ ರೂ. ಆರ್ಥಿಕ ನಷ್ಟ ಉಂಟುಮಾಡಿರುವ ಸಾಧ್ಯತೆಗಳಿದ್ದು, ಈ ಗಂಭೀರ ಹಗರಣವೀಗ ಸರ್ಕಾರದ ಮಟ್ಟದಲ್ಲಿ ಭಾರೀ ಸದ್ದು ಮಾಡುತ್ತಿದೆ.

ಈ ಸಂಬಂಧ ಕೆ.ಆರ್. ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ದೂರು ನೀಡಿದ್ದು, ಸದನದಲ್ಲೂ ಪ್ರಸ್ತಾಪಿಸುವುದಾಗಿ ಹೇಳಿದ್ದಾರೆ. ಅಗತ್ಯ ಕ್ರಮ ವಹಿಸದಿದ್ದಲ್ಲಿ ಮುಡಾ ಬರಿದಾಗಿ ಮುಚ್ಚುವ ಪರಿಸ್ಥಿತಿ ಬರುತ್ತದೆ ಎಂದು ದೂರಿದ್ದಾರೆ. ಈ ಮಧ್ಯೆ ಹಗರಣ ಸಂಬಂಧ 'ಮೈಸೂರು ಮಿತ್ರ'ನಲ್ಲಿ ವಿಸ್ತೃತ ವರದಿ ಪ್ರಕಟವಾಗುತ್ತಿದ್ದಂತೆಯೇ ನಿನ್ನೆ (ಜೂ. 27) ಗುರುವಾರ ಹಿರಿಯ ಐಎಎಸ್ ಅಧಿಕಾರಿ ನೇತೃತ್ವದ ಮೂವರ ತಂಡ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಗೆ ದಿಢೀರ್ ಭೇಟಿ ನೀಡಿ 7 ತಾಸು ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಮತ್ತಿತರ ಅಧಿಕಾರಿಗಳನ್ನು ವಿಚಾರಣೆಗೊಳಪಡಿಸಿ, ಪ್ರಕರಣಕ್ಕೆ ಸಂಬಂಧಿಸಿದ 140 ಕಡತಗಳೊಂದಿಗೆ ರಾತ್ರಿ9 ಗಂಟೆ ವೇಳೆಗೆ ಹಿಂದಿರುಗಿದ್ದಾರೆ.

ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ನಿರ್ದೇಶನದಂತೆ ಬೆಂಗಳೂರು ನಗರ ಮತ್ತು ಗ್ರಾಮಾಂತರ ಯೋಜನಾ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳ ಆಯುಕ್ತರಾದ ಹಿರಿಯ ಐಎಎಸ್ ಅಧಿಕಾರಿ ವೆಂಕಟಾಚಲಪತಿ, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ನಿರ್ದೇಶಕ ಎನ್.ಕೆ. ತಿಪ್ಪೇಸ್ವಾಮಿ ● 6ನೇ ಪುಟಕ್ಕೆ



ಜಿ.ಟಿ.ದಿನೇಶ್‌ಕುಮಾರ್



ಮುಡಾ ಕಚೇರಿ



ಟಿ.ಎಸ್.ಶ್ರೀವತ್ಸ

> “ಮುಖ್ಯಮಂತ್ರಿ ಸಿದ್ದರಾಮಯ್ಯ ದಕ್ಷ, ಪ್ರಾಮಾಣಿಕ ಆಡಳಿತಗಾರರು ಎಂಬುದು ಆಡಳಿತಾರೂಢ ಮಾತ್ರವಲ್ಲ ವಿಪಕ್ಷಗಳ ನಾಯಕರ ಅಭಿಪ್ರಾಯ, ವಿಶ್ವಾಸವೂ ಆಗಿದೆ. ಆದರೆ ಅವರ ತವರು ಜಿಲ್ಲೆಯ ಐತಿಹಾಸಿಕ ಹಾಗೂ ಪ್ರತಿಷ್ಠಿತ ಪ್ರಾಧಿಕಾರದಲ್ಲಿ ದಾಖಲೆಯ ಅವ್ಯವಹಾರ ನಡೆದಿದ್ದರೂ ಏನೂ ಕ್ರಮ ಕೈಗೊಳ್ಳದೇ ಇರುವುದು ಹಲವು ಸಾರ್ವಜನಿಕ ವಲಯದಲ್ಲಿ ಅನುಮಾನಗಳಿಗೆ ಆಸ್ಪದ ಮಾಡಿಕೊಟ್ಟಿದೆ.

ಮುಡಾದಲ್ಲಿ ಹೀಗೂ ಉಂಟು...

ಮಧ್ಯವರ್ತಿಗಳ ಮೊರೆ ಹೋದರೆ ಭಾರೀ ಬೆಲೆ ನಿವೇಶನವನ್ನು ಅರ್ಧ ಬೆಲೆಗೂ ದಕ್ಕಿಸಿಕೊಳ್ಳಬಹುದು...!?

● ಇ–ಆಕ್ಷನ್ ಸೈಟ್ ಬೇಕೆಂದರೆ ಅದಕ್ಕೂ 'ಆಕ್ಷನ್ ಕಟ್' ಹೇಳುವವರಿದ್ದಾರೆ ● ಸಿಎ ನಿವೇಶನ ಮಂಜೂರಾತಿದಾರರ 'ನೋಟೀಸ್' ಮೂಲಕ ಹೆದರಿಸಿ ಹಣ ವಸೂಲಿ!

ಮೈಸೂರು, ಜೂ.28– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಬ್ರಹ್ಮಾಂಡ ಭ್ರಷ್ಟಾಚಾರ ಬಗೆದಷ್ಟೂ ಬಯಲಾಗುತ್ತಿದೆ. ಮಧ್ಯವರ್ತಿಗಳ ಮೊರೆ ಹೋದರೆ ಭಾರೀ ಬೆಲೆಯ ಆಸ್ತಿಯನ್ನು ಅರ್ಧಬೆಲೆಗೂ ದಕ್ಕಿಸಿಕೊಳ್ಳಬಹುದು ಎಂಬ ಮಾತುಗಳು ಮುಡಾ ಪಡಸಾಲೆಯಲ್ಲೇ ಕೇಳಿ ಬರುತ್ತಿವೆ.

ಮುಡಾ ಅಭಿವೃದ್ಧಿಪಡಿಸಿ, ನಿವೇಶನ ಹಂಚಿಕೆ ಮಾಡಿ ನಾಲ್ಕೈದು ದಶಕಗಳಾಗಿರುವ ಬಡಾವಣೆಗಳು ಸೇರಿದಂತೆ ಅತ್ಯಂತ ಪ್ರತಿಷ್ಠಿತ ಬಡಾವಣೆಗಳಲ್ಲಿರುವ ಖಾಲಿ ನಿವೇಶನಗಳ ಲೂಟಿಯಾಗುತ್ತಿದೆ. ಇಂತಹ ನಿವೇಶನಗಳನ್ನು ಪ್ರಭಾವಿಗಳಿಗೆ ಅತ್ಯಂತ ಕಡಿಮೆ ಬೆಲೆಗೆ ಮಂಜೂರು ಮಾಡಿ ತಮ್ಮ ಅಕ್ರಮಕ್ಕೆ ಅವರ ಶ್ರೀರಕ್ಷೆ ಪಡೆಯುವುದು, 'ನಕಲಿ' ಕರಾಮತ್ತಿನ ಮೂಲಕ ಶ್ರೀಮಂತರಿಗೆ ಮಾರಾಟ ಮಾಡಿ, ಹಣ ದೋಚುವುದು ಎಗ್ಗಿಲ್ಲದೆ ನಡೆಯುತ್ತಿದೆ ಎಂಬ ಗಂಭೀರ ಆರೋಪವೂ ಚರ್ಚೆಯಾಗುತ್ತಿದೆ.

ಶೇ.50:50 'ಮದಾನ್': ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸದೆ ಹಾಗೂ ಪರಿಹಾರ ನೀಡದೆ ಸದರಿ ಜಮೀನನ್ನು ಬಳಸಿಕೊಳ್ಳುವ ಪ್ರಕರಣಗಳಲ್ಲಿ ಶೇ. 50:50ರ ಅನುಪಾತದಲ್ಲಿ ನಿವೇಶನ ನೀಡುವುದರಲ್ಲಿ ಭ್ರಷ್ಟಾಚಾರ ನಡೆದಿದೆ. ಬಡಾವಣೆ ನಿರ್ಮಿಸಿ, ● 6ನೇ ಪುಟಕ್ಕೆ

ಮೈಸೂರು ಮಿತ್ರ ಶನಿವಾರ 29 ಜೂನ್ 2024

ರಾಜ್ಯ ಚುನಾವಣಾ ಆಯೋಗದ ಆಯುಕ್ತರಾಗಿ ನ್ಯಾಯಾಧೀಶರಾದ ಜಿ.ಎಸ್.ಸಂಗ್ರೇಶಿ ನೇಮಕ



ಬೆಂಗಳೂರು, ಜೂ.28– ನ್ಯಾಯಾಧೀಶರಾದ ಜಿ.ಎಸ್.ಸಂಗ್ರೇಶಿಯವರನ್ನು ರಾಜ್ಯ ಚುನಾವಣಾ ಆಯೋಗದ ಆಯುಕ್ತರಾಗಿ ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಈ ಹಿಂದೆ ಜಿ.ಎಸ್.ಸಂಗ್ರೇಶಿಯವರು ಮೈಸೂರು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾಗಿದ್ದರು. ನಂತರ ಅವರು ರಾಜ್ಯ ಕಾನೂನು ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದರು. ಜಿ.ಎಸ್. ಸಂಗ್ರೇಶಿಯವರು ಮಾನವೀಯ ಕಳಕಳಿಯುಳ್ಳ ನ್ಯಾಯಾಧೀಶರು ಅಂತಲೇ ಜನಜನಿತರಾಗಿದ್ದರು. ಇದರ ಜೊತೆಗೆ ಅವರು ಶಿಸ್ತಿನ ಸಿಪಾಯಿಯಾಗಿದ್ದರು. 10 ತಿಂಗಳ ಹಿಂದೆ ಮೈಸೂರು ಜಿಲ್ಲಾ ಸತ್ರ ನ್ಯಾಯಾಧೀಶರಾಗಿ ನಿಯೋಜನೆಗೊಂಡಿದ್ದರು. ಇವರ ಕಾರ್ಯಾವಧಿಯಲ್ಲಿ ಜನರಿಗೆ ತ್ವರಿತಗತಿಯಲ್ಲಿ ನ್ಯಾಯವನ್ನು ಒದಗಿಸುವ ನಿಟ್ಟಿನಲ್ಲಿ ಹಲವು ಸುಧಾರಣೆಗಳನ್ನು ತಂದಿದ್ದರು. ಅದರಲ್ಲೂ ಇವರ ಕಾರ್ಯಾವಧಿಯಲ್ಲಿ ತಮ್ಮ ನ್ಯಾಯಾಲಯದ ಸಿಬ್ಬಂದಿ ಹಾಗೂ ವಕೀಲರ ನಡುವೆ ಸಮನ್ವಯತೆ ಸೌಹಾರ್ದಯೆಯನ್ನು ಮೂಡಿಸುವಲ್ಲಿ ಯಶಸ್ವಿಯಾಗಿದ್ದರು. ಇವರ ಈ ಕಾರ್ಯ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು. ಶಿಸ್ತಿನ ಸಿಪಾಯಿಯಾಗಿದ್ದ ಜಿ.ಎಸ್.ಸಂಗ್ರೇಶಿಯವರು ಸಮಯ ಪರಿಪಾಲನೆಗೆ ಹೆಚ್ಚಿನ ಮಹತ್ವವನ್ನು ನೀಡುತ್ತಿದ್ದರು. ತಾವು ಮಾತ್ರವಲ್ಲ ತಮ್ಮ ನ್ಯಾಯಾಂಗ ಸಿಬ್ಬಂದಿಯಲ್ಲೂ ಶಿಸ್ತು ಮೂಡಿಸುವಲ್ಲಿ ಯಶಸ್ವಿಯಾಗಿದ್ದರು. ತಮ್ಮ ಸೇವೆಯ 10 ತಿಂಗಳ ಅವಧಿಯಲ್ಲಿ ಲೋಕ ಅದಾಲತ್ ಮೂಲಕ ನೂರಾರು ಪ್ರಕರಣಗಳನ್ನು ಇತ್ಯರ್ಥಗೊಳಿಸುವಲ್ಲಿ ಯಶಸ್ವಿಯಾಗಿದ್ದರು. ಅದರಲ್ಲೂ ಸಣ್ಣಪುಟ್ಟ ಮನಸ್ತಾಪದಿಂದ ದೂರಾಗುತ್ತಿದ್ದ ದಂಪತಿ ಜೊತೆ ಖುದ್ದು ಮಾತನಾಡಿ ಅವರ ಮನವೊಲಿಸಿ ಅವರನ್ನು ಒಂದು ಮಾಡಿ ಹೊಸ ಬಾಳಿಗೆ ಮುನ್ನುಡಿ ಬರೆದಿದ್ದು ವಿಶೇಷವಾಗಿತ್ತು ನ್ಯಾಯಾಲಯ ಸದಾ ಜನರ ಸೇವೆಗಿರುವ ದೇವಾಲಯ ಎಂದು ನಂಬಿದ್ದ ಅವರು ನ್ಯಾಯಾಲಯದಲ್ಲಿ ಜನಸ್ನೇಹಿ ವಾತಾವರಣವನ್ನು ಮೂಡಿಸಿದ್ದರು.

ಹಿಂದೆ 2008ರಲ್ಲಿ ಜಿ.ಎಸ್.ಸಂಗ್ರೇಶಿಯವರು ಮೈಸೂರು ಜಿಲ್ಲೆಯ ಪ್ರಧಾನ ಸಿವಿಲ್ ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸಿದ್ದರು. ಇದಾದ ನಂತರ ತುಮಕೂರು, ಗದಗ, ಕೊಡಗು ಬೆಂಗಳೂರು ಸೇರಿ ವಿವಿಧ ಜಿಲ್ಲೆಗಳಲ್ಲಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದ ಹೆಗ್ಗಳಿಕೆ ಇವರದ್ದು.

ಇದಾದ ನಂತರ ರಾಜ್ಯದ ಕಾನೂನು ಕಾರ್ಯದರ್ಶಿಯಾಗಿದ್ದ ಜಿ.ಎಸ್.ಸಂಗ್ರೇಶಿ ಅವರನ್ನು ಹೆಚ್ಚುವರಿಯಾಗಿ ರಾಜ್ಯ ಅಭಿಯೋಜನಾ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಳ್ಳಲು ರಾಜ್ಯ ಸರ್ಕಾರ ನಿರ್ದೇಶನ ನೀಡಿತ್ತು. ಪ್ರಸ್ತುತ ಅವರು ನಿರ್ವಹಿಸುತ್ತಿದ್ದ ರಾಜ್ಯ ಕಾನೂನು ಕಾರ್ಯದರ್ಶಿ ಹುದ್ದೆಯ ಜೊತೆಗೆ ಹೆಚ್ಚುವರಿಯಾಗಿ ಈ ಜವಾಬ್ದಾರಿಯನ್ನು ಸಹಾ ಅವರಿಗೆ ನೀಡಲಾಗಿತ್ತು. ಹೆಚ್ಚುವರಿಯಾಗಿ ರಾಜ್ಯ ಅಭಿಯೋಜನಾ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡ ಜಿ.ಎಸ್.ಸಂಗ್ರೇಶಿ ಅವರು ಜಿಲ್ಲಾ ಪ್ರಧಾನ ಸತ್ರ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿ ಈ ಹುದ್ದೆ ಅಲಂಕರಿಸಿದ ಮೊದಲಿಗರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಚಿಕ್ಕಕುಂಬಿ ಗ್ರಾಮದ ರೈತ ಕುಟುಂಬದಲ್ಲಿ ಜನಿಸಿದ್ದ ಅವರು ಗ್ರಾಮೀಣ ಪ್ರದೇಶದ ಜನರು, ಬಡವರು ರೈತರ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದಾರೆ. ಇದೀಗ ಇವರ ಜನಪರ ಕಾಳಜಿ, ಸಮಯ ಪರಿಪಾಲನೆ, ಶಿಸ್ತು ಅವರ ಬದ್ಧತೆಗೆ ಮಾನ್ಯತೆ ನೀಡಿ ಅವರಿಗೆ ಹೊಸ ಜವಾಬ್ದಾರಿ ನೀಡಲಾಗಿದೆ.

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಕೋಟ್ಯಾಂತರ ರೂ. ಹಗರಣ ಖಂಡಿಸಿ

ಡಿಸಿ ಕಚೇರಿ ಮುತ್ತಿಗೆಗೆ ಯತ್ನಿಸಿದ ಬಿಜೆಪಿ ಕಾರ್ಯಕರ್ತರ ಬಂಧನ, ಬಿಡುಗಡೆ

ಮೈಸೂರು, ಜೂ.28(ಜಿಎ)–ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ 187 ಕೋಟಿ ರೂ ದುರುಪ ಯೋಗವಾಗಿದೆ ಎಂದು ಆಪಾದಿಸಿ ಮೈಸೂರು ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಮೈಸೂರು ನಗರ ಮತ್ತು ಗ್ರಾಮಾಂತರ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ, ಬಿಡುಗಡೆ ಮಾಡಿದ್ದಾರೆ.

ಹಗರಣವನ್ನು ಖಂಡಿಸಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜೇಯೇಂದ್ರ ರಾಜ್ಯಾದಾದ್ಯಂತ ಪ್ರತಿಭಟನೆಗೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಮೈಸೂರಿನ ಹಳೆ ನಂದಿನಿ ಡೈರಿ ಮುಂಭಾಗ ಜಮಾಯಿಸಿದ ಸಾವಿರಾರು ಬಿಜೆಪಿ ಕಾರ್ಯಕರ್ತರು ರಾಜ್ಯ ಸರ್ಕಾರ ಮತ್ತು ಮುಖ್ಯಮಂತ್ರಿಗಳ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.



ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಅನುದಾನ ದುರುಪಯೋಗವಾಗಿದೆ ಎಂದು ಆಪಾದಿಸಿ ಮೈಸೂರಿನ ಸಿದ್ದಾರ್ಥನಗರದಲ್ಲಿರುವ ಹಳೆ ನಂದಿನಿ ಡೈರಿ ಮುಂಭಾಗ ಮೈಸೂರು ನಗರ ಮತ್ತು ಗ್ರಾಮಾಂತರ ಬಿಜೆಪಿ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು.

ನಂತರ ಬೃಹತ್ ಮೆರವಣಿಗೆ ಮೂಲಕ ತೆರಳಿ ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರನ್ನು ಪೊಲೀಸರು ತಡೆಯಲು ಮುಂದಾದರು. ಪೊಲೀಸರು ಅಳವಡಿಸಿದ್ದ ಬ್ಯಾರಿಕೇಡ್‌ಗಳನ್ನು ತಳ್ಳಿ ನುಗ್ಗಲು ಯತ್ನಿಸಿದಾಗ ಪೊಲೀಸರು ಪ್ರತಿಭಟನಕಾರರನ್ನು ಬಂಧಿಸಿ, ನಂತರ ಬಿಡುಗಡೆ ಮಾಡಿದರು. ಈ ವೇಳೆ ಶಾಸಕ ಶ್ರೀವತ್ಸ ಮಾತನಾಡಿ, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಭಾರೀ ಭ್ರಷ್ಟಾಚಾರ ನಡೆದಿದೆ. ಪರಿಶಿಷ್ಟ ಪಂಗಡದ ಬಡವರ 187 ಕೋಟಿ ರೂ.ಗಳ ಅನುದಾನವನ್ನು ಸಂಶಯಾತ್ಮಕ ಖಾತೆಗಳಿಗೆ ವರ್ಗಾವಣೆ ಮಾಡಿದ್ದು, ತೆಲಂಗಾಣ ಚುನಾವಣೆಗೆ ಬಳಸಿಕೊಂಡಿರುವ ಅನುಮಾನವಿದೆ. ಇದಕ್ಕೆ ಸಾಕ್ಷಿಯಂತೆ ತೆಲಂಗಾಣದ ಕಾಂಗ್ರೆಸ್ ಮುಖಂಡನ ಮನೆಯಲ್ಲಿ 30 ಕೋಟಿ ಹಣವನ್ನು ವಶಪಡಿಸಿಕೊಳ್ಳಲಾಗಿದೆ. ಈ ಪ್ರಕರಣದಲ್ಲಿ ನಿಗಮದ ಅಧ್ಯಕ್ಷರ ತಲೆದಂಡ ಹಾಗೂ ಅಧಿಕಾರಿಯ ಜೀವ ಬಲಿಯಾಗಿದೆ. ಆದರೆ, ಇದಕ್ಕೆ ಮುಖ್ಯಮಂತ್ರಿಗಳೇ ನೇರ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಹಾಗೂ ಪ್ರಕರಣವನ್ನು ಸಿಬಿಐಗೆ ವಹಿಸಬೇಕೆಂದು ಆಗ್ರಹಿಸಿದರು.

ಮಾಜಿ ಶಾಸಕ ಹಾಗೂ ಬಿಜೆಪಿ ನಗರ ಅಧ್ಯಕ್ಷರೂ ಆದ ಎಲ್.ನಾಗೇಂದ್ರ ಮಾತನಾಡಿ, ಕಾಂಗ್ರೆಸ್ ಸರ್ಕಾರ ತಮ್ಮ ಪುಕ್ಕಟ್ಟೆ ಗ್ಯಾರಂಟಿಗಳ ಅನುಷ್ಠಾನಕ್ಕೆ ನಿಗಮ ಮಂಡಳಿಗಳ ಮತ್ತು ಪರಿಶಿಷ್ಟ ವರ್ಗದವರ ಹಣವನ್ನು ಬಳಸಿಕೊಳ್ಳುತ್ತಿರುವುದು ಖಂಡನೀಯ. ಮುಖ್ಯಮಂತ್ರಿಗಳೇ ಹಣಕಾಸಿನ ನಿರ್ವಹಣೆ ನೋಡಿಕೊಳ್ಳುತ್ತಿದ್ದು, ಅವರ ಕಣ್ಣು ತಪ್ಪಿಸಿ ಈ ರೀತಿ ಹಗರಣ ನಡೆಯಲು ಸಾಧ್ಯವಿಲ್ಲ. ಆದ್ದರಿಂದ ಮುಖ್ಯಮಂತ್ರಿಗಳು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ರಾಜ್ಯ ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕೋಟೆ ಕೃಷ್ಣನಾಯಕ, ಮೈಲ್ಯಾಕ್ ಮಾಜಿ ಅಧ್ಯಕ್ಷ ಫಣೀಶ್, ವಕ್ತಾರ ಮಹೇಶ್, ನಗರ ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಬಿ.ಎಂ.ರಘು, ಗಿರಿಧರ್, ಆರ್.ಸೋಮಶೇಖರ್, ಮುದ್ದುಕೃಷ್ಣ, ಚಿಕ್ಕರಂಗನಾಯಕ ಉದ್ಬೂರು ಉಮೇಶ್, ಮಾಜಿ ಉಪಮೇಯರ್ ಶೈಲೇಂದ್ರ, ಮಹೇಶ್ ರಾಜೇ ಅರಸ್, ಲೋಹಿತ್, ರಾಕೇಶ್, ಮಹೇಶ್ ಸಾವಿರಾರು ಕಾರ್ಯ ಕರ್ತರು ಪಾಲ್ಗೊಂಡಿದರು.

ರಾಜ್ಯ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ನಿರಂತರ ಹೋರಾಟ

● ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಘೋಷಣೆ ● ವಾಲ್ಮೀಕಿ ನಿಗಮದ ಹಣ ಅಕ್ರಮ ವರ್ಗಾವಣೆ; ನಾಗೇಂದ್ರ ರಾಜೀನಾಮೆಯಿಂದ ಎಲ್ಲಾ ಮುಗಿದಿಲ್ಲ

ಬೆಂಗಳೂರು, ಜೂ. 28(ಕೆಎಂಶಿ)– ರಾಜ್ಯ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಹೋರಾಟ ಮುಂದುವರಿಯಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಇಂದಿಲ್ಲಿ ತಿಳಿಸಿದ್ದಾರೆ.

ಮಹರ್ಷಿ ವಾಲ್ಮೀಕಿ ನಿಗಮದ ಹಣ ಅಕ್ರಮ ವರ್ಗಾವಣೆ ಹಾಗೂ ಇನ್ನಿತರ ವಿಷಯಗಳ ವಿರುದ್ಧ ಜಿಲ್ಲಾಧಿಕಾರಿ ಕಚೇರಿ ಮುತ್ತಿಗೆ ಹೋರಾಟ ಸಂದರ್ಭದಲ್ಲಿ ಮಾತನಾಡಿದ ಅವರು, ಸಚಿವ ನಾಗೇಂದ್ರ ರಾಜೀನಾಮೆ ಕೊಟ್ಟಾಕ್ಷಣ ಪ್ರಕರಣ ಮುಗಿಯುವುದಿಲ್ಲ, ಭ್ರಷ್ಟಾಚಾರ ಹಗರಣವನ್ನು ಅಧಿಕಾರಿ ಮೇಲೆ ಹೊರಿಸಿ ತೇಪೆ ಹಾಕುವ ಕೆಲಸಕ್ಕೆ ಮುಖ್ಯಮಂತ್ರಿ ಮುಂದಾಗಿದ್ದಾರೆ ಎಂದು ಆರೋಪಿಸಿದರು.



ನಾಗೇಂದ್ರ ಆಪ್ತರ ಬೆದರಿಕೆ ಬಗ್ಗೆ ಆರೋಪಿ ಸತ್ಯನಾರಾಯಣ ವರ್ಮಾ ಕೋರ್ಟ್‌ನಲ್ಲಿ ಹೇಳಿಕೆ ನೀಡುವ ಮೂಲಕ ಗಂಭೀರ ಆರೋಪ ಮಾಡಿದ್ದಾರೆ. ಕೋರ್ಟ್ ಸಹ ಸರ್ಕಾರಕ್ಕೆ ಛೀಮಾರಿ ಹಾಕಿದೆ. ಇದುವರೆಗೂ ನಾಗೇಂದ್ರ ಅವರನ್ನು ಎಸ್‌ಐಟಿ ವಿಚಾರಣೆಗೆ ಒಳಪಡಿಸಿಲ್ಲ. ಪ್ರಕರಣದಲ್ಲಿ ಅಧಿಕಾರಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದರು.

ಪೆಟ್ರೋಲ್, ಡೀಸೆಲ್, ಹಾಲಿನ ಬೆಲೆ ಎಲ್ಲಾ ಹೆಚ್ಚಾಗಿದೆ, ಸಿದ್ದರಾಮಯ್ಯ ಅದೆಷ್ಟು ದಿನ ಮುಖ್ಯಮಂತ್ರಿ ಆಗಿರುತ್ತಾರೋ ತಿಳಿಯದು. ಬೆಲೆ ಏರಿಕೆ ಬಗ್ಗೆ ಸಚಿವರು ಉಡಾಫೆ ಮಾತನಾಡುತ್ತಾರೆ. ಕಾಂಗ್ರೆಸ್ ಆಡಳಿತದಿಂದ ಜನ ಬೇಸತ್ತಿದ್ದಾರೆ. ಕಾಂಗ್ರೆಸ್ ಬಗ್ಗೆ ವಿಶ್ವಾಸ ಕಡಿಮೆಯಾಗಿದೆ.

ಹಾಲಿನ ದರ ಏರಿಕೆ ಪ್ರತಿಭಟಿಸಿ ರೈತ ಮೋರ್ಚಾ ನಾಳೆ ಹೋರಾಟ ನಡೆಸಲಿದೆ ಮುಂದೆ ಇನ್ನೂ ಹೋರಾಟದ ದಿನಗಳಿವೆ. ಸರ್ಕಾರ ಬದುಕಿದೆಯೇ ಎಂದು ಜನರು ಕೇಳುವಂತಾಗಿದೆ. ಲೋಕಸಭಾ ಚುನಾವಣೆ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಒಬ್ಬರಿಗೊಬ್ಬರು ರಸ್ತೆಯಲ್ಲಿ ನಿಂತು ಹೊಡೆದಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಚನ್ನಪಟ್ಟಣ ವಿಧಾನಸಭಾ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಯಾರೆಂಬುದು ಮುಖ್ಯ ಅಲ್ಲ, ಅಭ್ಯರ್ಥಿ ಯಾರೇ ಆದರೂ ಬಿಜೆಪಿ–ಜೆಡಿಎಸ್ ಒಟ್ಟಾಗಿ ಚುನಾವಣೆ ಎದುರಿಸಿ ಗೆಲ್ಲುತ್ತೇವೆ, ಶಿಗ್ಗಾಂವಿ, ಸಂಡೂರು ಕ್ಷೇತ್ರಗಳಲ್ಲೂ ಗೆಲ್ಲುತ್ತೇವೆ.

ಜು.2ರಂದು ಫ.ಗು.ಹಳಕಟ್ಟಿಯವರ ಜನ್ಮದಿನಾಚರಣೆ

ಮೈಸೂರು.ಜೂ.28– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವತಿಯಿಂದ ಜುಲೈ 2 ರಂದು ಬೆಳಗ್ಗೆ 10 ಗಂಟೆಗೆ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ ಡಾ.ಫ.ಗು.ಹಳಕಟ್ಟಿಯವರ ಜನ್ಮದಿನ, ವಚನ ಸಾಹಿತ್ಯ ಸಂರಕ್ಷಣಾ ದಿನಚರಣೆ–2024 ಹಾಗೂ ವಿಚಾರ ಸಂಕಿರಣವನ್ನು ಆಯೋಜಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಘನ ಉಪಸ್ಥಿತಿ ಇರಲಿದ್ದು, ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಚಿವ ಡಾ.ಹೆಚ್.ಸಿ ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ. ಹರೀಶ್‌ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷರು ಹಾಗೂ




ಹೆಚ್.ಡಿ ಕೋಟೆ ವಿಧಾನ ಸಭಾ ಕ್ಷೇತ್ರದ ಶಾಸಕ ಅನಿಲ್‌ಕುಮಾರ್ ಸಿ, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ ರಮೇಶ್ ಬಂಡಿ ಸಿದ್ದೇಗೌಡ ಹಾಗೂ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಗೌರವ ಉಪಸ್ಥಿತರಿರಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನಿಲ್ ಬೋಸ್ ಆಗಮಿಸಲಿದ್ದಾರೆ. ಶಾಸಕರಾದ ತನ್ವೀರ್‌ಸೇಠ್, ಜಿ.ಟಿ.ದೇವೇಗೌಡ, ರವಿಶಂಕರ್ ಡಿ, ಟಿ.ಎಸ್. ಶ್ರೀವತ್ಸ, ಜಿ.ಡಿ.ಹರೀಶ್‌ಗೌಡ, ದರ್ಶನ್ ಧೃವನಾರಾಯಣ್, ವಿಧಾನಪರಿಷತ್‌ನ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ. ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ ಸಮಾರಂಭದ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಪೋಕ್ಸೋ ಪ್ರಕರಣ: ಮಾಜಿ ಸಿಎಂ ಯಡಿಯೂರಪ್ಪ ಮಧ್ಯಂತರ ಜಾಮೀನು ಅವಧಿ ವಿಸ್ತರಣೆ

ಬೆಂಗಳೂರು: ಅಪ್ರಾಪ್ತ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಬಿಜೆಪಿ ಹಿರಿಯ ನಾಯಕ, ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರ ಮಧ್ಯಂತರ ಜಾಮೀನು ಅವಧಿಯನ್ನು ಹೈಕೋರ್ಟ್ ಶುಕ್ರವಾರ ವಿಸ್ತರಣೆ ಮಾಡಿದೆ.



ಮಾಜಿ ಸಿಎಂ ಯಡಿಯೂರಪ್ಪ ಅವರ ವಿರುದ್ಧ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ(ಪೋಕ್ಸೋ) ಅಡಿ ಕೇಸ್ ದಾಖಲಿಸಲಾಗಿದೆ. ಪ್ರಕರಣ ರದ್ದು ಕೋರಿ ಯಡಿಯೂರಪ್ಪ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್, ಇದಕ್ಕೆ ಆಕ್ಷೇಪಣೆ ಸಲ್ಲಿಸಲು ಸಿಐಡಿ ಎಸ್‌ಪಿಪಿಗೆ ಸೂಚನೆ ನೀಡಿ ಮುಂದಿನ ವಿಚಾರಣೆಯನ್ನು ಎರಡು ವಾರ ಮುಂದೂಡಿದೆ. ಅಲ್ಲದೆ ಆರೋಪಿಯ ಮಧ್ಯಂತರ ಜಾಮೀನು ಅವಧಿ ವಿಸ್ತರಿಸಿ ಆದೇಶ ಹೊರಡಿಸಿದೆ.

ಇನ್ನು ಈ ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಪೊಲೀಸರು ಗುರುವಾರ ಯಡಿಯೂರಪ್ಪ ಅವರ ವಿರುದ್ಧ ನ್ಯಾಯಾಲಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ. ಮಾಜಿ ಸಿಎಂ ಯಡಿಯೂರಪ್ಪ ತನ್ನ ಮಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿ ಸಂತ್ರಸ್ತ ಬಾಲಕಿ ತಾಯಿ ಸದಾಶಿವನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಈ ದೂರಿನ ಆಧಾರದ ಮೇಲೆ ಪೊಲೀಸರು ಯಡಿಯೂರಪ್ಪ ಅವರ ವಿರುದ್ಧ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ(ಪೋಕ್ಸೋ) ಅಡಿ ಪ್ರಕರಣ ದಾಖಲಿಸಿದ್ದರು. ನಂತರ ಈ ಪ್ರಕರಣವನ್ನು ಸರ್ಕಾರ ಸಿಐಡಿ ತನಿಖೆಗೆ ವಹಿಸಿತ್ತು.

ಪ್ರಜ್ವಲ್ ರೇವಣ್ಣ ಪೆನ್ ಡ್ರೈವ್ ಹಂಚಿಕೆ ಪ್ರಕರಣ

ಮಾಜಿ ಶಾಸಕ ಪ್ರೀತಂ ಗೌಡಗೆ ಬಂಧನದಿಂದ ರಕ್ಷಣೆ ನೀಡಿದ ಹೈಕೋರ್ಟ್

ಬೆಂಗಳೂರು: ಹಾಸನ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾದ ಅಶ್ಲೀಲ ವಿಡಿಯೋಗಳನ್ನು ಒಳಗೊಂಡ ಪೆನ್ ಡ್ರೈವ್ ಹಂಚಿಕೆ ಪ್ರಕರಣದಲ್ಲಿ ಬಿಜೆಪಿ ಮಾಜಿ ಶಾಸಕ ಪ್ರೀತಂ ಗೌಡಗೆ ಹೈಕೋರ್ಟ್ ಶುಕ್ರವಾರ ಬಂಧನದಿಂದ ರಕ್ಷಣೆ ನೀಡಿದೆ.



ವಿಡಿಯೋ ಹಂಚಿಕೆ ಆರೋಪದ ಮೇಲೆ ಮಾಜಿ ಶಾಸಕ ಪ್ರೀತಂ ಗೌಡ, ಸೇರಿದಂತೆ ಇತರ ಮೂವರ ವಿರುದ್ಧ ಎಸ್‌ಐಟಿ ಪ್ರಕರಣ ದಾಖಲಿಸಿತ್ತು. ಪ್ರೀತಂ ಗೌಡ ವಿರುದ್ಧ ಪೆನ್‌ಡ್ರೈವ್ ಹಂಚಿಕೆ ಆರೋಪ ಕೇಳಿ ಬಂದಿತ್ತು. ಇದಕ್ಕೆ ಪೂರಕ ಎಂಬಂತೆ ಅವರ ಇಬ್ಬರ ಆಪ್ತರನ್ನು ಎಸ್‌ಐಟಿ ಬಂಧಿಸಿದೆ. ಬಂಧನ ಭೀತಿಯಲ್ಲಿ ಪ್ರೀತಂ ಗೌಡ ಅವರು ಬಂಧನದಿಂದ ರಕ್ಷಣೆ ಕೋರಿ ಹೈಕೋರ್ಟ್ ಮೊರೆ ಹೋಗಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಹೈಕೋರ್ಟ್, ಪ್ರೀತಂ ಗೌಡ ವಿರುದ್ಧದ ತನಿಖೆಗೆ ತಡೆ ನೀಡಲು ನಿರಾಕರಿಸಿದೆ. ಆರೋಪಿಯ ವಿರುದ್ಧ ಎಸ್‌ಐಟಿ ತನಿಖೆ ಮುಂದುವರಿಸಬಹುದು. ವಿಚಾರಣೆಗೆ ಸಹಕರಿಸುವಂತೆ ಅರ್ಜಿದಾರ ಪ್ರೀತಂಗೌಡಗೆ ಹೈಕೋರ್ಟ್ ಸೂಚನೆ ನೀಡಿದೆ.

ಪ್ರಜ್ವಲ್ ರೇವಣ್ಣ ಅವರ ಪೆನ್‌ಡ್ರೈವ್ ರಿಲೀಸ್ ಮಾಡಿದ್ದು ಯಾರು ಎನ್ನುವುದರ ಬಗ್ಗೆ ಈಗಾ ಗಲೇ ಎಸ್‌ಐಟಿ ತನಿಖೆ ನಡೆಸುತ್ತಿದೆ. ಕೆಲ ಶಂಕಿತರನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸಿದೆ. ಆದರೆ ಸಂತ್ರಸ್ತ ಮಹಿಳೆಯೊಬ್ಬರು ಖುದ್ದು ಪ್ರಜ್ವಲ್ ರೇವಣ್ಣ, ಪ್ರೀತಂಗೌಡ ಸೇರಿದಂತೆ ನಾಲ್ವರ ವಿರುದ್ಧ ದೂರು ನೀಡಿದ್ದಾರೆ. ಮಹಿಳೆ ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿದ್ದ ಬೆಂಗಳೂರಿನ ಸೈಬರ್ ಕ್ರೈಂ ಪೊಲೀಸರು, ಪ್ರೀತಂ ಗೌಡ ವಿರುದ್ಧ ಕಠಿಣ ಸೆಕ್ಷನ್‌ಗಳನ್ನೇ ಹಾಕಿದ್ದಾರೆ.

ನಾಳೆ ಕಣ್ಣಿನ ಉಚಿತ ತಪಾಸಣಾ ಶಿಬಿರ


ಮೈಸೂರು, ಜೂ.28–ಜಿಲ್ಲಾ ಅಂಧತ್ವ ನಿಯಂತ್ರಣಾ ಸಂಸ್ಥೆ ಹಾಗೂ ಅಶೋಕಪುರಂನ ವಿನಾಯಕ ಕ್ರೀಡಾ ಹಾಗೂ ಸಮಾಜ ಸೇವಾ ಸಂಸ್ಥೆ, ಸರ್ಕಾರಿ ಆಸ್ಪತ್ರೆ, ಅಶೋಕಪುರಂ, ಜಯನಗರ ಮತ್ತು ಕೊಯಮತ್ತೂರು ಅರ ವಿಂದ ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಜೂ.30ರಂದು ಬೆಳಗ್ಗೆ 9 ಗಂಟೆಗೆ ಅಶೋಕ ಪುರಂನ 6ನೇ ಕ್ರಾಸ್‌ನಲ್ಲಿರುವ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಕಣ್ಣಿನ ಉಚಿತ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಜೂ.30ರೊಳಗಾಗಿ ತಮ್ಮ ವಿಳಾಸ ಹಾಗೂ ಮೊಬೈಲ್ ನಂಬರ್‌ನೊಂದಿಗೆ ನೊಂದಾಯಿಸಿಕೊಳ್ಳಬಹುದು. ಮಾಹಿತಿಗೆ ಮೊ. 9900095293, 9886767508 ಸಂಪರ್ಕಿಸಬಹುದು.

ಕಾವೇರಿ ನಗರ ಕೆ.ಲಕ್ಷ್ಮಣ ನಿಧನ



ಮೈಸೂರು, ಜೂ.28–ಮೈಸೂರಿನ ಕಾವೇರಿ ನಗರ ನಿವಾಸಿ, ಲಯನ್ಸ್ ಕ್ಲಬ್ ಆಫ್ ನರಸಿಂಹರಾಜ ಸಂಸ್ಥಾಪಕ ಅಧ್ಯಕ್ಷ ಕೆ.ಲಕ್ಷ್ಮಣ ಶುಕ್ರವಾರ ರಾತ್ರಿ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 60 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಇವರು ಕಾವೇರಿ ನಗರದ ಚಾಮುಂಡೇಶ್ವರಿ ದೇವಸ್ಥಾನದ ಧರ್ಮದರ್ಶಿಯಾಗಿದ್ದರು. ನಾಳೆ (ಶನಿವಾರ) ಬೆಳಗ್ಗೆ ಕಾವೇರಿ ನಗರದ ಅವರ ನಿವಾಸದಲ್ಲಿ ಪಾರ್ಥಿವ ಶರೀರವನ್ನು ಸಾರ್ವಜನಿಕ ದರ್ಶನಕ್ಕೆ ಇಡಲಾಗುತ್ತಿದ್ದು, ಮಧ್ಯಾಹ್ನ 3 ಗಂಟೆಗೆ ಗೋಕುಲಂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI 'ಶೋಧ – ಅನುಶೋಧ', ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು–CSIR, CFTRI, Mysuru, ಪ್ರಸ್ತುತಿ : ಡಾ. ಎ. ಜಿ. ಗೋಪಾಲಕೃಷ್ಣ, 6.40 ಪದ ಸಂಸ್ಕೃತಿ, ಪ್ರಸ್ತುತಿ: ಪರಮೇಶ್ವರ. ವಿ. ಭಟ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 'ಹಾದಿಯಲ್ಲಿ ಕಂಡ ಮುಖ' ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಕೆ.ಎಸ್.ಗೋಪಾಲಕೃಷ್ಣನ್–ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ನಿಮ್ಮೂರ್ ಹೆಸರು, ಪ್ರಸ್ತುತಿ: ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.30 ದೇವರನಾಮ–ಬಿ.ಕೆ.ರಮಪ್ರಭ, 12.45 ಜನಪದ ಸಂಗೀತ, 1.20 ಭಾವಗೀತೆಗಳು–ಆರ್. ಶಾಂತ ಮತ್ತು ಆರ್. ಶೈಲಾ, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ–ಪ್ರತಿಭಾ ಪಲ್ಲವ–ಪಂಡಿತ್ ಭಾರ್ಗವ ಭಟ್‌ನ ಪರಿಚಯ, ಪ್ರಸ್ತುತಿ:ಎಂ.ಎಸ್.ಭಾರತಿ, 4.00 ನಾಟಕ 'ಸುಧಾರಿಸಿಕೊಂಡು ಹೋಗಿ', ರಚನೆ–ಸಿ.ವಿ. ಶಿವಶಂಕರ್ ಹಾಗೂ ನಿರ್ದೇಶನ–ರಘುಪತಿ ಹೆಗಡೆ, 4.30 ನೆನಪಿನಂಗಳ: ಹೊಸಗನ್ನಡ ಸಾಹಿತ್ಯದಲ್ಲಿ ಹಾಸ್ಯ, ಜಿ.ಪಿ.ರಾಜರತ್ನಂ ಅವರ ಭಾಷಣದ ಧ್ವನಿಮುದ್ರಣ, 'ಸಾಹಿತ್ಯ ಮತ್ತು ನೀತಿ' ಈ ಕುರಿತು ಮಾತನಾಡಿರುವವರು, ಪ್ರೊಫೆಸರ್. ಎ.ಎನ್. ಮೂರ್ತಿರಾಯರು, 5.30 Pashudhan Se Behthar Jeevan ಪ್ರಾಯೋಜಕರು: ಪಶು ಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಸಚಿವಾಲಯ, 6.50 ಕೃಷಿರಂಗ: ಕಿಸಾನ್ ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ: ಶ್ರೀರಂಗಪಟ್ಟಣ ತಾಲೂಕು ಬಿದರಹಳ್ಳಿ ಗ್ರಾಮದ ಕೃಷಿಕ ಸಹೋದರರಾದ ಡಾ.ಬಿ.ಕೆ.ಶ್ರೀಧರ್ ಮತ್ತು ಬಿ.ಕೆ.ಸತೀಶ್. ಪ್ರಸ್ತುತಿ : ಎನ್. ಕೇಶವಮೂರ್ತಿ. 7.45 ಟಿ–20 ವಿಶ್ವ ಕಪ್ ಅಂಗವಾಗಿ ತಂಡಗಳ ನಡುವೆ ಕೆನ್ಸಿಂಗ್ ಟನ್ ಒವೆಲ್, ಬ್ರಿಡ್ಜ್‌ಟೌನ್, ಬಾರ್ಬಡೊಸ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯುವ ಕ್ರಿಕೆಟ್ ಫೈನಲ್ ಪಂದ್ಯದ ವೀಕ್ಷಕ ವಿವರಣೆ.

ಇಂದಿನ ಪಂಚಾಂಗ

29.06.2024 ಶನಿವಾರ, ಮಳೆ ನಕ್ಷತ್ರ: ಆರಿದ್ರಾ 22.06.2024 ರಿಂದ 05.07.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಉಭಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಭಾರತ್ ಕ್ಯಾನ್ಸರ್ ಆಸ್ಪತ್ರೆ :** ಮಕ್ಕಳು, ಹದಿಹರೆಯದವರು ಸೇರಿದಂತೆ ಸಾರ್ವಜನಿಕರು ತಂಬಾಕು ಬಳಕೆಯಿಂದ ದೂರ ಇರುವಂತೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸೈಕ್ಲೋಥಾನ್, ಚಾಲನೆ : ಡಿಸಿಪಿ ಎಂ.ಮುತ್ತುರಾಜ್, ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ, ಬೆಳಗ್ಗೆ 6.30ಕ್ಕೆ.

■ **ಡಾ. ನ. ರತ್ನರ ಬಳಗ :** ರಂಗಕರ್ಮಿ ಡಾ. ನ. ರತ್ನ ಅವರಿಗೆ ನುಡಿನಮನ, ಉಪಸ್ಥಿತರು : ಎಂ. ಸತ್ಯನಾರಾಯಣರಾವ್, ಡಾ. ಎನ್.ಪಿ. ನಟರಾಜ್, ಎನ್. ಧನಂಜಯ, ಬಾಪು ಸತ್ಯನಾರಾಯಣ, ಎಸ್.ಆರ್. ರಮೇಶ್, ಎಚ್.ಆರ್. ಲೀಲಾವತಿ, ರಾಮೇಶ್ವರಿ ವರ್ಮ, ಎಚ್. ಜನಾರ್ಧನ್ (ಜನ್ನಿ), ಪ್ರಸಾದ್ ಕುಂದೂರು, ಶ್ರೀನಿವಾಸ ಜಿ. ಕಪ್ಪಣ್ಣ, ವೆಂಕಟರಾಜು, ರಾಮಚಂದ್ರ, ರಾಜೇಶ್, ಸ್ಥಳ: ಮಹಾರಾಜ ಕಾಲೇಜು ಶತಮಾನೋತ್ಸವ ಭವನ, ಬೆಳಗ್ಗೆ 10ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಸಂಶೋಧನಾ ವಿದ್ಯಾರ್ಥಿ ವೇದಿಕೆ** : ವಿಶ್ವಜ್ಞಾನಿ ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ 133ನೇ ಜನ್ಮ ದಿನಾಚರಣೆ ಹಾಗೂ ವಿಚಾರ ಸಂಕಿರಣ, ಅಂಬೇಡ್ಕರ್ ಚಿಂತನೆ : ಸಮಕಾಲೀನ ಸ್ಪಂದನೆ, ಉದ್ಘಾಟನೆ : ಸಾಮಾಜಿಕ ಕಾರ್ಯಕರ್ತ ಅಕ್ಕೈ ಪದ್ಮಶಾಲಿ, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ.ಎನ್.ಕೆ. ಲೋಲಾಕ್ಷಿ, ಉಪಸ್ಥಿತರು : ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು, ಮುಖ್ಯ ಅತಿಥಿಗಳು : ಸಂಸ್ಕೃತಿ ಚಿಂತಕ ಡಾ. ಬಂಜಗೆರೆ ಜಯಪ್ರಕಾಶ್, ಪ್ರೊ. ಕವಿತಾ ರೈ, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ವಾಸನ್ ಕಣ್ಣಿನ ಆಸ್ಪತ್ರೆ, ಮೈಸೂರು ಶಾಖೆ :** 14ನೇ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಶಾಸಕರಾದ ಜಿ.ಟಿ. ದೇವೇಗೌಡ, ಟಿ.ಎಸ್. ಶ್ರೀವತ್ಸ, ಬಂಡೀಪುರ ಹುಲಿ ಸಂರಕ್ಷಣಾ ಯೋಜನೆ ನಿರ್ದೇಶಕ ಡಾ. ರಮೇಶ್ ಕುಮಾರ್, ವೇದಿಕೆ ರಾಜ್ಯಾಧ್ಯಕ್ಷ ಬಿ.ಬಿ. ರಾಜಶೇಖರ, ಸಾಹಿತಿ ಬನ್ನೂರು ಕೆ. ರಾಜು, ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ವ್ಯವಸ್ಥಾಪಕ ನಿರ್ದೇಶಕ ಎಸ್.ಇ. ಗಿರೀಶ್, ಮೇಲ್ವಿಚಾರಕರಾದ ಶ್ರೀಮತಿ ರಶ್ಮಿ ಎನ್. ರಾಜ್, ಸ್ಥಳ: ಆಸ್ಪತ್ರೆ ಆವರಣ, ಲಕ್ಷ್ಮೀಪುರಂ, ಬೆಳಗ್ಗೆ 11ಕ್ಕೆ.

■ **ಕನ್ನಡಾಂಬೆ ರಕ್ಷಣಾ ವೇದಿಕೆ:** ಸರ್ಕಾರಿ ಶಾಲೆಗಳು ಹಾಗೂ ಸರ್ಕಾರಿ ಆಸ್ಪತ್ರೆಗಳು ಬಡವರ ದೇವಾಲಯಗಳು...? ಚಿಂಥನ ಮಂಥನ ಕಾರ್ಯಕ್ರಮ, ಉತ್ತಮ ಶಿಕ್ಷಕ ಹಾಗೂ ಉತ್ತಮ ವೈದ್ಯಕೀಯ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಸಮಾಜ ಸೇವಕ ಕೆ.ಎಲ್.ರಮೇಶ್, ಅಧ್ಯಕ್ಷತೆ: ಸಾಹಿತಿ ಬನ್ನೂರು ಕೆ.ರಾಜು, ಪ್ರಾಸ್ತಾವಿಕ ನುಡಿ: ಸಂಸ್ಥಾಪಕ ರಾಜ್ಯಾಧ್ಯಕ್ಷ ಬಿ.ಬಿ.ರಾಜಶೇಖರ್, ಮುಖ್ಯ ಅತಿಥಿಗಳು: ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಕನ್ನಡ ಸಹ ಪ್ರಾಧ್ಯಾಪಕ ಸಿ.ಎಸ್. ಕೆಂಡಗಣ್ಣೇಗೌಡ, ಕನ್ನಡ ಪರ ಹೋರಾಟಗಾರ ಡಿ.ಪಿ.ಕೆ. ಪರಮೇಶ್, ಸಿವಿಲ್ ಇಂಜಿನಿಯರ್ ಉಮಾಶಂಕರ್, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12.30ಕ್ಕೆ.

■ **ಕಾಮಾಕ್ಷಿ ಆಸ್ಪತ್ರೆ :** ಕಾಮಾಕ್ಷಿ ಆಸ್ಪತ್ರೆಯ ಸಂಸ್ಥಾಪನಾ ದಿನಾಚರಣೆ, ಸರಸ್ವತಿಪುರಂ ಘಟಕದಲ್ಲಿ ಬೆಳಗ್ಗೆ 11.30ಕ್ಕೆ, ಜೆ.ಪಿ.ನಗರ ಘಟಕದಲ್ಲಿ ಮಧ್ಯಾಹ್ನ 1.45ಕ್ಕೆ, ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದಿರುವ ಸಿಬ್ಬಂದಿ ಮಕ್ಕಳಿಗೆ ಪುರಸ್ಕಾರ, 25 ವರ್ಷ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿರುವವರಿಗೆ ಸನ್ಮಾನ.

■ **ಅಡವಿ ಅಲರ್ಟ್ ಫೌಂಡೇಷನ್ :** ಅಡವಿ ಅಲರ್ಟ್ ಫೌಂಡೇಷನ್ ಸಂಸ್ಥಾಪಕ ಪವನ್ ಜೋಶಿ ಬರೆದಿರುವ ಸಂಸ್ಥಾಪಕ ಪವನ್ ಜೋಶಿ ಬರೆದಿರುವ ಹಾವುಗಳ ಕುರಿತು ಆಸಕ್ತಿದಾಯಕ ವಿಷಯಗಳನ್ನು ಒಳಗೊಂಡ 'ಉರಗ ತರಂಗ'–ಕಲಿಸಿ, ತಿಳಿಸಿ, ಉಳಿಸಿ ಕೃತಿ ಬಿಡುಗಡೆ ಸಮಾರಂಭ, ಮುಖ್ಯ ಅತಿಥಿಗಳು : ಅರಣ್ಯ ಸಚಿವ ಈಶ್ವರ್ ಖಂಡ್ರೆ, ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸಾಗರ್ ಈಶ್ವರ್ ಖಂಡ್ರೆ, ಚಲನಚಿತ್ರ ನಿರ್ಮಾಪಕ ಜೆ.ಎಸ್. ಅಮೋಘ ವರ್ಷ, ಸ್ನೇಕ್ಸ್ ಆಫ್ ಇಂಡಿಯಾ ಪುಸ್ತಕದ ಸಹ ಲೇಖಕ, ಸೀನಿಯರ್ ಹರ್ಪಿಟಾಲಜಿಸ್ಟ್ ಅಶೋಕ್ ಕ್ಯಾಪ್ಟನ್, ಗೌರವ ಅತಿಥಿಗಳು : ಐಎಫ್‌ಎಸ್ ಪ್ರಿನ್ಸಿಪಲ್ ಚೀಫ್ ಕನ್ಸರ್ವೇಟರ್ ಆಫ್ ಫಾರೆಸ್ಟ್ ವೈಲ್ಡ್ ಲೈಫ್ ಸುಭಾಷ್ ಕೆ. ಮಾಳಖೇಡ, ಮೈಸೂರು ಸಾಹಿತ್ಯ ಸಂಭ್ರಮ ಸಂಸ್ಥಾಪಕ ಮತ್ತು ನಿರ್ದೇಶಕರಾದ ಶ್ರೀಮತಿ ಶುಭಾ ಸಂಜಯ್ ಅರಸ್, ಐಎಫ್‌ಎಸ್ ಡಿಸಿಎಫ್ ಬಂಡೀಪುರ (ಹುಲಿ ಮೀಸಲು) ಪ್ರಭಾಕರನ್, ಕನ್ಸರ್ವೇಷನ್ ಬಯೋಲಜಿಸ್ಟ್ ಸಂಜಯ್ ಗುಬ್ಬಿ, ಹಾವು ಕಡಿತದ ತಜ್ಞರು ಮತ್ತು ಅರಿವಳಿಕೆ ತಜ್ಞ ಡಾ.ನಾಗರಾಜ್, ಶಾಸಕರಾದ ಕೆ. ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ತನ್ವೀರ್ ಸೇಠ್, ಜಿ.ಟಿ.ದೇವೇಗೌಡ ಮತ್ತು ಮಾಜಿ ಸಂಸದ ಪ್ರತಾಪ್ ಸಿಂಹ,ಸ್ಥಳ: ಕರ್ನಾಟಕ ಕಲಾಮಂದಿರ, ಸಂಜೆ 4ಕ್ಕೆ.

■ **ನಾಟ್ಯ ಲೇಖ ಸಂಸ್ಥೆ :** ಕವಿ–ನಾಟಕಕಾರ ರಂಗನಿರ್ದೇಶಕ ರಘುನಂದನ ಅವರೊಡನೆ ಸಂವಾದ, ಉಪಸ್ಥಿತರು : ಲೇಖಕ ಹಾಗೂ ಸುಸ್ಥಿರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ತಜ್ಞ ಕೆ.ಪಿ. ಸುರೇಶ, ಸ್ಥಳ: ಬಿ.ವಿ. ಕಾರಂತ ರಂಗ ಚಾವಡಿ, ಸಂಜೆ 5ಕ್ಕೆ.

■ **ಶ್ರೀ ಕೃಷ್ಣ ಟ್ರಸ್ಟ್ :** ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದಂಗಳವರಿಂದ ಶ್ರೀಮದ್ ವಾದಿರಾಜ ವಿರಚಿತ ರುಕ್ಮಿಣೀಶ ವಿಜಯ ಕುರಿತು ಪ್ರವಚನ, ಸ್ಥಳ: ಶ್ರೀ ಕೃಷ್ಣಧಾಮ, ಸರಸ್ವತಿಪುರಂ, ಸಂಜೆ 6ಕ್ಕೆ

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹೀಪಾಲಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಮೈಸೂರು ಸಂಗೀತ ಸಭೆಗಳ ಒಕ್ಕೂಟ ಮತ್ತು ಗಾನಭಾರತಿ :** ಕರ್ನಾಟಕ ವಾಗ್ಗೇಯ ವೈಭವ ಕಾರ್ಯಕ್ರಮ, ಸಂಜೆ 6ಕ್ಕೆ ವಾಗ್ಗೇಯಕಾರರು: ಸಿ. ರಂಗಯ್ಯ, ವಿದುಷಿ ಸುಕನ್ಯಾ ಪ್ರಭಾಕರ್ ಅವರ ಶಿಷ್ಯರಾದ ಅಂಜನಾ, ಶರಣ್ಯ ಜಿ. ಭಟ್, ನಿಸರ್ಗ ಶ್ರೀಧರ್, ಆರ್. ನಿತ್ಯಶ್ರೀ, ಅಕ್ಷತಾಭಟ್, ಸಭ್ಯತಾ, ಪೂರ್ವಿತಾ ಅವರಿಂದ ಗಾಯನ. ವಿದ್ವಾನ್ ಅಮೋಘ ನಡಾದುರ್–ಪಿಟೀಲು, ವಿದ್ವಾನ್ ಪಿ.ಎಸ್. ಶ್ರೀಧರ್, ವಿದ್ವಾನ್ ಅಜಯ್–ಘಟಂ; ಸಂಜೆ 7.15 ರಿಂದ ವಾಗ್ಗೇಯಕಾರರು: ಚಿಕ್ಕರಾಮರಾಯರು, ವಿದುಷಿ ಪದ್ಮಾಗುರುದತ್ ಅವರ ಶಿಷ್ಯರಾದ ಅಂಬಿಕಾ ಗುರುದತ್, ಕೋವಿಲಡಿ ಅರ್ಚನಾ, ಚೈತ್ರ ರಘುನಂದನ್, ಶಶಿ ಶ್ರೀನಿವಾಸನ್ ಅವರಿಂದ ಗಾಯನ, ವಿದುಷಿ ಸಿ.ವಿ. ಶೃತಿ–ಪಿಟೀಲು, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ವಿದ್ವಾನ್ ಅಜಯ್–ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ :** 314ನೆಯ ಶಿವಾನುಭವ ದಾಸೋಹ ಉಪನ್ಯಾಸ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮೈಸೂರು ಮಹಾರಾಣಿ ಕಲಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ವಿ. ವಸಂತಕುಮಾರ್ ಅವರಿಂದ 'ಶ್ರೀ ನಿಜಗುಣ ಶಿವಯೋಗಿಗಳವರ ಪರಮಾರ್ಥಗೀತೆ' ಕುರಿತು ಉಪನ್ಯಾಸ, ಅಧ್ಯಕ್ಷತೆ : ಶಾಸಕ ಟಿ.ಎಸ್. ಶ್ರೀವತ್ಸ, ಸ್ಥಳ: ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣ, ಸರಸ್ವತಿಪುರಂ, ಸಂಜೆ 6ಕ್ಕೆ.

■ **ಕಲಾ ಸುರುಚಿ :** ಕರ್ನಾಟಕ ಸಂಗೀತ ಕಛೇರಿ, ವಿದುಷಿ ಗಿರಿಜಾ ರವಿಶಂಕರ್ ಮತ್ತು ಶ್ರೀನಿಧಿ ಕೌಶಿಕ್ ಅವರಿಂದ ಹಾಡುಗಾರಿಕೆ, ಅದಿತಿ ಕೃಷ್ಣಪ್ರಕಾಶ್–ಪಿಟೀಲು, ವಿಕ್ರಂ ಭಾರದ್ವಾಜ್–ಮೃದಂಗ, ಸ್ಥಳ: ಸುರುಚಿ ರಂಗಮನೆ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6.30ಕ್ಕೆ

ಹಾವೇರಿ ಬಳಿ ನಿಂತಿದ್ದ ಲಾರಿಗೆ ಟಿಟಿ ವಾಹನ ಡಿಕ್ಕಿ

13 ಮಂದಿ ಸಾವು

● ಸತ್ತವರಲ್ಲಿ ಇಬ್ಬರು ಮಕ್ಕಳು ● ಮೃತ ಕುಟುಂಬಕ್ಕೆ

ತಲಾ 2 ಲಕ್ಷ ರೂ. ಪರಿಹಾರ ಘೋಷಿಸಿದ ಸಿಎಂ



ಹಾವೇರಿ, ಜೂ. 28–ನಿಂತಿದ್ದ ಲಾರಿಗೆ ಟೆಂಪೋ ಟ್ರಾವೆಲ್ಲರ್ (ಟಿಟಿ) ಡಿಕ್ಕಿ ಹೊಡೆದ ಪರಿಣಾಮ ಒಂದೇ ಕುಟುಂಬದ 13 ಮಂದಿ ಸಾವನ್ನಪ್ಪಿ, ನಾಲ್ವರು ತೀವ್ರವಾಗಿ ಗಾಯಗೊಂಡ ಘಟನೆ ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕು ಗುಂಡೇನಹಳ್ಳಿ ಕ್ರಾಸ್ ಬಳಿ ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಇಂದು ಮುಂಜಾನೆ ಸಂಭವಿಸಿದೆ.

ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲೂಕು ಹೊಳೆಹೊನ್ನೂರು ಬಳಿಯ ಎಮ್ಮಿ ಹಟ್ಟಿ ಗ್ರಾಮದವರಾದ ಸುಭದ್ರಾ ಬಾಯಿ (65), ಮಾನಸ(24), ಮಂಜುಳಾ ಬಾಯಿ (62), ಚಾಲಕ ಆದರ್ಶ(23), ನಾಗೇಶ್ವರ ರಾವ್(50), ಇವರ ಪತ್ನಿ ವಿಶಾಲಾಕ್ಷಿ (40), ರೂಪಾ ಬಾಯಿ(40), ಅಂಜಲಿ, ಭಾಗ್ಯಲಕ್ಷ್ಮಿ(40), ಪುಣ್ಯ(50), ಅರುಣ್ ಕುಮಾರ್, ನಂದನ್ ಮತ್ತು ಆರು ಹಾಗೂ ನಾಲ್ಕು ವರ್ಷದ ಮಕ್ಕಳು ಈ ಭೀಕರ ಅಪಘಾತದಲ್ಲಿ ಸಾವನ್ನಪ್ಪಿದ್ದು, ಅನ್ನಪೂರ್ಣ, ಅರ್ಪಿತ, ಪರಶುರಾಮ್ ಮತ್ತು ಗೌತಮ್ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಕುಟುಂಬಕ್ಕೆ ಸೇರಿದ್ದ ಆದರ್ಶ ಕಳೆದ ತಿಂಗಳು ಹೊಸ ಟೆಂಪೋ ಟ್ರಾವೆಲ್ಲರ್ ಖರೀದಿಸಿದ್ದರು. ಆ ಸಂದರ್ಭದಲ್ಲಿ ಟಿಟಿಗೆ ಸ್ಥಳೀಯವಾಗಿ ಪೂಜೆ ಸಲ್ಲಿಸಿದ್ದ ಅವರು, ಹೊಸ ಟಿಟಿಯಲ್ಲಿ ಕುಟುಂಬದವರೆಲ್ಲರೂ ದೇವಸ್ಥಾನಕ್ಕೆ ಹೋಗಿ–ಬರಲು ನಿರ್ಧರಿಸಿದ್ದಾರೆ. ಈ ಕುಟುಂಬ ಗುರುವಾರ ಬೆಳಗಾವಿ ಜಿಲ್ಲೆಯ ಚಿಂಚಲಿ ಮಾಯಮ್ಮ ದೇವಸ್ಥಾನಕ್ಕೆ ಹೋಗಿದ್ದರು. ಅಲ್ಲಿಂದ ಸವದತ್ತಿ ಎಲ್ಲಮ್ಮ ದೇವಸ್ಥಾನಕ್ಕೆ ಹೋಗಿ ದರ್ಶನದ ನಂತರ ಸ್ವಗ್ರಾಮಕ್ಕೆ ಮರಳುತ್ತಿದ್ದ ವೇಳೆ ಶುಕ್ರವಾರ ಮುಂಜಾನೆ 3.45ರ ಸುಮಾರಿನಲ್ಲಿ ರಸ್ತೆ ಬದಿ ನಿಂತಿದ್ದ ಲಾರಿಗೆ ಟಿಟಿ ಅಪ್ಪಳಿಸಿದೆ. ಇದರಿಂದ ಟಿಟಿ ವಾಹನ ಸಂಪೂರ್ಣವಾಗಿ ನಜ್ಜುಗುಜ್ಜಾಗಿದ್ದು, ಅದರಲ್ಲಿದ್ದ 17 ಮಂದಿ ಪೈಕಿ ಇಬ್ಬರು ಮಕ್ಕಳು ಸೇರಿ 13 ಮಂದಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಮೃತದೇಹಗಳು ಟಿಟಿಯ ಅವಶೇಷದಲ್ಲಿ ಸಿಲುಕಿ ಹಾಕಿಕೊಂಡಿದ್ದು, ವಿಷಯ ತಿಳಿಯುತ್ತಿದ್ದಂತೆಯೇ ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ ಸಾವು–ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದ ನಾಲ್ವರನ್ನು ಆಂಬುಲೆನ್ಸ್ ಮೂಲಕ ಜಿಲ್ಲಾಸ್ಪತ್ರೆಗೆ ರವಾನಿಸಿದ್ದಾರೆ. ಈ ನಾಲ್ವರ ಸ್ಥಿತಿಯೂ ಗಂಭೀರವಾಗಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ. ರಸ್ತೆ ಬದಿಯಲ್ಲಿ ಇಂಡಿಕೇಟರ್ ಕೂಡ ಹಾಕದೇ ಲಾರಿಯನ್ನು ನಿಲ್ಲಿಸಿದ್ದೇ ಈ ಅಪಘಾತಕ್ಕೆ ಕಾರಣ ಎನ್ನಲಾಗಿದೆ. ಹಠಾತ್ತನೇ ನಿಂತಿರುವ ಲಾರಿ ಎದುರಾದಾಗ ಚಾಲಕನಿಗೆ ಬ್ರೇಕ್ ಹಾಕಿ ವಾಹನವನ್ನು ನಿಯಂತ್ರಿಸಲು ಸಾಧ್ಯವಾಗದೇ ಇಂತಹ ಅಪಘಾತಗಳು ಸಂಭವಿಸಿ ಪ್ರಾಣಹಾನಿ ಉಂಟಾಗುತ್ತದೆ. ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆಬದಿ ನಿಲ್ಲಿಸುವ ಲಾರಿಗಳಿಗೆ ಕಾರು ಮತ್ತಿತರ ವಾಹನಗಳು ಡಿಕ್ಕಿ ಹೊಡೆದು ಸಾವುಗಳು ಸಂಭವಿಸಿರುವ ಪ್ರಕರಣಗಳು ಹೆಚ್ಚಾಗಿ ನಡೆಯುತ್ತಿವೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಂದು ಬೆಳಗ್ಗೆ ಹಾವೇರಿ ಜಿಲ್ಲಾಧಿಕಾರಿ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ, ವೈದ್ಯರಿಂದ ಗಾಯಾಳುಗಳ ಆರೋಗ್ಯ ಸ್ಥಿತಿಯ ಬಗ್ಗೆ ವಿಚಾರಿಸಿದ್ದಲ್ಲದೇ, ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಎಲ್ಲಾ ಗಾಯಾಳುಗಳಿಗೂ ಸೂಕ್ತ ಚಿಕಿತ್ಸೆ ನೀಡಬೇಕು ಎಂದು ಸೂಚಿಸಿದರು. ಎಲ್ಲಾ ದೇಹಗಳ ಮರಣೋತ್ತರ ಪರೀಕ್ಷೆ ನಡೆದ ನಂತರ ಶವಗಳನ್ನು ಸ್ವಗ್ರಾಮಕ್ಕೆ ಸಾಗಿಸಲು ಜಿಲ್ಲಾಡಳಿತದಿಂದಲೇ ಆಂಬುಲೆನ್ಸ್ ವ್ಯವಸ್ಥೆ ಕಲ್ಪಿಸಲಾಯಿತು.

ರಾಜ್ಯ ಅಂಧರ ಫುಟ್‌ಬಾಲ್ ತಂಡದ ಆಟಗಾರ್ತಿ: ಅಪಘಾತದಲ್ಲಿ ಮೃತಪಟ್ಟ ಅಂಜಲಿ ಎಂಬುವರ ಪುತ್ರಿ ಮಾನಸ ಹುಟ್ಟಿದಾಗಲೇ ಕಣ್ಣುಗಳನ್ನು ಕಳೆದುಕೊಂಡಿದ್ದರು. ಶಿವಮೊಗ್ಗ ಗೋಪಾಲಗೌಡ ಬಡಾವಣೆಯ ಶಾರದಾ ಅಂಧ ಮಕ್ಕಳ ಶಾಲೆಯಲ್ಲಿ ವ್ಯಾಸಂಗ ಮಾಡಿರುವ ಈಕೆ, ಬೆಂಗಳೂರಿನ ಹಾಸ್ಟೆಲ್‌ನಲ್ಲಿ ಉಳಿದುಕೊಂಡು ಯುಪಿಎಸ್‌ಸಿ ಪರೀಕ್ಷೆಗೆ ಕೋಚಿಂಗ್ ಪಡೆಯುತ್ತಿದ್ದರು. ಐಎಎಸ್ ಅಧಿಕಾರಿ ಆಗಬೇಕೆಂಬ ಕನಸು ಹೊತ್ತಿದ್ದ ಮಾನಸ ರಾಜ್ಯ ಅಂಧರ ಫುಟ್‌ಬಾಲ್ ತಂಡದ ನಾಯಕಿಯಾಗಿದ್ದರು. ಇತ್ತೀಚೆಗೆ ಮುಂಬೈ ಮತ್ತು ಕೊಲ್ಕತ್ತಾದಲ್ಲಿ ನಡೆದ ಅಂಧರ ಫುಟ್‌ಬಾಲ್ ಟೂರ್ನಿಯಲ್ಲಿ ರಾಜ್ಯ ತಂಡದ ನಾಯಕಿಯಾಗಿದ್ದರು. 2022ರಲ್ಲಿ ಕೇರಳದ ಕೊಚ್ಚಿಯಲ್ಲಿ ಜಪಾನ್ ವಿರುದ್ಧ ನಡೆದ ಪಂದ್ಯದಲ್ಲಿ ಭಾರತ ತಂಡದ ಪರವಾಗಿ ಆಡುವ ಮೂಲಕ ಗಮನ ಸೆಳೆದಿದ್ದರು. ರಜೆಗಾಗಿ ಸ್ವಗ್ರಾಮ ಎಮ್ಮಿಹಟ್ಟಿಗೆ ಬಂದಿದ್ದ ಈಕೆಯನ್ನೂ ಕುಟುಂಬಸ್ಥರು ದೇವರ ದರ್ಶನಕ್ಕೆ ಕರೆದೊಯ್ದಿದ್ದರು ಎಂದು ಮಾನಸ ಸಹೋದರಿ ಮಹಾಲಕ್ಷ್ಮಿ ಮಾಧ್ಯಮದವರಿಗೆ ತಿಳಿಸಿದ್ದಾರೆ.

ತಲಾ 2 ಲಕ್ಷ ಪರಿಹಾರ: ಮುಖ್ಯಮಂತ್ರಿ ಸಿದ್ದರಾಮಯ್ಯ, ಅಪಘಾತದಲ್ಲಿ ಮೃತಪಟ್ಟವರಿಗೆ ತೀವ್ರ ಸಂತಾಪ ವ್ಯಕ್ತಪಡಿಸಿದರಲ್ಲದೇ ಮೃತರ ಕುಟುಂಬಕ್ಕೆ ತಲಾ 2 ಲಕ್ಷ ರೂ. ಪರಿಹಾರ ಘೋಷಿಸಿದ್ದಾರೆ.

ರಾಷ್ಟ್ರಪತಿ ಸಂತಾಪ: ಈ ಭೀಕರ ಅಪಘಾತದಲ್ಲಿ ಮೃತಪಟ್ಟವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಾಮಾಜಿಕ ಜಾಲತಾಣದ ಮೂಲಕ ಸಂತಾಪ ಸೂಚಿಸಿದ್ದಾರೆ. ಅಲ್ಲದೇ, ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ. ಕುಮಾರಸ್ವಾಮಿಯವರು ಸಾಮಾಜಿಕ ಜಾಲತಾಣದಲ್ಲಿ ಸಂತಾಪ ವ್ಯಕ್ತಪಡಿಸಿದ್ದಾರೆ.

ಬೌದ್ಧ ಸಮುದಾಯಕ್ಕೆ ಸರ್ಕಾರದಿಂದ ಎಲ್ಲ ನೆರವು

ವಸತಿ ಸಚಿವ ಜಮೀರ್ ಖಾನ್ ಭರವಸೆ



ಮೈಸೂರಿನ ಸರಸ್ವತಿಪುರಂನಲ್ಲಿ ಮಹಾಬೋಧಿ ಮೈತ್ರಿ ಮಂಡಲದ ಸಮುದಾಯ ಭವನ ಉದ್ಘಾಟನಾ ಸಮಾರಂಭದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್, ಆನಂದ ಬಂತೇಜಿ, ಇತ್ತೀಕಾ ಮಹಾಧೀರಾ, ಸಿದ್ಧಾರ್ಥ್ ವಾಟ್ಸಾಯನ್ ಉಪಸ್ಥಿತರಿದ್ದರು

ಮೈಸೂರು, ಜೂ.28(ಎಸ್‌ಪಿಎನ್)– ರಾಜ್ಯ ಸರ್ಕಾರ ಬೌದ್ಧ ಸಮುದಾಯದ ಜತೆಗಿದ್ದು, ಅವರ ಬೇಡಿಕೆಗಳಿಗೆ ಅನುಗುಣವಾಗಿ ರಾಜ್ಯ ಸರ್ಕಾರ ಸ್ಪಂದಿಸಲಿದೆ ಎಂದು ವಸತಿ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದರು.

ಮೈಸೂರಿನ ಸರಸ್ವತಿಪುರಂನಲ್ಲಿ ಮಹಾಬೋಧಿ ಮೈತ್ರಿ ಮಂಡಲವು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ನೀಡಲಾದ ಒಂದು ಕೋಟಿ ರೂ. ಅನುದಾನದಲ್ಲಿ ನಿರ್ಮಿಸಲಾದ ಸಮುದಾಯ ಭವನ ಉದ್ಘಾಟಿಸಿ ಮಾತನಾಡಿದರು.

ಬೌದ್ಧ ಸಮುದಾಯವು ರಾಜ್ಯದಲ್ಲಿ ನೆಲೆಸಿರುವುದರ ಜೊತೆಗೆ ಶಿಕ್ಷಣ ಕ್ಷೇತ್ರದಲ್ಲೂ ಉತ್ತಮ ಕೆಲಸ ಮಾಡುತ್ತಿದೆ. ಬೌದ್ಧ ಸಮುದಾಯ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಯಾವುದೇ ರೀತಿಯ ನೆರವು ನೀಡಲು ಸಿದ್ಧ ಎಂದು ಘೋಷಿಸಿದರು.

ಈ ಸಂದರ್ಭದಲ್ಲಿ ಮಹಾಬೋಧಿ ಮೈತ್ರಿಮಂಡಲದ ಸರಸ್ವತಿಪುರಂ, ಹುಣಸೂರು, ಬೈಲಕುಪ್ಪೆ, ತಿ.ನರಸೀಪುರ ಶಾಖೆಗಳ ಶಿಕ್ಷಣ ಸಂಸ್ಥೆ ಆವರಣದಲ್ಲಿ ಕಟ್ಟಡ ನಿರ್ಮಾಣ ಹಾಗೂ ಇತರೆ ಸೌಲಭ್ಯಕ್ಕೆ ನೀಡಲಾದ 1.62 ಕೋಟಿ ರೂ. ಅನುದಾನದ ಚೆಕ್ ಅನ್ನು ಆನಂದ ಬಂತೇಜಿ ಅವರಿಗೆ ಜಮೀರ್ ಅಹಮದ್ ಖಾನ್ ಹಸ್ತಾಂತರ ಮಾಡಿದರು.

ಈ ಸಂಸ್ಥೆಯ ವಿದ್ಯಾರ್ಥಿಗಳ ಉನ್ನತ ಶಿಕ್ಷಣ ಪೂರೈಸಲು ವಿದ್ಯಾರ್ಥಿಗಳಿಗೆ ಬೇಕಾದ ಅಗತ್ಯ ಲ್ಯಾಪ್‌ಟಾಪ್, ಡೆಸ್ಕ್‌ಟಾಪ್ ಖರೀದಿಸಲು 2 ಲಕ್ಷ ರೂ.ಗಳನ್ನು ವೈಯಕ್ತಿಕವಾಗಿ ನೀಡಿದರಲ್ಲದೆ, ಎನ್‌ಸಿಸಿ ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಪಡೆಯಲು ಇಲಾಖೆಯಿಂದ ಅಗತ್ಯ ನೆರವು ಕೊಡಿಸಲಾಗುವುದು. ಸಾಧ್ಯವಾಗದಿದ್ದರೆ ವೈಯಕ್ತಿಕವಾಗಿ ನೀಡಲಾಗುವುದು ಎಂದು ಭರವಸೆ ನೀಡಿದರು.

ಸಚಿವ ಜಮೀರ್ ಅಹಮದ್ ಖಾನ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಆನಂದ ಬಂತೇಜಿ, ಇತ್ತೀಕಾ ಮಹಾಧೀರಾ, ಸಿದ್ಧಾರ್ಥ್ ವಾಟ್ಸಾಯನ್ ಉಪಸ್ಥಿತರಿದ್ದರು.

ಗುರುಪುರ ಕ್ಯಾಂಪ್‌ಗೆ ಭೇಟಿ: ಹುಣಸೂರು ಗುರುಪುರ ಕ್ಯಾಂಪ್‌ನ ಗುಡ್‌ಮೆಡ್ ತಾಂತ್ರಿಕ ವಿಶ್ವವಿದ್ಯಾಲಯ ಸೊಸೈಟಿಗೆ ಸಚಿವ ಜಮೀರ್ ಅಹಮದ್ ಖಾನ್ ಭೇಟಿ ನೀಡಿ, ಬೌದ್ಧ ಸಮುದಾಯದ ವಿಶೇಷ ಪ್ರಾರ್ಥನೆಯಲ್ಲಿ ಪಾಲ್ಗೊಂಡು ಅಲ್ಲಿನ ಬೌದ್ಧ ಬಿಕ್ಕುಗಳೊಂದಿಗೆ ಸಂವಾದ ನಡೆಸಿ, ಸ್ಥಳೀಯರೊಂದಿಗೆ ಗ್ರೂಪ್ ಫೋಟೋ ತೆಗೆಸಿಕೊಂಡರು.

ನಕ್ಕರೆ ಅದೇ ಸ್ವರ್ಗ

ಟೀಚರ್ : ನೀನು ಶಾಲೆಗೆ ಯಾಕ್ ಬರ್ತೀಯೇ?
ವಿದ್ಯಾರ್ಥಿ : ವಿದ್ಯಾಗೋಸ್ಕರ ಮೇಡಂ...
ಟೀಚರ್ : ಮತ್ತೆ ಈಗ ಯಾಕೆ ನಿದ್ದೆ ಮಾಡ್ತಿದ್ದೀಯಾ
ವಿದ್ಯಾರ್ಥಿ : ಇವತ್ತು ವಿದ್ಯಾ ಬಂದಿಲ್ವಲ್ಲ ಮೇಡಂ ಅದಕ್ಕೆ...!

ಮೈಸೂರು ಮಿತ್ರ

ಶನಿವಾರ, 29 ಜೂನ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಎಲ್ಲಿ ಹುಟ್ಟಬೇಕು ಅನ್ನೋದು ನಮ್ಮ ಕೈಯ್ಯಲ್ಲಿ ಇರೋದಿಲ್ಲ. ಎಲ್ಲಿಗೆ ಮುಟ್ಟಬೇಕು ಅನ್ನೋದು ಮಾತ್ರ ನಮ್ಮ ಕೈಯ್ಯಲ್ಲಿ ಇರುತ್ತೆ. –ನುಡಿಮುತ್ತು

ವೇದ ಸುಳ್ಳಾದರೂ { ಲಾಭ ನೋಡಿ ಬಾಳೆ
ಗಾದೆ ಸುಳ್ಳಾಗದು { ಹಣ್ಣು ತಿಂದಂತೆ

ನಿಮ್ಮ ಪತ್ರಗಳು

ಉಪ ಮುಖ್ಯಮಂತ್ರಿ– ಏನು? ಎತ್ತ?

ಮಾನ್ಯರೆ,

ರಾಜ್ಯದಲ್ಲಿ ಮತ್ತೆ ಮೂರು ಉಪ ಮುಖ್ಯಮಂತ್ರಿಗಳ ಹುದ್ದೆಗಳನ್ನು ಸೃಷ್ಟಿಸಬೇಕೆಂದು, ಮೂವರು ಮಂತ್ರಿಗಳುಒಳಗೊಂಡಂತೆ ಕೆಲವು ಕಾಂಗ್ರೆಸ್ ನಾಯಕರು ಕಾಂಗ್ರೆಸ್ ವರಿಷ್ಠ ಮಂಡಲಿಯನ್ನು ಆಗ್ರಹ ಪಡಿಸುತ್ತಿರುವುದು ಮಾಧ್ಯಮಗಳಲ್ಲಿ ವರದಿಯಾಗುತ್ತಿದೆ. ರಾಜ್ಯದಲ್ಲಿ ಈಗಾಗಲೇ ಶ್ರೀಯುತ ಡಿ.ಕೆ. ಶಿವಕುಮಾರ್ ಉಪ ಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಜಾತಿ ಮತ್ತು ಸಮುದಾಯಗಳ ಮತ್ತು ಪ್ರಾದೇಶಿಕತೆಯ ಸಮತೋಲನವನ್ನು ಕಾಪಾಡಿಕೊಳ್ಳಲು, ಕೆಲವು ಪ್ರಬಲ ಸಮುದಾಯಗಳ ಮಂತ್ರಿಗಳಿಗೆ ಉಪ ಮುಖ್ಯಮಂತ್ರಿ ಹುದ್ದೆ ನೀಡಬೇಕೆಂಬ ಬೇಡಿಕೆ ಹೆಚ್ಚುತ್ತಿದೆ.

ವಾಸ್ತವವಾಗಿ, ಉಪ ಮುಖ್ಯಮಂತ್ರಿ ಹುದ್ದೆಯ ಬಗ್ಗೆ ನಮ್ಮ ಸಂವಿಧಾನದಲ್ಲಿ ಯಾವುದೇ ರೀತಿಯ ಉಲ್ಲೇಖವಿಲ್ಲವಾದರೂ, ಅದೊಂದು ಸಂಪ್ರದಾಯವಾಗಿ ಬೆಳೆದುಬಂದಿದೆ. ರಾಜ್ಯದಲ್ಲಿ ಪ್ರಪ್ರಥಮ ಬಾರಿಗೆ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ (1992) ಆಗ ಮುಖ್ಯಮಂತ್ರಿ ಹುದ್ದೆಗೆ ಪ್ರಬಲ ಪೈಪೋಟಿ ನೀಡಿದ್ದ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರನ್ನು ಸಮಾಧಾನ ಪಡಿಸಲು ಉಪ ಮುಖ್ಯಮಂತ್ರಿಯನ್ನಾಗಿ ನೇಮಕ ಮಾಡಲಾಯಿತು. ಅಲ್ಲಿಂದೀಚೆಗೆ ಬಿ.ಎಸ್. ಯಡಿಯೂರಪ್ಪ, ಕೆ.ಎಸ್. ಈಶ್ವರಪ್ಪ, ಆರ್.ಅಶೋಕ್, ಲಕ್ಷ್ಮಣ್ ಸವದಿ, ಅಶ್ವತ್ಥ ನಾರಾಯಣಗೌಡ, ಗೋವಿಂದ ಕಾರಜೋಳ ಉಪ ಮುಖ್ಯಮಂತ್ರಿಗಳಾಗಿ ಕಾರ್ಯ ನಿರ್ವಹಿಸಿದ್ದಾರೆ.

ಉಪ ಮುಖ್ಯಮಂತ್ರಿಗಳಿಗೆ ಯಾವುದೇ ರೀತಿಯ ವಿಶೇಷ ಅಧಿಕಾರವಿಲ್ಲ. ಆದರೂ ಸಚಿವ ಸಂಪುಟದಲ್ಲಿ ಅವರ ಸ್ಥಾನ ಎರಡನೆಯದಾಗಿರುತ್ತದೆ. ಮುಖ್ಯಮಂತ್ರಿಗಳ ಅನುಪಸ್ಥಿತಿಯಲ್ಲಿ ಅವರು ಸಚಿವ ಸಂಪುಟದ ಸಭೆ ನಡೆಸಬಹುದು. ಕೆಲವು ವಿಶೇಷ ಸಂದರ್ಭಗಳಲ್ಲಿ ಅವರು ಹಂಗಾಮಿ ಮುಖ್ಯಮಂತ್ರಿಯಾಗಿ ಕೂಡ ಕಾರ್ಯ ನಿರ್ವಹಿಸಬಹುದು. ಈ ಹಿಂದೆ ಆಂಧ್ರಪ್ರದೇಶದಲ್ಲಿ ಮುಖ್ಯಮಂತ್ರಿಯಾಗಿದ್ದ ವೈ.ಎಸ್. ಜಗನ್ ರೆಡ್ಡಿ, ಮೂವರು ಉಪ ಮುಖ್ಯಮಂತ್ರಿಗಳನ್ನು ನೇಮಕ ಮಾಡಿಕೊಂಡಿದ್ದರು. ಮಹಾರಾಷ್ಟ್ರ, ದೆಹಲಿ ಮುಂತಾದ ರಾಜ್ಯಗಳಲ್ಲಿ ಕೂಡ ಉಪ ಮುಖ್ಯಮಂತ್ರಿಗಳಿದ್ದಾರೆ. ಪ್ರಸ್ತುತ ನಮ್ಮ ರಾಜ್ಯದಲ್ಲಿ ಡಿ.ಕೆ.ಶಿವಕುಮಾರ್ ಮಾತ್ರ ಉಪ ಮುಖ್ಯಮಂತ್ರಿಯಾಗಿದ್ದಾರೆ. ಈಗ ಮತ್ತೆ ಮೂವರು ಸಚಿವರನ್ನು ಆ ಹುದ್ದೆಗೆ ತಂದರೆ, ಡಿ.ಕೆ. ಶಿವಕುಮಾರ್ ಅವರ ಪ್ರಾಬಲ್ಯ ಕುಂದಬಹುದು. ಅವರನ್ನು ಮಣಿಸಲು ಹೆಚ್ಚಿನ ಸಂಖ್ಯೆಯ ಉಪ ಮಂತ್ರಿಗಳ ನೇಮಕಾತಿಗೆ ಕಾಂಗ್ರೆಸ್ ಪಕ್ಷದಲ್ಲೇ ಕೂಗು ಎದ್ದಿದೆ ಎಂಬ ಮಾತುಗಳು ಕೂಡ ಕೇಳಿ ಬರುತ್ತಿದೆ. ಕಾಂಗ್ರೆಸ್ ಹೈಕಮಾಂಡ್ ಈ ವಿಚಾರದಲ್ಲಿ ಯಾವ ನಿಲುವು ತೆಗೆದುಕೊಳ್ಳುತ್ತದೆ ಎಂಬುದು ಕುತೂಹಲಕಾರಿಯಾಗಿದೆ.

– ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ವಿವೇಕಾನಂದ ನಗರ, ಮೈಸೂರು.

ಕಲಾಮಂದಿರದಲ್ಲಿ ಶೌಚಾಲಯಗಳ ಸಮಸ್ಯೆ...




ಮಾನ್ಯರೆ,

ಮೈಸೂರು ನಗರದ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾದ ಕಲಾಮಂದಿರದ ಶೌಚಾಲಯಗಳ ಅಸಮರ್ಪಕ ನಿರ್ವಹಣೆ ಬಗ್ಗೆ ಸಾರ್ವಜನಿಕರಿಂದ ಬಂದ ದೂರುಗಳ ಹಿನ್ನೆಲೆಯಲ್ಲಿ ಈಗ ಶೌಚಾಲಯಗಳನ್ನು ಆಧುನೀಕರಣಗೊಳಿಸಲು ಕ್ರಮ ಕೈಗೊಂಡಿರುವುದಾಗಿ ತಿಳಿದು ಬಂದಿದೆ.

ಕಲಾಮಂದಿರಕ್ಕೆ ಹೊಂದಿಕೊಂಡಂತೆ ಮತ್ತು ಅಕ್ಕಪಕ್ಕದಲ್ಲಿರುವ ಕಿರುರಂಗ ಮಂದಿರ, ಮನೆ ಅಂಗಳ, ಲಂಕೇಶ್ ಗ್ಯಾಲರಿ, ಭೂಮಿ ಗೀತಾ, ಬಿ.ವಿ. ಕಾರಂತ ರಂಗಚಾವಡಿ, ಶ್ರೀರಂಗ, ವನರಂಗ ಮತ್ತು ಸುಚಿತ್ರಾ ಗ್ಯಾಲರಿ ಇವುಗಳಲ್ಲಿ ವರ್ಷದ 365 ದಿನಗಳಲ್ಲಿಯೂ ಒಂದಲ್ಲ ಒಂದು ರೀತಿಯ ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಸಭೆ ಸಮಾರಂಭಗಳು ನಡೆಯುತ್ತವೆ (ಇಲ್ಲಿ ಸಮರ್ಪಕವಾದ ಶೌಚಾಲಯದ ವ್ಯವಸ್ಥೆ ಇಲ್ಲ). ಇಲ್ಲಿ ಸಾವಿರಾರು ಜನ ಸೇರುತ್ತಾರೆ. ಹಾಗಾಗಿ ಈಗ ಇರುವ ಶೌಚಾಲಯದ ವ್ಯವಸ್ಥೆ ಸಾಲದಾಗಿದೆ. ಹಾಲಿ ಕಲಾಮಂದಿರದ ಒಳ ಭಾಗದಲ್ಲಿರುವ ಎಲ್ಲಾ ಶೌಚಾಲಯಗಳನ್ನು ಮುಚ್ಚಿ, ಆ ಜಾಗದಲ್ಲಿ ಪ್ರೇಕ್ಷಕರು ಕುಳಿತು ಕೊಳ್ಳಲು ವ್ಯವಸ್ಥೆ ಮಾಡಿ, ಕಲಾಮಂದಿರದ ಪಕ್ಕದಲ್ಲಿ ಸಾಕಷ್ಟು ಜಾಗ ಇರುವುದರಿಂದ ಇಲ್ಲಿ ಹತ್ತಾರು ಆಧುನಿಕ ಶೌಚಾಲಯಗಳನ್ನು ನಿರ್ಮಾಣ ಮಾಡಿದರೆ ಕಲಾಮಂದಿರವೂ ಸಾಕಷ್ಟು ವಿಶಾಲವೂ ಆಗುತ್ತದೆ. ಇನ್ನಷ್ಟು ಮೆರುಗು ಬರುತ್ತದೆ. ಕಲಾಮಂದಿರದ ಹೊರಗೆ ಶೌಚಾಲಯಗಳನ್ನು ನಿರ್ಮಿಸುವುದರಿಂದ, ಅಕ್ಕ ಪಕ್ಕದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಬರುವ ಸಾರ್ವಜನಿಕರಿಗೂ ಅನುಕೂಲವಾಗುತ್ತದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಶುದ್ಧ ನೀರು ಕುಡಿಯುವ ಘಟಕ ದುರಸ್ತಿ ಪಡಿಸಿ



ಮಾನ್ಯರೆ,

ಮಂಡ್ಯ ಜಿಲ್ಲೆಯ ಮೇಲುಕೋಟೆ ಹೋಬಳಿ, ಪಾಂಡವಪುರ ತಾಲೂಕಿನ ಕಾಡೇನಹಳ್ಳಿ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಕೆಟ್ಟು ಹಲವು ತಿಂಗಳುಗಳಾಗಿದ್ದು, ಇಲ್ಲಿನ ಜನರಿಗೆ ತುಂಬಾ ತೊಂದರೆಯಾಗಿದೆ.

ಸರ್ಕಾರ ಶುದ್ಧವಾದ ಕುಡಿಯುವ ನೀರಿನ ಘಟಕ ಸ್ಥಾಪಿಸಿದ ಬಳಿಕವಾದರೂ ಶುದ್ಧ ನೀರು ದೊರೆಯಲಿದೆ ಎಂದು ಗ್ರಾಮಸ್ಥರೆಲ್ಲರೂ ನೆಮ್ಮದಿಯಿಂದ ನಿಟ್ಟುಸಿರು ಬಿಟ್ಟಿದ್ದರು. ಆದರೆ ಈ ಶುದ್ಧ ನೀರಿನ ಘಟಕಗಳು ಸರಿಯಾಗಿ 3 ತಿಂಗಳು ಸಹ ಕಾರ್ಯ ನಿರ್ವಹಿಸದೇ ಕೆಟ್ಟು ಹೋಗಿ ನೀರು ಬರದಂತಾಗಿದೆ. ನಲ್ಲಿಯಲ್ಲಿ ಕೊಳಕು ಮಿಶ್ರಿತ ನೀರು ಬರುತ್ತಿದ್ದು ಕುಡಿಯಲು ಯೋಗ್ಯವಾಗಿರುವುದಿಲ್ಲ. ಇಂತಹ ಸಂದರ್ಭದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವು ಹಾಳಾಗಿದ್ದು, ಖಾಸಗಿ ವ್ಯಕ್ತಿಗಳು ನಿರ್ವಹಿಸುತ್ತಿರುವ ನೀರಿನ ಘಟಕದಲ್ಲಿ ಹೆಚ್ಚಿನ ಹಣ ನೀಡಿ ಗ್ರಾಮಸ್ಥರು ಶುದ್ಧ ಕುಡಿಯುವ ನೀರನ್ನು ಖರೀದಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದುವರೆಗೆ ಸರಿಪಡಿಸುವ ಯಾವ ಕಾರ್ಯವನ್ನು ಸ್ಥಳೀಯ ಸರ್ಕಾರ ಕೈಗೊಂಡಿಲ್ಲ. ಈ ಸಮಸ್ಯೆ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಈ ಕೂಡಲೇ ಕ್ರಮ ವಹಿಸಬೇಕೆಂದು ಗ್ರಾಮಸ್ಥರ ಒತ್ತಾಯ

–ಕೆ.ಎನ್. ಸೋನುಪ್ರಿಯಾ, ಡಿ ಬಾನುಮಯ್ಯ ಕಾಲೇಜು, ಮೈಸೂರು.

ಮೈಸೂರಿನಲ್ಲಿ ಇರುವುದನ್ನು ಇದ್ದ ಹಾಗೆ ಕಾಪಾಡಿಕೊಂಡು ಹೋದರೆ ಸಾಕು...!?



ಮೈಸೂರು– ಕೊಡಗು ಸಂಸದರಿಗೆ ಒಂದು ಬಹಿರಂಗ ಮನವಿ ಪತ್ರ

- ಮಿರ್ಲೆ ಚಂದ್ರಶೇಖರ,
ಲೇಖಕರು, ಮೊ: 9916129654

ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರೇ...

ಮೊಟ್ಟಮೊದಲಿಗೆ ಇಡೀ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಪ್ರತಿಯೊಬ್ಬ ನಾಗರಿಕರ ಪರವಾಗಿ ಅಭಿನಂದನೆಗಳು. ಶ್ರೀಕಂಠದತ್ತ ನರಸಿಂಹರಾಜ ಒಡೆಯರ್‌ರವರ ನಂತರ ಮೈಸೂರು ಸಂಸ್ಥಾನದ 27ನೇ ಉತ್ತರಾಧಿಕಾರಿಯಾಗಿ 28 ಮೇ 2015 ರಂದು ಪದಗ್ರಹಣ ಮಾಡಿ, ಈಗ ಜನಸಾಮಾನ್ಯನಾಗಿ ಜನರೊಂದಿಗೆ ಬೆರೆತು ಜನಮನ್ನಣೆ ಗಳಿಸಿದ್ದೀರಿ. ಇದನ್ನು ಚುನಾವಣಾ ಸಮಯದಲ್ಲಿ ಬೀದಿ ಬದಿಯ ಹೋಟೇಲ್‌ಗಳಲ್ಲಿ ತಿಂಡಿ–ಚಹಾ ಸೇವಿಸುವ ಮೂಲಕ ಸಾಬೀತುಪಡಿಸಿದ್ದೀರಿ. ನೀವು ಚುನಾವಣೆಗೆ ಅಭ್ಯರ್ಥಿ ಎಂದು ಘೋಷಿಸಿದಾಗ ಬಹಳಷ್ಟು ಜನರಲ್ಲಿ ಇವರು ಅರಮನೆಯಿಂದ ಹೊರಗೆ ಬಂದು ಜನರೊಂದಿಗೆ ಬೆರೆಯುತ್ತಾರಾ, ಅವರ ಕಷ್ಟ–ಸುಖಗಳಿಗೆ ಸ್ಪಂದಿಸುತ್ತಾರಾ, ಇವರನ್ನು ಭೇಟಿ ಆಗುವುದಕ್ಕೆ ಸಾಧ್ಯವಿದೆಯೇ ಇತ್ಯಾದಿ ಹಲವು ಸಂಶಯಗಳಿದ್ದವು.

ಪ್ರಚಾರದ ವೇಳೆ ಅರ್ಧದಷ್ಟು ಸಂಶಯವನ್ನು ಹೋಗಲಾಡಿಸಿದ್ದೀರಿ. ದೊಡ್ಡದೊಡ್ಡ ಯೋಜನೆಗಳನ್ನು ಮೈಸೂರಿಗೆ ತಂದರೆ ಮಾತ್ರ ಜನಪರ ಕೆಲಸಗಳಾದವೆಂದು ಪರಿಗಣಿಸಲಾಗದು. ಮತದಾರನಿಗೆ ಲಭ್ಯವಿದ್ದು ನಿಮ್ಮಿಂದ ಒಂದಷ್ಟು ಸಾಂತ್ವನದ ನುಡಿಗಳು ಸಾಕು ಮಹಾರಾಜರು ನಮ್ಮವರೆಂದು ಅಪ್ಪಿಕೊಳ್ಳಲು. ಸರ್ಕಾರಿ ಕೆಲಸಗಳು ಜನಪ್ರತಿನಿಧಿಗಳು ಇಲ್ಲದಿದ್ದಾಗ್ಯೂ ನಡೆದುಕೊಂಡು ಹೋಗುತ್ತವೆ.

ನಿಮ್ಮ ಭಾಷಣಗಳಿಂದ ಮೈಸೂರು–ಕೊಡಗು ಜಿಲ್ಲೆಗಳ ಬಗ್ಗೆ ಇಟ್ಟುಕೊಂಡಿರುವ ಕನಸುಗಳು ಹಾಗೂ ಭವಿಷ್ಯದಲ್ಲಿ ಅನುಷ್ಠಾನಗೊಳಿಸಬೇಕಾಗಿರುವ ಯೋಜನೆಗಳ ಬಗ್ಗೆ ಬಲ್ಲವನಾಗಿದ್ದೇನೆ. ಮೈಸೂರು ಭಾಗದಲ್ಲಿ ತಮ್ಮ ಪೂರ್ವಿಕರು ಕೈಗೊಂಡಿರುವ ಯೋಜನೆಗಳಿಂದಲೇ ಇಂದಿಗೂ ಜನರು ಮೂರೊತ್ತು ಅನ್ನ–ನೀರನ್ನು ಕಾಣುತ್ತಿರುವುದು. ಪ್ರಜಾಪ್ರಭುತ್ವ ಆಡಳಿತದ ಸರ್ಕಾರಗಳು ದಸರಾ ಸಮಯದಲ್ಲಿ ಮಾಡುವ ತೇಪೆ ಕೆಲಸಗಳನ್ನು ಹೊರತುಪಡಿಸಿದರೆ ಯಾವುದಾದರೂ ಹೇಳಿಕೊಳ್ಳುವಂತಹ ಅಥವಾ ನೂರಾರು ವರ್ಷ ಉಳಿಯುವಂತಹ ಯೋಜನೆಗಳು ಆಗಿವೆಯೇ, ಆಗಿದ್ದರೂ ಗುಣಾತ್ಮಕವಾಗಿ ನಿರ್ಮಾಣ ಆಗಿವೆಯೇ! ಹೋಗಲಿ ಬಿಡಿ. **ಹಣವೇ ಮತವಾಗಿ ಪರಿವರ್ತನೆಯಾಗುತ್ತಿರುವಾಗ ಜನಪ್ರತಿ ಯಾದವನು ತಾನೆ ಏನು ಮಾಡಲಿಕ್ಕೆ ಸಾಧ್ಯ ಎಂಬ ಸ್ಥಿತಿಯಲ್ಲಿ ಇದ್ದೇವೆ!?.** ಇಂಥಹ ವ್ಯವಸ್ಥೆಯಲ್ಲಿ ನಿಮ್ಮ ಆಯ್ಕೆ ವಿಶೇಷವಾಗಿದೆ. ರಾಜಾಡಳಿತದ ಮೇಲೆ ಜನರು ಇಟ್ಟಿರುವ ದೃಢ ನಂಬಿಕೆಯು ಜನಮನದಲ್ಲಿ ಇನ್ನೂ ಸ್ಥಿರವಾಗಿರುವ ಕಾರಣ ನಿಮ್ಮನ್ನು ಜನಪ್ರತಿನಿಧಿ ಆಗಿ ಚುನಾಯಿಸಿದೆ.

ಅಭಿವೃದ್ಧಿಯ ನಿಟ್ಟಿನಲ್ಲಿ ನನ್ನ ಕನಿಷ್ಠ ಇಂಜಿನಿಯರಿಂಗ್ ಜ್ಞಾನದ ಮಿತಿಯಲ್ಲಿ ತಮ್ಮ ಅವಗಾಹನೆಗೆ ಕೆಲವು ಯೋಜನೆಗಳ ಕುರಿತಾಗಿ ತಿಳಿಯಬಯಸುತ್ತೇನೆ. ಯಾವುದೇ ಒಂದು ಪ್ರದೇಶದ ಸರ್ವತೋಮುಖ ಅಭಿವೃದ್ಧಿಗಾಗಿ ಕೃಷಿ, ಪ್ರವಾಸೋದ್ಯಮ, ಶಿಕ್ಷಣ, ಆರೋಗ್ಯ, ಕೈಗಾರಿಕಾ ಕ್ಷೇತ್ರಗಳು ಹಾಗೂ ಮೂಲಭೂತ ಸೌಕರ್ಯಗಳ ಕಡೆಗೆ ಒತ್ತು ಕೊಡಬೇಕಾಗುತ್ತದೆ. ನಾಲ್ವಡಿ ಕೃಷ್ಣರಾಜರ ಆಡಳಿತದ ವೈಖರಿಯನ್ನು ಸ್ವಲ್ಪವೇ ಸ್ವಲ್ಪ ಅನುಸರಿಸಿದರೆ ಆಯಿತು ಬೇರೆ ಯಾವ ಮಾರ್ಗದರ್ಶನವಾಗಲಿ ಫಾರ್ಮುಲಾವಾಗಲಿ, ಬೇಕಾಗುವುದಿಲ್ಲ.

ಕೃಷಿ

ಕೃಷಿ ಕ್ಷೇತ್ರ ಬೆಳವಣಿಗೆಯಾದರೆ ಇತರೆ ಎಲ್ಲಾ ಕ್ಷೇತ್ರಗಳು ತನ್ನಿಂತಾನೆ ಅಭಿವೃದ್ಧಿ ಕಾಣುವುದು, ಎಲ್ಲವೂ ರೈತನ ಉಳುಮೆಯ ಮೇಲೆ ನಿಂತಿರುತ್ತದೆ. ಇದನ್ನ ಅರಿತೆ ತಮ್ಮ ಪೂರ್ವಿಕರಾದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು **ಕನ್ನಂಬಾಡಿ ಅಣೆಕಟ್ಟೆಯನ್ನು**, ಚಾಮರಾಜ ಒಡೆಯರ್‌ರವರ ಪತ್ನಿ ರಾಣಿ ಕೆಂಪನಂಜಮ್ಮಣಿಯವರು **ವಾಣಿವಿಲಾಸ ಸಾಗರ ಅಣೆಕಟ್ಟೆ,** ಜಯಚಾಮರಾಜೇಂದ್ರ ಒಡೆಯರ್‌ರವರು **ಗಾಯತ್ರಿ ಜಲಾಶಯವನ್ನು** ಹಾಗೂ ಕಾವೇರಿ ನದಿಗೆ ಹಲವು ಚಿಕ್ಕಪುಟ್ಟ ಅಣೆಕಟ್ಟೆಗಳನ್ನು ಕಟ್ಟಿಸಿ ಲಕ್ಷಾಂತರ ಎಕರೆಗಳಿಗೆ ನೀರುಣಿಸುವ ಮೂಲಕ 18ನೇ ಶತಮಾನದಲ್ಲೇ ನೀರಾವರಿಗೆ ಒತ್ತು ನೀಡಿದರು. ಇಂದು ಕೃಷಿ ಕ್ಷೇತ್ರದಲ್ಲಿ ಮೂಲ ಕಸುಬಿನ ರೈತರು ಬಿತ್ತುಳುವುದನ್ನು ಬಿಟ್ಟು ಅಂಗೈ ಅಗಲ ಜಮೀನು ಇದ್ದವರೂ ಕೂಡ ಹಣದ ಆಸೆಗಾಗಿ ರಿಯಲ್ ಎಸ್ಟೇಟ್‌ನವರಿಗೆ ಮಾರಿಕೊಳ್ಳುತ್ತಿದ್ದಾರೆ, ಕಾರಣ ಬೆವರು ಸುರಿಸಿ ಎಷ್ಟೇ ದುಡಿದರೂ ಅನ್ನದಾತ ಲಾಭವನ್ನೇ ಕಾಣದ ಸ್ಥಿತಿಯಲ್ಲಿ ಇಲ್ಲದಿರುವುದು. ನಿಮ್ಮ ಮೊದಲ ಆದ್ಯತೆ ಕೃಷಿ ಕ್ಷೇತ್ರದ ಕಡೆಗೆ ಇರಲಿ ಶೇ 60 ರಷ್ಟು ಜನರು ಇದನ್ನೇ ನಂಬಿ ಬದುಕುತ್ತಿರುವುದು. ಅವರಿಗೆ ದೊರೆಯಬೇಕಾಗಿರುವ ಸರ್ಕಾರಿ ಸೌಲಭ್ಯಗಳನ್ನು ಕೊಡಿಸುವಲ್ಲಿ ನಿಮ್ಮ ಚಿತ್ತವಿರಲಿ.

ಪ್ರವಾಸೋದ್ಯಮ

ನಿಮಗೆ ಈ ಕ್ಷೇತ್ರದಲ್ಲಿ ಅಪಾರ ತಿಳುವಳಿಕೆ ಇದೆ. ಮೈಸೂರು ಸಾಂಸ್ಕೃತಿಕ ನಗರವೆಂದು ವಿಶ್ವಮಟ್ಟದಲ್ಲಿ ಗುರುತಿಸಲ್ಪಟ್ಟಿದೆ, ಆದರೆ ಆ ಮಟ್ಟಕ್ಕೆ ನಾವು ನಗರ ಹಾಗೂ ಸಮೀಪ ಇರುವ ಪ್ರವಾಸಿ ತಾಣಗಳನ್ನು ಅಭಿವೃದ್ಧಿಗೊಳಿಸಬೇಕಾಗಿದೆ. ಪ್ರಪಂಚದ ಜನರನ್ನು ಸೆಳೆಯುವ ದಸರಾ ಹಬ್ಬವು ಯಾವಾಗಲೂ ಹರಿಬಿರಿಯಲ್ಲೇ ಹತ್ತಾರು ಸಮಿತಿಗಳನ್ನು ರಚಿಸಿ ಬಣ್ಣ ಹಾಗೂ ತೇಪೆ ಕೆಲಸಗಳಲ್ಲೇ ಮುಗಿದು ಹೋಗುತ್ತದೆ. ಎಂದೂ ಶಾಶ್ವತ ಕೆಲಸಗಳು ಆಗಲೇ ಇಲ್ಲ. **ನೆನೆಗುದಿಗೆ ಬಿದ್ದಿರುವ ದಸರಾ ಪ್ರಾಧಿಕಾರ ರಚನೆಗೆ ವಿಶೇಷ ಒತ್ತುಕೊಟ್ಟು ರಾಜಕೀಯ ಹಿಂಬಾಲಕರ ಹಬ್ಬವಾಗದೆ ಜನರ ಹಬ್ಬವಾಗಲಿ.** ನಾಡಿನ ನಾನಾ ಮೂಲೆಗಳಿಂದ ಬರುವ ಪ್ರವಾಸಿಗರಿಗೆ ಕೆಲವು ಜನ ಮೋಸ ಮಾಡುವುದರಿಂದ ಮೈಸೂರಿಗೆ ಕೆಟ್ಟ ಹೆಸರು ಬಂದಿದೆ. ಪರ ಊರಿನ ಜನರನ್ನು ಯಾಮಾರಿಸುವ ಮಾರಾಟ ಮಳಿಗೆಗಳು, ಕೆಲವು ಟಾಂಗಾ ಮತ್ತು ಆಟೋ ಗಾಡಿಗಳ ಮೇಲೆ ಶಿಸ್ತುಪಾಲನೆಯ ಉಸ್ತುವಾರಿಗೆ ಪರಿಶೀಲನಾಧಿಕಾರಿಗಳನ್ನು ನೇಮಿಸಿದರೆ ಒಳ್ಳೆಯದು. ಲಲಿತಮಹಲ್ ಹೊಟೇಲ್, ಜಗನಮೋಹನ ಪ್ಯಾಲೇಸ್ ಹಾಗೂ ಇತರೆ ಪಾರಂಪರಿಕ ಕಟ್ಟಡಗಳು ಜನಸ್ನೇಹಿಯಾಗಿ ಇಲ್ಲದಿರುವುದು ಜನರಲ್ಲಿ ಆಕ್ರೋಶವಿದೆ. ಇವುಗಳನ್ನು ನೋಡಲು ಸಾಮಾನ್ಯನು ಹೋದರೆ ಮುಖ್ಯದ್ವಾರದಲ್ಲೇ ಹಣ ತೆತ್ತರೆ ಮಾತ್ರ ಒಳಗೆ ಬಿಡುವುದು.

ನಗರದಲ್ಲಿ ಹಿಂದೆ ನಿರ್ಮಿಸಲ್ಪಟ್ಟಿದ್ದ ಕಮಾನು ಗೇಟುಗಳು ಕುಸಿಯುತ್ತಿವೆ. ಅವುಗಳನ್ನು ಪುನಶ್ಚೇತನಗೊಳಿಸುವ ಜೊತೆಗೆ ಮೈಸೂರು ಶರವೇಗದಲ್ಲಿ ಬೆಳೆಯುತ್ತಿರುವುದರಿಂದ **ಈಗಲೇ ಮೆಟ್ರೋ ಯೋಜನೆ, ಸಮಾನಾಂತರ ಹೊರವರ್ತುಲ ರಸ್ತೆಗಳಿಗೆ ವಿಸ್ತೃತ ಯೋಜನಾ ವರದಿ ಸಿದ್ದಪಡಿಸಿ ಕಾರ್ಯೋನ್ಮುಖ ಆಗುವುದು ಹಾಗೂ ನಗರವನ್ನು ಸೇರುವ ಎಲ್ಲಾ ಮುಖ್ಯ ರಸ್ತೆಗಳಲ್ಲಿ ಪಾರಂಪರಿಕ ಶೈಲಿಯಲ್ಲಿ ಸ್ವಾಗತ ಕಮಾನು ಗೇಟುಗಳನ್ನು** ನಿರ್ಮಿಸುವುದು.

ನಗರ ಹೊರವಲಯದ ಸಿಕ್ಕ ಸಿಕ್ಕ ಕಡೆಗಳಲ್ಲಿ ಕಸ ಹಾಗೂ ಕಟ್ಟಡಗಳ ತ್ಯಾಜ್ಯವನ್ನು ಸುರಿದು ಅಂದಗೆಡಿಸುತ್ತಿರುವುದರಿಂದ ನಗರವನ್ನು ಪ್ರವೇಶಿಸುವಾಗಲೇ ಎಂಥಹ ಊರಪ್ಪ ಇದು ಎನ್ನುವ ಭಾವನೆಯನ್ನು ಪ್ರವಾಸಿಗರಿಗೆ ಉಂಟುಮಾಡಿಬಿಡುತ್ತದೆ. ಇನ್ನು ರಿಂಗ್ ರೋಡ್ ಅವ್ಯವಸ್ಥೆ ಹೇಳತೀರದು.

ಚಾಮುಂಡಿಬೆಟ್ಟವು ಅಸಂಬದ್ಧ ಯೋಜನೆಗಳ ಅನುಷ್ಠಾನದಿಂದಾಗಿ ಅಲ್ಲಲ್ಲಿ ಕುಸಿಯುವುದನ್ನು ಕಾಣುತ್ತಿದ್ದೇವೆ. ವೈಜ್ಞಾನಿಕ ತಿಳುವಳಿಕ ಇಲ್ಲದೆ ರೂಪಿಸುವ ಯೋಜನೆಗಳು ಭವಿಷ್ಯದಲ್ಲಿ ದುರಂತಗಳನ್ನು ಸೃಷ್ಟಿಸಿಬಿಡುತ್ತದೆ ಎಂಬುದಕ್ಕೆ ಬೆಟ್ಟ ಕುಸಿದಿರುವುದೇ ಜ್ವಲಂತ ಸಾಕ್ಷಿ. ತಳದಿಂದ ಕೇವಲ ಏಳು ಕಿಮೀ ಇರುವ ಚಾಮುಂಡಿ ದೇವಸ್ಥಾನಕ್ಕೆ ಹೋಗಿ ಬರುವುದು ಕಷ್ಟವೇನಲ್ಲ, ಬೆಟ್ಟದ ಮೇಲೆ ಅಭಿವೃದ್ಧಿಯ ಹೆಸರಿನಲ್ಲಿ ಕಾಂಕ್ರೀಟ್ ಕಟ್ಟಡಗಳು ಹೆಚ್ಚುತ್ತಿವೆ. ಕೃತಕವಾಗಿ ಹೇರುವ ಸಾವಿರಾರು ಟನ್ ಹೊರೆಯಿಂದ ಕುಸಿಯುವುದಕ್ಕೆ ಕಾರಣವಾಗಿದೆ. ಸಾವಿರ ವರ್ಷಗಳಿಗೂ ಹಿಂದಿನ ಇತಿಹಾಸ ಇರುವ ಹಾಗೂ **17ನೇ ಶತಮಾನದಲ್ಲಿ ನಿರ್ಮಿಸಿರುವ ಗೋಪುರಗಳಿಂದ ಇಲ್ಲಿಯವರೆಗೆ ಯಾವುದೇ ಕುಸಿತ ಕಾಣದಿದ್ದ ಬೆಟ್ಟವು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡ ತರುವಾಯ ಕುಸಿದಿದೆ ಎಂದರೆ ಕಾರಣ ಏನಿರಬಹುದು? ಇದರ ಜೊತೆಗೆ ರೋಪ್‌ವೇ ನಿರ್ಮಾಣದ ಚರ್ಚೆ ಬೇರೆ. ಇದರ ಅವಶ್ಯಕತೆ ಅಂತು ತೀರಾ ಹಾಸ್ಯಾಸ್ಪದ. ನಾಗರಿಕರ ವಿರೋಧ ಇಲ್ಲದಿದ್ದಲ್ಲಿ ಇಷ್ಟೊತ್ತಿಗೆ ಬೆಟ್ಟವನ್ನು ಪೂರ್ಣವಾಗಿ ನೆಲಸಮಗೊಳಿಸಿ ಬಡಾವಣೆಗಳನ್ನು ಮಾಡಿ ಬಂಗಲೆಗಳನ್ನು ಕಟ್ಟಿಬಿಡುತ್ತಿದ್ದರು.**

ಮೈಸೂರಿನಲ್ಲಿ ಇರುವುದನ್ನು ಇದ್ದ ಹಾಗೆ ಕಾಪಾಡಿಕೊಂಡು ಹೋದರೆ ಸಾಕು ಯಾವುದೇ ಆಧುನಿಕ ಅಭಿವೃದ್ಧಿಯ ಅವಶ್ಯಕತೆ ಬೇಕಿಲ್ಲ. ಅಭಿವೃದ್ಧಿ ಎಂಬ ಮಹಾಮಾರಿ ನಗರದ ಜನತೆಯ ನೆಮ್ಮದಿಯನ್ನೇ ಹಾಳುಮಾಡಿಬಿಡುತ್ತದೆ. ಮೈಸೂರು ಇನ್ನೊಂದು ಬೆಂಗಳೂರು ಆಗುವುದು ಬೇಡ.

> **66 ಚಾಮುಂಡಿಬೆಟ್ಟವು ಅಸಂಬದ್ಧ ಯೋಜನೆಗಳ ಅನುಷ್ಠಾನದಿಂದಾಗಿ ಅಲ್ಲಲ್ಲಿ ಕುಸಿಯುವುದನ್ನು ಕಾಣುತ್ತಿದ್ದೇವೆ. ವೈಜ್ಞಾನಿಕ ತಿಳುವಳಿಕ ಇಲ್ಲದೆ ರೂಪಿಸುವ ಯೋಜನೆಗಳು ಭವಿಷ್ಯದಲ್ಲಿ ದುರಂತಗಳನ್ನು ಸೃಷ್ಟಿಸಿಬಿಡುತ್ತದೆ ಎಂಬುದಕ್ಕೆ ಬೆಟ್ಟ ಕುಸಿದಿರುವುದೇ ಜ್ವಲಂತ ಸಾಕ್ಷಿ. ತಳದಿಂದ ಕೇವಲ ಏಳು ಕಿಮೀ ಇರುವ ಚಾಮುಂಡಿ ದೇವಸ್ಥಾನಕ್ಕೆ ಹೋಗಿ ಬರುವುದು ಕಷ್ಟವೇನಲ್ಲ, ಬೆಟ್ಟದ ಮೇಲೆ ಅಭಿವೃದ್ಧಿಯ ಹೆಸರಿ ನಲ್ಲಿ ಕಾಂಕ್ರೀಟ್ ಕಟ್ಟಡಗಳು ಹೆಚ್ಚುತ್ತಿವೆ. ಕೃತಕವಾಗಿ ಹೇರುವ ಸಾವಿರಾರು ಟನ್ ಹೊರೆಯಿಂದ ಕುಸಿಯುವುದಕ್ಕೆ ಕಾರಣವಾಗಿದೆ.**

ಸನ್ಮಾನ್ಯ ಮಾಜಿ ಪ್ರಧಾನಿಗಳು ಬಹಳ ವರ್ಷಗಳ ಹಿಂದೆ ನೈಸ್ ರಸ್ತೆಯನ್ನು ಸಕಾರಣಗಳಿಂದ ವಿರೋಧ ಮಾಡಿದ್ದರಿಂದ ಮೈಸೂರು ಬದುಕಿದೆ. ಇಲ್ಲದಿದ್ದಲ್ಲಿ ಇಷ್ಟೊತ್ತಿಗೆ ಹಾಳೂರು ಆಗಿಬಿಡುತ್ತಿತ್ತು. **ಆದ್ಯತೆ ತೆಗೆದುಕೊಳ್ಳಬೇಕಾಗಿರುವ ಅಭಿವೃದ್ಧಿ ಕೆಲಸಗಳನ್ನು ಮಾತ್ರ ಕೈಗೊಳ್ಳಲಿ. ಅನುದಾನ ಬಂತೆಂದು ಖರ್ಚು ಮಾಡಲೆಂದೇ ತೆಗೆದುಕೊಳ್ಳುವ ಯೋಜನೆಗಳು ಯಾವೂ ನಗರದ ಸೌಂದರ್ಯವನ್ನು ಹೆಚ್ಚಿಸುವುದಿಲ್ಲ, ಬದಲಾಗಿ ಭ್ರಷ್ಟರ ಜೇಬು ತುಂಬಿಸುವ ಯೋಜನೆ ಆಗುವುದು.**

ಶಿಕ್ಷಣ

ಮೈಸೂರು ವಿಶ್ವವಿದ್ಯಾನಿಲಯವನ್ನು 1916ರಲ್ಲಿ ದೂರದೃಷ್ಟಿ ಹೊಂದಿದ್ದ ಅಂದಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದ್ದು, ದೇಶದ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಕಡಿಮೆ ಇಲ್ಲದಂತೆ ತನ್ನ ಘನತೆಯನ್ನು ಉಳಿಸಿಕೊಂಡಿದೆ. ಈಗಿರುವ ವಿಶ್ವವಿದ್ಯಾನಿಲಯಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವುದು ಹಾಗೂ ಮುಖ್ಯವಾಗಿ ಖಾಲಿ ಇರುವ ಹುದ್ದೆಗಳನ್ನು ನಿಮ್ಮ ಅವಧಿಯಲ್ಲಾದರೂ ಭರ್ತಿ ಮಾಡುವ ಕ್ರಿಯೆಗೆ ಚಾಲನೆ ದೊರೆಯಲಿ. ಸಂಸ್ಕೃತಿ ಮತ್ತು ಕಲೆಗಳಿಗೆ ಸಂಬಂಧಿಸಿದ ಶಾಲಾ–ಕಾಲೇಜುಗಳು ಸ್ಥಾಪಿತವಾಗಲಿ.

ಕರ್ನಾಟಕದಲ್ಲಿ ಮೊಟ್ಟಮೊದಲು ನಾಲ್ವಡಿ ಕೃಷ್ಣರಾಜ ಒಡೆಯರಿಂದ 1924ರಲ್ಲಿ ಸ್ಥಾಪಿತವಾದ ಮೈಸೂರು ಮೆಡಿಕಲ್ ಕಾಲೇಜು ಅವ್ಯವಸ್ಥೆಯ ಆಗರವಾಗಿದೆ. ಶತಮಾನ ಕಂಡಿರುವ ಕಾಲೇಜು ಅಸಮರ್ಪಕವಾದ ನಿರ್ವಹಣೆಯಿಂದ ಯಾವಾಗಲೂ ಸುದ್ದಿಯಲ್ಲಿರುತ್ತದೆ. **ರಾಜಮನೆತನದ ಇತಿಹಾಸವುಳ್ಳ ಕಾಲೇಜಿನಲ್ಲಿ ಸೂಪರ್ ಸ್ಪೆಷಾಲಿಟಿ ಕೋರ್ಸ್ ಇಲ್ಲದೇ ಇರುವುದು ವಿಪರ್ಯಾಸ.** ಹುಬ್ಬಳಿಯಂತಹ ನಗರದ ಸರ್ಕಾರಿ ಮೆಡಿಕಲ್ ಕಾಲೇಜಿನಲ್ಲಿ ಇರುವ ಸೂಪರ್ ಸ್ಪೆಷಾಲಿಟಿ ಕೋರ್ಸ್‌ಗಳು ಇಲ್ಲಿ ಏಕಿಲ್ಲ ಎಂಬುದರ ಕಡೆಗೆ ತಮ್ಮ ಗಮನ ಸೆಳೆಯ ಬಯಸುತ್ತೇನೆ.

ಆರೋಗ್ಯ

ಮೈಸೂರಿನಲ್ಲಿ ಆಸ್ಪತ್ರೆಗಳು ಹಾಗೂ ನರ್ಸಿಂಗ್ ಹೋಂಗಳು ಹೆಜ್ಜೆಗೊಂದು ಇವೆ. ಕೆಲವಂತೂ ಸ್ಟಾರ್ ಹೊಟೇಲ್‌ಗಳಂತಿವೆ. ಆದರೆ ಯಾವ ಆಸ್ಪತ್ರೆಗಳ ಮೇಲೂ ಜನರಿಗೆ ನಂಬಿಕೆ ಇಲ್ಲವಾಗಿವೆ. ಒಳಹೋದವರು ಹೊರಗೆ ಬರುವ ಗ್ಯಾರಂಟಿ ಇಲ್ಲವಾದರೂ ಲಕ್ಷಲಕ್ಷ ಹಣ ಪಾವತಿಸಲೇಬೇಕಾಗಿದೆ. ಸದ್ಯ ಇದು ಮೈಸೂರಿನಲ್ಲಿ ಹಣ ಮಾಡುವ ಉದ್ಯಮವಾಗಿದೆ. ಕೆಳವರ್ಗದ ಜನತೆಗಾದರೂ ಉಚಿತವಾಗಿ ಹಾಗೂ ಸಕಾಲದಲ್ಲಿ ಚಿಕಿತ್ಸೆ ದೊರೆಯುವ ಹಾಗೆ ವ್ಯವಸ್ಥೆ ಆಗಲಿ.

ಕೈಗಾರಿಕೆಗಳು

ಹಾಲಿ ಇರುವ ಕೈಗಾರಿಕೆಗಳು ಪುನಶ್ಚೇತನಗೊಂಡರೆ ಸಾಕು. **ಇರುವ ಕೈಗಾರಿಕೆಗಳೇ ಕಾವೇರಿ ನದಿಯನ್ನು ಕಲುಷಿತಗೊಳಿಸುತ್ತಿರುವುದನ್ನು ಮಾಧ್ಯಮಗಳಲ್ಲಿ ನೋಡುತ್ತಿದ್ದೇವೆ.** ಹೆಚ್ಚಿನ ಕೈಗಾರಿಕೆಗಳಿಂದ ಉದ್ಯೋಗ ಸೃಷ್ಟಿ ಆಗಬಹುದು. ಆದರೆ ಇಡೀ ವಾತಾವರಣವನ್ನೇ ಹಾಳು ಮಾಡುವ ಇವುಗಳು ಸದ್ಯಕ್ಕೆ ಬೇಡವೇ ಬೇಡ. **ಪ್ರಶಾಂತವಾದ ಮೈಸೂರು ಕಲುಷಿತಗೊಳ್ಳುವುದು ಬೇಡ. ಪಿಂಚಣಿದಾರರ ಸ್ವರ್ಗವಾಗಿಯೇ ಉಳಿಯಲಿ.**

ಬಹುಮುಖ್ಯವಾದ ಒಂದು ಕೆಲಸ ತ್ವರಿತವಾಗಿ ಆಗಲೇ ಬೇಕಿರುವುದು ಗ್ರಾಮಾಂತರ ಬಸ್ ನಿಲ್ದಾಣದ ವಿಸ್ತರಣೆ, ಕಾಲಿಡುವುದಕ್ಕೂ ಸ್ಥಳ ಇಲ್ಲದಂತೆ ಜನರು ಹಾಗೂ ಬಸ್ಸುಗಳು ತುಂಬಿ ತುಳುಕುತ್ತಿರುತ್ತವೆ. ಮುಖ್ಯಮಂತ್ರಿಗಳು ನಮ್ಮವರೇ ಇದ್ದಾಗ್ಯೂ ಏಕೆ ಇನ್ನೂ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲವೋ?, ನಾಗರಿಕರಾದ ನಮಗೇ ನಾಚಿಕೆ ಆಗುತ್ತಿದೆ.

ಮೂಲಭೂತ ಸೌಕರ್ಯಗಳು ಜನರಿಗೆ ತಲುಪಿವೆ. ಆದರೆ ಉಚಿತವಾಗಿ ಕೊಡುವ ಬದಲು ಸಬ್ಸಿಡಿ ದರದಲ್ಲಿ ಸಿಗುವಂತಾಗಲಿ. ಉಚಿತವಾಗಿ ಪಡೆಯುವ ಸೌಲಭ್ಯಗಳಿಂದ ಇನ್ನಿತರೆ ಜನರಿಗೆ ಹೊರೆ ಆಗುವುದು ಯಾವ ನ್ಯಾಯ. ಒಟ್ಟಿನಲ್ಲಿ ನಿಮ್ಮ ಮೇಲೆ ಕ್ಷೇತ್ರದ ಜನರಿಗೆ ಬಹಳವೇ ನಿರೀಕ್ಷೆಗಳಿವೆ, ಅವರಿಗೆ ಮೊದಲು ಬೇಕಾಗಿರುವುದು ನಿಮ್ಮ ಭೇಟಿ, ಖಂಡಿತ ಎಲ್ಲರಿಗೂ ಸಿಗುತ್ತೀರಿ ಎಂಬ ನಂಬಿಕೆ ಇದೆ. ಕೊಡಗಿನ ಸ್ಥಿತಿಗತಿಗಳ ಬಗ್ಗೆ ನನಗೆ ನಿಖರ ಮಾಹಿತಿ ಇಲ್ಲದ ಕಾರಣ ಇಲ್ಲಿ ಪ್ರಸ್ತಾಪಿಸಿರುವುದಿಲ್ಲ

The ballot is stronger than bullet ಎಂದು ಅಬ್ರಾಹಂ ಲಿಂಕನ್ ಹೇಳಿರುವಂತೆ ಪ್ರಜಾಪ್ರಭುತ್ವದಲ್ಲಿ ಅಧಿಕಾರಕ್ಕೆ ಎಷ್ಟೇ ಎತ್ತರಕ್ಕೆ ಏರಿದರೂ ಜನರ ಭಾವನೆಗಳಿಗೆ ದಕ್ಕೆಯಾದರೆ ಬ್ಯಾಲೆಟ್ ಬುಲೆಟ್ ಆಗುವುದರಲ್ಲಿ ಸಂಶಯವಿಲ್ಲ. ಪ್ರತೀ ಚುನಾವಣೆಯಲ್ಲೂ ಇದನ್ನು ನೋಡಿಕೊಂಡು ಬಂದಿದ್ದೇವೆ. ಕೊನೆಯದಾಗಿ ನಿಮ್ಮ ರಾಜಕೀಯ ಜೀವನ ಉಜ್ವಲವಾಗಿರಲೆಂದು ಹಾರೈಸುತ್ತಾ ಮತದಾರನಾಗಿ ನಿಮ್ಮ ಸ್ಪಂದನೆಯ ನಿರೀಕ್ಷಣೆಯಲ್ಲಿದ್ದೇನೆ.

ಇಂದು ಟಿ20 ವಿಶ್ವಕಪ್ ಫೈನಲ್

ಪ್ರಶಸ್ತಿಗಾಗಿ ಭಾರತ–ದಕ್ಷಿಣ ಆಫ್ರಿಕಾ ಸೆಣಸಾಟ

ಬಾರ್ಬಡೋಸ್, ಜೂ.29– ವಿಶ್ವಕಪ್ ಫೈನಲ್ ಪಂದ್ಯಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಪ್ರಶಸ್ತಿಗಾಗಿ ಭಾರತ ಹಾಗೂ ದಕ್ಷಿಣ ಆಫ್ರಿಕಾ ತಂಡಗಳು ಸೆಣಸಾಡಲಿವೆ.

ಜೂ.29ರಂದು ಶನಿವಾರ ಇಲ್ಲಿನ ಕೆನ್ಸಿಂಗ್ಟನ್ ಓವಲ್ ಕ್ರೀಡಾಂಗಣದಲ್ಲಿ ಭಾರತೀಯ ಕಾಲಮಾನ ರಾತ್ರಿ 8 ಗಂಟೆಗೆ ಪಂದ್ಯ ಆರಂಭವಾಗಲಿದ್ದು, ಭಾರತ ಟಿ20 ವಿಶ್ವಕಪ್ ಗೆಲ್ಲುವ ನೆಚ್ಚಿನ ತಂಡವಾಗಿದೆ. 2007ರ ಬಳಿಕ ಟಿ20 ವಿಶ್ವಕಪ್ ಗೆಲ್ಲಲು ಭಾರತ ತಂಡ ಎದುರು ನೋಡುತ್ತಿದ್ದರೆ, ಚೋಕರ್ಸ್ ಹಣೆಪಟ್ಟಿ ಪಡೆದಿರುವ ದಕ್ಷಿಣ ಆಫ್ರಿಕಾ, ಚೊಚ್ಚಲ ವಿಶ್ವಕಪ್ ಗೆಲ್ಲುವ ಪ್ರಯತ್ನದಲ್ಲಿದೆ.

ಕಳೆದ ವರ್ಷ ತವರಿನಲ್ಲಿ ನಡೆದ ಏಕ ದಿನ ವಿಶ್ವಕಪ್‌ನಂತೆಯೇ ಅಜೇಯರಾಗಿ ಟಿ–20 ವಿಶ್ವಕಪ್ ಫೈನಲ್ ಹಂತಕ್ಕೆ ರೋಹಿತ್ ಶರ್ಮಾ ಬಳಗ ತಲುಪಿದೆ. ಟ್ರೋಫಿ ಗೆಲ್ಲುವ ಹಾದಿಯಲ್ಲಿ ಆಸ್ಟ್ರೇಲಿಯಾ ಎಂಬ ಬಲಿಷ್ಠ ಎದುರಾಳಿಯನ್ನು ಈ ಬಾರಿ ಟೀಂ ಇಂಡಿಯಾ ಹೊಂದಿಲ್ಲ. ಬದಲಿಗೆ, ದಶಕಗಳ ಕಾಲ ಐಸಿಸಿ ಟ್ರೋಫಿಯನ್ನೇ ಕಾಣದ ದಕ್ಷಿಣ ಆಫ್ರಿಕಾದೊಂದಿಗೆ ಪ್ರಶಸ್ತಿಗಾಗಿ ಹೋರಾಟ ಏರ್ಪಟ್ಟಿದೆ.

ಸ್ಥಳ: ಕೆನ್ಸಿಂಗ್ಟನ್ ಓವಲ್, ಬ್ರಿಡ್ಜ್‌ಟೌನ್
ದಿನಾಂಕ: ಜೂನ್ 29
ಸಮಯ: ರಾತ್ರಿ 8 ಗಂಟೆ
(ಭಾರತೀಯ ಕಾಲಮಾನ)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಡಿಡಿ, ಡಿಸ್ನಿ ಹಾಟ್‌ಸ್ಟಾರ್

1998ರ ಚಾಂಪಿಯನ್ಸ್ ಟ್ರೋಫಿಯಲ್ಲಿ ಹರಿಣಗಳು ಪ್ರಶಸ್ತಿಗೆ ಮುತ್ತಿಕ್ಕಿದ್ದರು. ಇದರ ನಂತರ ತಂಡ ಯಾವುದೇ ಐಸಿಸಿ ಟ್ರೋಫಿ ಗೆದ್ದಿಲ್ಲ. ಅಲ್ಲದೇ, ಪ್ರತಿ ಸೆಮಿಫೈನಲ್‌ನಲ್ಲಿ ಸೋಲುವ ಮೂಲಕ ತಮ್ಮ ಅಂತಾರಾಷ್ಟ್ರೀಯ ಕ್ರಿಕೆಟ್ ಪಯಣದಲ್ಲಿ ಚೋಕರ್ಸ್ ಎಂಬ ಹಣೆಪಟ್ಟಿ ಹೊಂದಿದ್ದರು. ಆದರೆ, ಈಗ ಚೋಕರ್ಸ್ ಅಪಖ್ಯಾತಿಯನ್ನು ಅಳಿಸಿ ಹಾಕಿ ತಮ್ಮದೇ ಆದ ಭರವಸೆ ಮತ್ತು ಕನಸುಗಳೊಂದಿಗೆ ಫೈನಲ್‌ಗೆ ಲಗ್ಗೆ ಇಟ್ಟಿದ್ದಾರೆ.

ಒಟ್ಟಾರೆ ಉಭಯ ತಂಡಗಳು ಬ್ಯಾಟಿಂಗ್, ಬೌಲಿಂಗ್ ಸೇರಿದಂತೆ ಎಲ್ಲಾ ವಿಭಾಗದಲ್ಲೂ ಬಲಿಷ್ಠವಾಗಿದ್ದು ಪಂದ್ಯ ರೋಚಕತೆಯಿಂದ ಕೂಡಿರಲಿದೆ.

ತಂಡಗಳು ಇಂತಿವೆ:

ಭಾರತ: ರೋಹಿತ್ ಶರ್ಮಾ (ನಾಯಕ), ವಿರಾಟ್ ಕೊಹ್ಲಿ, ರಿಷಬ್ ಪಂತ್ (ವಿಕೆಟ್ ಕೀಪರ್), ಸೂರ್ಯ ಕುಮಾರ್ ಯಾದವ್, ಶಿವಂ ದುಬೆ, ಹಾರ್ದಿಕ್ ಪಾಂಡ್ಯ, ರವೀಂದ್ರ ಜಡೇಜಾ, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಅರ್ಷದೀಪ್ ಸಿಂಗ್, ಜಸ್ಪ್ರೀತ್ ಬುಮ್ರಾ, ಯಜ್ವೇಂದ್ರ ಚಹಾಲ್, ಸಂಜು ಸ್ಯಾಮ್ಸನ್, ಮೊಹಮ್ಮದ್ ಸಿರಾಜ್, ಯಶಸ್ವಿ ಜೈಸ್ವಾಲ್.

ದಕ್ಷಿಣ ಆಫ್ರಿಕಾ: ಕ್ವಿಂಟನ್ ಡಿ ಕಾಕ್ (ವಿಕೆಟ್ ಕೀಪರ್), ರೀಜಾ ಹೆಂಡ್ರಿಕ್ಸ್, ಏಡೆನ್ ಮಾರ್ಕ್ರಾಮ್(ನಾಯಕ), ಹೆನ್ರಿಚ್ ಕ್ಲಾಸೆನ್, ಡೇವಿಡ್ ಮಿಲ್ಲರ್, ಟ್ರಿಸ್ಟಾನ್ ಸ್ಟಬ್ಸ್, ಮಾರ್ಕೊ ಜಾನ್ಸೆನ್, ಕೇಶವ್ ಮಹಾರಾಜ್, ಕಗಿಸೊ ರಬಾಡ, ಆನ್ರಿಚ್ ನಾರ್ಟ್ಜೆ, ತಬ್ರೈಜ್ ಶಮ್ಸಿ, ಒಟ್ನೀಲ್ ಬಾರ್ಟ್‌ಮನ್, ಜೆರಾಲ್ಡ್ ಕೋಟ್ಜೆ ಫಾರ್ಚುಯಿನ್, ರಯಾನ್ ರಿಕೆಲ್ಟನ್.



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 2496522/23

WANTED TEACHERS
Pavaman Innovative School
(1st std to 8th std)
Primary : 3 posts (Social, English & Science)
Qualification : B.Ed, D.Ed or any degree.
Computer knowledge & English communication is a must.
#105/3, 7th cross, 3rd main, BM Shree Nagar, Mysore - 16
8197695840
8431891316

SITE FOR SALE
MUDA KHATHA
East Facing
Corner Site,
35 Lakhs
8.7x Mtrs x 12 Mtrs
9342123373

ಜಾಗ ಬಾಡಿಗೆಗೆ ಇದೆ
ಮೈಸೂರಿನ ಬೋಗಾದಿಯ ರಿಂಗ್ ರಸ್ತೆಯಲ್ಲಿ 9200 ಚದರ ಅಡಿ ಕಮರ್ಷಿಯಲ್ ಜಾಗ ಬಾಡಿಗೆಗೆ ಇದೆ
ಕೂಡಲೇ ಸಂಪರ್ಕಿಸಿ:
9845328433

ಮನೆ ಮಾರಾಟಕ್ಕಿದೆ
KHB ನಿಸರ್ಗ ಬಡಾವಣೆ ಇಲವಾಲ 3ನೇ ಬ್ಲಾಕ್ # 259 ಫುಲ್ ಫರ್ನಿಷಿಂಗ್, 2 ರೂಂವುಳ್ಳ ಮನೆ 30x50
(ಮಧ್ಯವರ್ತಿಗಳು ಸಂಪರ್ಕಿಸಬಹುದು)
9901743602

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರಸಿದ್ಧ Office Showroom & Company ಗಳಿಗೆ 7th, 10th, puc, Degree, ITI, Diploma, Pass / Fail ಆದ ಯುವಕ/ ಯುವತಿಯರು Packing, Helper, Telecalling, Data Entry, Receptionist, Line Incharge, Billing, ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಷರತ್ತು ಅನ್ವಯ ಸಂಬಳ: 14500/– 39000/– (ESI+PF OT) ಸೇರಿ
9740468212,6364103418

MUDA SITE FOR SALE
NAVIKS ಶಾಲೆ ಹತ್ತಿರದ ವೆಂಕಟಗಿರಿ ಲೇಔಟ್‌ನಲ್ಲಿ 50'×97' ಅಳತೆ East ಫೇಸಿಂಗ್ 2 ಅಕ್ಕಪಕ್ಕದ 2 ಸೈಟುಗಳು.
ಬೆಲೆ – 2800/– Per Sqft
9886048471

ಶ್ರೀ ಗೌರೀಶಂಕರ ಟ್ರಾವೆಲ್ಸ್
14-7-24 (1 ದಿನ): ಘಾಟಿ ಸುಬ್ರಮಣ್ಯ, ಇಶಾ ಫೌಂಡೇಶನ್. 28-7-24 (6 ದಿನ): ಅಯೋಧ್ಯೆ, ಕಾಶಿ, ಗಯಾ, ಪ್ರಯಾಗ್‌ರಾಜ್. 24-8-24 (4 ದಿನ): ಉಜ್ಜಯಿನಿ, ಓಂಕಾರೇಶ್ವರ, ಇಂದೋರ್. 28-9-24 (4 ದಿನ): ಭೀಮಾಶಂಕರ, ಘೃಷ್ಣೇಶ್ವರ, ಶಿರಡಿ, ತ್ರ್ಯಂಬಕೇಶ್ವರ. (ವಿಮಾನ, ಎಸಿ ಬಸ್, ಊಟ, ರೂಂ)
Mob: 9620002114

HOUSE FOR RENT
(NEW HOUSE)
2BHK, Ramanuja Road
14th Cross, Agrahara, Mysore
8073733963
8050259938

Vacancies
for Paid Assistant Staff, Graduates, Post Graduates (B.Com, M.Com) CA/CS/CWA Interns/Articles incl. presence in Concurrent Audit of Banks and also apply internship students.
Location: Nanjangudu, Language Proficiency: English and Kannada.
Salary: Negotiable
If interested Kindly Share your resume at Email: cagarimachopra@gmail.com

Industrial shed FOR SALE
Double Corner Flot
14,850 Sqft. 410/413-18, Hebbal Industrial Area.
Opp. Infosys behind HUL, KRS Road, Mysore-570018
9886412655

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

MUDA SITE FOR SALE
ಸಾತಗಳ್ಳಿ ರಿಂಗ್ ರೋಡ್ ಹತ್ತಿರ ಅಡ್ವೋಕೇಟ್ ಲೇಔಟ್‌ನಲ್ಲಿ 31'×60' ಅಳತೆಯ NORTH-WEST ಕಾರ್ನರ್ ಸೈಟ್.
ಬೆಲೆ – 3500/– Per Sqft
9886048471

ನಿವೃತ್ತ ನೌಕರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benefits fixed Salary+PF+ESI+ ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು ಫೋಟೋ, ಪಾನ್‌ಕಾರ್ಡ್, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಪುಸ್ತಕ
Venue: Maurya Residency
Sri Harsha Road, Mysore-01
Time : 11 am Date: 3-7-2024
(Followed by Lunch
9448376423/9886883858

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8296341145

ಸೈಟ್ ಮಾರಾಟಕ್ಕಿದೆ
JSS 1st Stage
ಬಿಎಸ್‌ಎನ್ ಎಲ್ ಹಿಂಭಾಗ, ರಾಜಕುಮಾರ್ ರಸ್ತೆ
35-50 West Facing
7892573043

URGENT REQUIREMENT
Teacher Required for :
Sri Jnana Bharathi School
P.Hosahalli, KRS Road, (3km from JK Tyres) Mysore
BA / MA or Any Qualification for English Faculty.
9620124567,8310245354
Date of Interview- 1-7-2024

ವಿಶೇಷತೆ ಆರ್ಥೋಪೆಡಿಕ್ ಕ್ಲಿನಿಕ್
ಪಾದ ಮತ್ತು ಪಾದದ ಕೀಲಿನ ಸಮಸ್ಯೆಗಳಿಗೆ
ಭೇಟಿ ಕೊಡಿ : ಮಹಾವೀರ್ ಪಾದ ಮತ್ತು ಪಾದದ ಕೀಲಿನ ಸೆಂಟರ್
ನಂ. 926, ವಿಶ್ವಧಾತ್ರಿ ರಸ್ತೆ, ವಿವೇಕಾನಂದನಗರ, ವಿವೇಕಾನಂದ ವೃತ್ತ, ಮೈಸೂರು–23
ಪ್ರತಿ ಮಂಗಳವಾರ ಬೆ. 9 ರಿಂದ ಮ.12
ಫಿಸಿಯೋಥೆರಪಿ ಪ್ರತಿ ದಿನ ಸಂಜೆ 5.30PM-8PM
ಸಂದರ್ಶನಕ್ಕೆ ಕರೆ ಮಾಡಿ
7204080539,0821-4000961
Main Clinic ಬೆಂಗಳೂರಿನಲ್ಲಿ

ಹೊಸಮನೆ ಮಾರಾಟಕ್ಕಿದೆ
30x40 ಉತ್ತರ ದಿಕ್ಕು
Duplex 5 BHK
ಆರಾಧ್ಯ ಬಡಾವಣೆ
20x30 ಉತ್ತರ ದಿಕ್ಕು
37 ಲಕ್ಷ ರಮಾಬಾಯಿನಗರ 4ನೇ ಹಂತ
9379056972

ಬೋಳು ತಲೆಯ ಸಮಸ್ಯೆಯೇ?

ಕಿಮೊಥೆರಪಿ ಚಿಕಿತ್ಸೆಗೆ ಒಳಪಟ್ಟಿರುವ ರೋಗಿಗಳಿಗೆ ಸ್ಥಳಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Nysuru
MYSURU 9611028523 MANGALORE 9343142258

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನ ದೇವಿ ಆರಾಧಕರು
ಪಂ|| ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ಮಂತ್ರಪಾರಂಪರ್ಯ ಜ್ಯೋತಿಷ್ಯರು, ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಶೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ.
Mob: 9663466548

MUDA ಸೈಟ್ ಮಾರಾಟಕ್ಕಿದೆ
ಕೆ.ಸಿ. ಲೇಔಟ್‌ನಲ್ಲಿ 40'×60' ಅಳತೆಯ West ಫೇಸಿಂಗ್ ಸೈಟ್.
ಬೆಲೆ – 8250/– Per Sqft
9886048471

HOUSE FOR SALE
at MUDA Layout 2+1 BHK
20x30 South facing Site
East Facing Door,
Shanthaveri Gopalgowda Nagar, Mysore
9740019514
9738884777

ಫ್ಲಾಟ್ ಭೋಗ್ಯಕ್ಕೆ ಇದೆ
ಆಲನಹಳ್ಳಿ ಲೇಔಟ್
FLAT FOR LEASE
ALANAHALLI LAYOUT
6366596616
9148448159

CAR FOR SALE
Hyundai Era Plus
2014, 2nd Owner, 61,500 km running, AC, power steering, 2 power windows, inbuilt music system, grey colour, 4 new tyres, extra power kit very good condition. More details call
Mob: 9855525434

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಜಾಗ ಮಾರಾಟಕ್ಕಿದೆ
2 ಎಕರೆ ಜಾಗವಿದ್ದು 30 ತೆಂಗಿನ ಮರಗಳು, ಟಿನರಸೀಪುರ ತಾಲ್ಲೂಕಿನ ರಾಮನಾಥಪುರ ಹುಂಡಿ ಗ್ರಾಮದಲ್ಲಿ ಮಾರಾಟಕ್ಕಿದೆ. ಸಂಪರ್ಕಿಸಿ:
Mob: 9066102267
NO BROKERS

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

ನಿವೃತ್ತ ನೌಕರಿಗೆ ಉದ್ಯೋಗವಕಾಶದ ಸೆಮಿನಾರ್
ನಿವೃತ್ತ ರಾಜ್ಯ/ಕೇಂದ್ರ, ಖಾಸಗಿ ಹಾಗೂ ಬಿಸಿನೆಸ್ ವಲಯದವರಿಗೆ ಉದ್ಯೋಗ ಅವಕಾಶದ ಸೆಮಿನಾರ್ ನಿಧಿಷ್ಠ ಸಂಬಳ/ಮತ್ತು ಇತರೆ ಭತ್ಯೆಗಳು ಲಭ್ಯವಿರುತ್ತದೆ. ಪ್ರಖ್ಯಾತ್ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Age above 30 years ಸ್ಥಳ ಪೌಯರ್ ರೆಸಿಡೆನ್ಸಿ ಹೋಟೆಲ್ ಹರ್ಷ ರಸ್ತೆ, ಗೋವರ್ಧನ್ ಹೋಟೆಲ್ ಪಕ್ಕ ಮೈಸೂರು–01 ನೊಂದಾಯಿಸಲು ಬೇಕಾಗಿರುವ ದಾಖಲೆಗಳು 1) ಫೋಟೋ 2) Pan card 3) Aadhar Card, 4) ವಿದ್ಯಾರ್ಹತೆ SSLC ಮೇಲ್ಪಟ್ಟು 5) ಬ್ಯಾಂಕ್ ಪಾಸ್ ಬುಕ್ 1ನೇ ಪುಟ, ದಿ: 03-07-2024, ಸಮಯ : ಬೆ.11.00 ಗಂಟೆಗೆ Followed by Lunch
9449068132,7022034200

SITE FOR SALE
5400 Sqft W/F industrial Site behind Police Quarters Hebbal Industrial Layout
7619627212
9845677388
(Broker's Exuse)

WANTED
St. Mira's Inclusive Convent, Sujjlur
Wanted experienced science Tr, clerk & driver(HMV and LMV license, 10 pass) and watchman.
Tr and clerk should be proficient in English and Computer.
Send Resume to smic.af.13@gmail.com/ kalash03@gmail.com
9900118453

EAST FACE
MUDA APPROVED
40X60
SITE FOR SALE
NITYANANDASAGARA
HUILALU MYSORE
8217851695

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಸೈಟ್ ಮಾರಾಟಕ್ಕಿದೆ
ಮೂಡಾ ಅಪ್ರೂವ್ಡ್
40X60
ಪೂರ್ವ ದಿಕ್ಕು, ನಿತ್ಯಾನಂದಸಾಗರ ಹುಯಿಲಾಳು ಮೈಸೂರು
8217851695

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್ & ಸರ್ವೀಸ್
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

Study Hubby Tution Centre
Address: Shardhadevinagar Circle Bus Stand Mysore.
* 1st - 9th Tution Classes Available.
* Radha Krishna Fancy Dress Costume Available.
*Hindi & Drawing Teacher - Wanted
9611707493

ಕೃಷ್ಣಮೂರ್ತಿಪುರಂ
2BHK Gr.Floor- ಬಾಡಿಗೆಗೆ
1BHK IInd Floor- ಬಾಡಿಗೆಗೆ
1 ರೂಂ ಅಟ್ಯಾಚ್ ಬಾತ್ ರೂಂ ಬಾಡಿಗೆಗೆ
9900409715
ಸಣ್ಣಮನೆ 8x38 ಅಡಿ
(ಕಲ್ನಾರ್ ಶೀಟಿನ ಮನೆ) ಮಾರಾಟಕ್ಕಿದೆ
7975447262

OLD AGE HOME
(Charitable Trust)
We take care of your beloved elderly, bedridden individuals or those undergoing any treatment with pure vegetarian food in a pleasant environment and medical facilities in our centre. Additionally, we provide home nursing services with certified nursing staff visiting the patient's home to offer Care. Contact:
9916905188

SITE FOR SALE
50/50 East Facing MUDA Allotment Site Kuvempunagar Mysore
20/30 EAST Facing Site Vivekananda Nagara Mysore
PH: 9900464111

ವಿವಾಹ ಭಾಗ್ಯ
ಎಲ್ಲಾ ಧರ್ಮದ ಭಾಷೆಯ ಹಾಗೂ ಜಾತಿಯ ವಧು ವರರಿಗಾಗಿ ಸಂಪರ್ಕಿಸಿ
1. ಮೊದಲನೆ ಮದುವೆ
2. ಎರಡನೇ ಮದುವೆ
3. ವಿಧವೆ/ವಿಧುರರು
MRJ Matrimony
8904890413
8904890419

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡಿ ಪ್ರತಿ ತಿಂಗಳಿಗೆ ರೂ. 15,000 ಸಂಪಾದಿಸಿ.
Mob: 9731891409

SITE FOR SALE
20x30 Site
Adjacent to Vijayanagar 4th Stage
Dhisha Layout, Mysore
Call 97310 52551

ಲೇಡಿಸ್ ಪಿ.ಜಿ.ಬಾಡಿಗೆಗೆ
ಎಲ್ಲಾ ಸೌಕರ್ಯ ಉಳ್ಳ ಚಾಲಿಯಲ್ಲಿರುವ ಪಿ.ಜಿ, NIE ಕಾಲೇಜ್ ಹತ್ತಿರ, ವಿದ್ಯಾರಣ್ಯಪುರಂ ಮುಖ್ಯ ರಸ್ತೆ, ಮೈಸೂರು
9844465777
9880065039

Water Proofing Tiles Work, Plumbing, Electrical Work,
ಮಾಡಲಾಗುತ್ತದೆ. ಹಾಗೂ ಹಳೇ ಮನೆಗಳನ್ನು Renovation ಮಾಡಿಕೊಡಲಾಗುತ್ತದೆ.
8660384527

ಸೋಲಾರ್ ವಾಟರ್ ಹೀಟರ್
Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

Paramedical Science College, Mysore
(Affiliated to Kar.Govt) R R Nagar
ಪ್ರವೇಶ ತೆರೆದಿದೆ
DMLT, OT, IT, For SSLC/ PUC Pass/Fail Students contact
8073195952
Limit Seats

Quick Sale
Double bed wooden with branded mattress sparingly used 2 x single sofa set fabric, round glass top 48" dia, artistic wooden leg and four chairs, 1 samsung split A/C hardly used. Contact:
Mob: 9845767390
10 am to 7 pm

WANTED
ಲಾಲ್‌ಬಹದ್ದೂರ್ ಶಾಸ್ತ್ರಿ ನಗರ, ಗೋಪಾಲಗೌಡ ನಗರ, ಲಲಿತಾದ್ರಿ ನಗರ ಹಾಗೂ ಸಪ್ತಮಾತೃಕ ಲೇಔಟ್‌ಗಳಲ್ಲಿ ಸೈಟುಗಳು ಬೇಕಾಗಿದೆ.
20x30, 30x40.
Mob: 9900125239

SK CONSTRUCTION
ಹೊಸ ಮನೆ ಕಟ್ಟಬೇಕೆ ಚಿಂತೆ ಬೇಡ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineer Plan, 3D Elevation ಸಹಿತ ನಾವೇ ಲೋನ್ ಮಾಡಿ ನಿಮ್ಮ ಕನಸಿನ ಮನೆ ಕಟ್ಟಿ ಕೊಡುತ್ತೇವೆ.
9620528490

SITE FOR SALE
40X40 Corner
Vishwamanava Enclave
Vijayanagar 4th Stage
8050821108
8792207164

WANTED
1) ITI Welder 2) ITI Electrical
3) ITI Fitter
4) Supervisor (Preferabley Female)
5) Marketing Executive (Preferabley Female) Edu: SSLC/PUC
6) Tipper Driver 7) JCB Operator
Contact: 9380728107
Whatsapp: 8431572689

FOR SALE
1. 20x30, 30x40, Sites @ Bogadi, Rainbow School
2. 18x40 Site in Kuvempu Ngr
3. 2&3 BHK Flats at RK Nagar
4. 70x140 Farm House Plots @ KRS Back Water Attach 20L
5. 50x30 Site@Saraswathi Puram Semi Commercial
6. 20x30, Sites For Sale At Yelwala
30x40 Sites attached to Brahmins Lyt
PRAKRUTHI PROPERTIES
95386 90359, 90359 90359

2.5 BHK
HOME INTERIORS @ ₹ 2.5 Lakh*
Home Space Mart
*T&C Apply
91089 23123

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

neem BOND PLATINUM®
PLYWOOD DOORS
10 YEARS WARRANTY
@ FACTORY DEPOT RATES
9731591267,9901291267

ಜಮೀನು ಮಾರಾಟಕ್ಕಿದೆ
ಶ್ರೀರಾಂಪುರ ರಿಂಗ್ ರಸ್ತೆ ಇಂದ 15 ಕಿ.ಮೀ ದೂರದಲ್ಲಿ 10 ಗುಂಟೆ 14 ಲಕ್ಷಗಳಿಗೆ ಮಾರಾಟಕ್ಕಿದೆ.
7411110087

AVAILABLE FOR SALE
Brooder and Layer
Poultry Cages
1/2 ton Feeds Machine
9448978383

ಬೇಕಾಗಿದ್ದಾರೆ
Computer ಜ್ಞಾನವಿರುವ ಹುಡುಗಿ ಕೆಲಸಕ್ಕೆ ಬೇಕಾಗಿದ್ದಾರೆ.
PUC / Degree (Pass/Fail)
ದಟ್ಟಗಳ್ಳಿ ನೇತಾಜಿ ಸರ್ಕಲ್ ಹತ್ತಿರ, ಸಂದರ್ಶನದ ವೇಳೆ. 10am - 6pm
9481732377

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ MNC ಕಂಪನಿಗಳಿಗೆ ಆಫೀಸ್‌ಗಳಿಗೆ ಶೋರೂಂಗಳಿಗೆ 7th, 10th, PUC, Degree, ITI, Diploma, Pass & Fail ಆದ ಯುವಕ ಯುವತಿಯರು Packing, Helper, Front Office, Telecalling, ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಷರತ್ತು ಅನ್ವಯ ಸಂಬಳ: 18000/– 39000/– (ESI+PF OT) ಸೇರಿ
9916641959,9741307322

SITE FOR SALE
MUDA APPROVED
Corner Site
25x40 off to Ring Road Just 500 Mtr
8660352905
7975246389

ಕೃಷಿ ಭೂಮಿ ಮಾರಾಟಕ್ಕಿದೆ
ಮೈಸೂರಿನಿಂದ 23 ಕಿ.ಮೀ ದೂರ ಇರುವ ರಾಂಪುರ ಹತ್ತಿರ 1.5 Acra ನೀರಾವರಿ ಜಮೀನು ಮಾರಾಟಕ್ಕಿದೆ.
9342104242

ಮೈಸೂರು ನಗರದ ಮೇಟಗಳ್ಳಿ, ಹೆಬ್ಬಾಳ, ಕೂರ್ಗಳ್ಳಿ, ಹಿನಕಲ್, ಕೈಗಾರಿಕಾ ಪ್ರದೇಶ ಇಲ್ಲಿ ಕೆಲಸ ಮಾಡಲು ಮಹಿಳೆಯರು, ಪುರುಷರು ಬೇಕಾಗಿದ್ದಾರೆ. ESI-PF ಸೌಲಭ್ಯ ಇದೆ. ಹಾಗೂ ಕೋ-ಆಪರೇಟಿವ್ ಸೊಸೈಟಿ ಹಿನಕಲ್ ಇಲ್ಲಿ ಕೆಲಸ ಮಾಡಲು ಪಿಗ್ಮಿ ಏಜೆಂಟ್ ಹಾಗೂ ಬಿ.ಕಾಂ. ವಿದ್ಯಾಭ್ಯಾಸವುಳ್ಳ ಕಂಪ್ಯೂಟರ್ ಜ್ಞಾನ ಹೊಂದಿರುವ ಮಹಿಳೆಯರು ಬೇಕಾಗಿದ್ದಾರೆ
9611208553
9036461347

ಬೇಕಾಗಿದ್ದಾರೆ
ಡಿ.ಟಿ.ಪಿ. ಅನುಭವವಿರುವ ಟೆಲಿಕಾಲರ್ ಬೇಕಾಗಿದ್ದಾರೆ. (ಹುಡುಗಿಯರು) ಕಲೆಕ್ಷನ್ ಮತ್ತು ರಿಕವರಿ ಹುದ್ದೆಗಳಿಗೆ ಮೈಸೂರು, ಚಾಮರಾಜನಗರ, ಗುಂಡ್ಲುಪೇಟೆಯಲ್ಲಿ ವಾಸವಿರುವ ದ್ವಿಚಕ್ರ ವಾಹನ ಹೊಂದಿರುವ ಹುಡುಗರು
(SSLC & Above)
9169113399

30x40 HOUSE FOR SALE (MUDA)
4th Stage 2nd Phase
Vijayanagara Near NPS School
Mysore-570026
Ground 1150 sqft & 1st Floor 750 Sqft. Price : 1.35 Lacks
9342677390

30x40
East Site Sale
KBL gardeniya
(Near Vijayanagar 4th Stage)
9880273834

DTCP Approved Layout
21x40 @ Rs. 11.20 Lac
24x40 @ Rs. 12.40 Lac
26x40 @ Rs. 13.65 Lac
East Face Site For Sale
Next to Marashettihalli
Behind Chamundi Hill
9538583377

ಸೈಟು ಮಾರಾಟಕ್ಕಿದೆ
1) 30x40, W/F-Rs.72 Lakh ಐಶ್ವರ್ಯ ಲೇಔಟ್ ಕ್ರೈಸ್ತ ಸ್ಕೂಲ್ ಹತ್ತಿರ, ಮೈಸೂರು
2) 20x34, S/F-Rs.26 Lakhs ಬೋಗಾದಿ ಬಡಾವಣೆ ಮೈಸೂರು
9845765573

ಕರ್ನಾಟಕದಾದ್ಯಂತ ಪ್ರಸಿದ್ಧ MNC ಕಂಪನಿಗಳಿಗೆ
ಕಂಪನಿ, ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಶಿಯರ್, ಆಫೀಸ್ ಬಾಯ್, ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ, ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀಧರರು, (ಸಂಬಳ: 18000rs ಇಂದ 30000rs+ ಇನ್ಸೆಂಟಿವ್) ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ:
9632831680,8296845328

SITE FOR SALE
ಸುವರ್ಣ ನಗರ ಮೈಸೂರು ಭೋಗಾದಿ
8618269079
9449623874

ಬೇಕಾಗಿದ್ದಾರೆ
ಕಂಪನಿಯಲ್ಲಿ Office Work ಮಾಡಲು Female & Male Candidates ಅಗತ್ಯವಿದ್ದು ಆಸಕ್ತಿಯುಳ್ಳ Candidates ಈ ಕೂಡಲೇ ಸಂಪರ್ಕಿಸಿ
9845028614

ಮನೆ ಮಾರಾಟಕ್ಕಿದೆ
20x30 Newly Construction House for Sale West Facing North Door G+2 BHK Dattagalli
9986919694
9611537157

WANTED BEAUTICIAN
Fresher or Experience
Good Salary
9880994092

ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ
AST HM - 01 POST
BSC BED - 02 POST
NST - 02 POST
8147472526
9448071449

ಸೈಟುಗಳು ಮಾರಾಟಕ್ಕಿದೆ
ಶ್ರೀರಾಂಪುರ ರಿಂಗ್ ರೋಡ್ ಹಾಗೂ ಶ್ರೀನಗರ ಹಿಂಭಾಗ ಮೈಸೂರು
9945321020

ಸೈಟು ಮಾರಾಟಕ್ಕಿದೆ
30x40 North Face
KBL SIlicon City
BEML Road, ಬಸ್ತಿಪುರ KRS Road
9686225522

ಮೈಸೂರು ಮಿತ್ರ 45
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ
ಗುರುವಾರ
ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ಕಿಕ್ಕೇರಿ ಕಾಲೇಜಿನಲ್ಲಿ ಕೆಂಪೇಗೌಡ ಜಯಂತಿ ಆಚರಣೆ



ಕೆಂಪೇಗೌಡ ಜಯಂತಿಯನ್ನು ಉದ್ಘಾಟಿಸುತ್ತಿರುವ ಕಾಲೇಜು ಪ್ರಾಂಶುಪಾಲರು, ಸಿಬ್ಬಂದಿ.

ಕಿಕ್ಕೇರಿ,ಜೂ.28– ಸರ್ವ ಧರ್ಮಗಳ ಜನರ ಸಂರಕ್ಷಣೆಗೆ ಶ್ರಮಿಸಿ ಮಾದರಿ ಬೆಂಗಳೂರು ನಗರವನ್ನು ನಿರ್ಮಿಸಿದ ಕೆಂಪೇಗೌಡರು ನಾಡಪ್ರಭು ಎಂಬ ಕೀರ್ತಿಗೆ ನಿಜವಾದ ಭಾಷ್ಯ ಬರೆದವರು ಎಂದು ಪ್ರಾಂಶುಪಾಲ ಎಸ್.ದೊರೆಸ್ವಾಮಿ ತಿಳಿಸಿದರು.

ಪಟ್ಟಣದ ಕೆಪಿಎಸ್ ಶಾಲೆ ಪದವಿ ಪೂರ್ವ ಕಾಲೇಜು ವಿಭಾಗದಲ್ಲಿ ನಾಡ ಪ್ರಭು ಕೆಂಪೇಗೌಡರ 515ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಕೆಂಪೇಗೌಡರು ಅದ್ಭುತ ಇಂಜಿನಿಯರ್, ವಿಜಯನಗರ ಅರಸ ಸಾಮಂತ, ಪಾಳೇಗಾರರಲ್ಲಿ ಅತ್ಯಂತ ಬಲಿಷ್ಠ, ಪ್ರಭಾವಶಾಲಿಗಳು. ಇವರ ದೂರದೃಷ್ಟಿ ಫಲವಾಗಿ ಬೆಂಗಾಡಿನಂತಿದ್ದ ಪಟ್ಟಣವನ್ನು ಸುಸ್ಸಜ್ಜಿತ ನಗರವಾಗಿ ನಿರ್ಮಿಸಿದರು ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ಐಕನಹಳ್ಳಿ ಕೃಷ್ಣೇಗೌಡ, ಉಪನ್ಯಾಸಕ ಮಂಜುನಾಥ್ ಮಾತನಾಡಿದರು. ಕೆಂಪೇಗೌಡರ ಸಾಕ್ಷ್ಯಚಿತ್ರ ಪ್ರದರ್ಶನ ವಿದ್ಯಾರ್ಥಿಗಳ ಮನದಲ್ಲಿ ಕೆಂಪೇಗೌಡರ ಜೀವನಚರಿತ್ರೆ ಉಳಿಯುವಂತೆ ಮಾಡಿತು. ವಿದ್ಯಾರ್ಥಿಗಳು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ರೂಪಿಸಿ ಮಾದರಿಯಾದರು. ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಸ್ಮರಿಸಲಾಯಿತು.

ಎನ್‌ಎಸ್‌ಎಸ್ ಘಟಕಾಧಿಕಾರಿ ಜಿ.ಎಸ್. ಕುಮಾರಸ್ವಾಮಿ, ಎಸ್‌ಡಿಎಂಸಿ ಸದಸ್ಯ ಶೇಖರ್, ಎನ್.ರವೀಂದ್ರ, ಎ.ಎಂ.ಮಂಜುನಾಥ್, ಜಿ.ರಮೇಶ್, ಎ.ಎಂ.ನಾಗೇಶ್, ಎನ್.ಎ. ವಿನಾಯಕ, ವರಲಕ್ಷ್ಮಿ ಮತ್ತಿತರರಿದ್ದರು.

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಕೋಟ್ಯಾಂತರ ರೂ. ಭ್ರಷ್ಟಾಚಾರ ಖಂಡಿಸಿ

ಬಿಜೆಪಿ ಪ್ರತಿಭಟನೆ

ಸಿಎಂ, ಸಚಿವರ ರಾಜೀನಾಮೆಗೆ ಆಗ್ರಹ

ಮಂಡ್ಯ,ಜೂ.28– ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ದುರ್ಬಳಕೆಯಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವ ಶರಣಪ್ರಕಾಶ್ ಪಾಟೀಲ್ ನಿಗಮದ ಅಧ್ಯಕ್ಷರು ರಾಜೀನಾಮೆ ನೀಡುವಂತೆ ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು ನಗರದ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು.

ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಿಂದ ಬಿಜೆಪಿ ಪಕ್ಷದ ಎಸ್‌ಟಿ ಮೋರ್ಚಾ ನೇತೃತ್ವದಲ್ಲಿ ಮೆರವಣಿಗೆ ಹೊರಟ ಕಾರ್ಯಕರ್ತರು ವಾಲ್ಮೀಕಿ ನಿಗಮದ ಅವ್ಯವಹಾರ ಸಾಬೀತಾಗಿದ್ದರೂ ಕಾಂಗ್ರೆಸ್ ಸರ್ಕಾರ ಕಾಪಾಡುತ್ತಿದೆ, ಮುಖ್ಯಮಂತ್ರಿ ಸಿದ್ದರಾಮಯ್ಯ ದಲಿತ ದ್ರೋಹಿಯಾಗಿದ್ದಾರೆ ಎಂದು ಆರೋಪಿಸಿ, ಘೋಷಣೆಗಳನ್ನು ಕೂಗಿದರು.

ಜಿಲ್ಲಾಧಿಕಾರಿ ಕಚೇರಿ ಹತ್ತಿರ ಮೆರವಣಿಗೆ ಬರುತ್ತಿದ್ದಂತೆ ಪೊಲೀಸರು ಹೊರ ಆವರಣದ ಗೇಟ್ ಮುಚ್ಚಿ ಪ್ರತಿಭಟನಾಕಾರರನ್ನು ತಡೆದರು. ಗೇಟಿನ ಕಂಬಿಯ ಮೇಲೆ ಏರಿದ ಕೆಲ ಕಾರ್ಯಕರ್ತರು ಒಳ ನುಗ್ಗಲು ಯತ್ನಿಸಿದರು. ಆದರೆ ಪೊಲೀಸರು ಇದಕ್ಕೆ ಅವಕಾಶ ನೀಡಲಿಲ್ಲ, ಇದರಿಂದ ರೊಚ್ಚಿಗೆದ್ದ ಪ್ರತಿಭಟನಾಕಾರರು ಜಿಲ್ಲಾಡಳಿತದ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಜಿಲ್ಲಾಡಳಿತದ ವರ್ತನೆ ಸರಿಯಲ್ಲ ಎಂದು ಕಿಡಿಕಾರಿದರು. ಇದೇ ವೇಳೆ ಮನವಿ ಸ್ವೀಕರಿಸಲು ಜಿಲ್ಲಾಧಿಕಾರಿ ಬರದಿದ್ದಾಗ ಜಿಲ್ಲಾಧಿಕಾರಿ ಬರಲೇಬೇಕು ಎಂದು ಕೆಲಕಾಲ ಘೋಷಣೆ ಕೂಗಿದರು.

ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಭ್ರಷ್ಟಾಚಾರದಲ್ಲಿ 187 ಕೋಟಿ ಹಣ ದುರ್ಬಳಕೆ ಆಗಿದೆ. 89 ಕೋಟಿ ಹಣ 700 ಕ್ಕೂ ಹೆಚ್ಚು ನಕಲಿ ಖಾತೆಗಳಿಗೆ ವರ್ಗಾವಣೆಯಾಗಿದ್ದು, ಬೆಂಗಳೂರು ಗ್ರಾಮಾಂತರ, ಬಳ್ಳಾರಿ, ದಾವಣಗೆರೆ, ತೆಲಂಗಾಣ ರಾಜ್ಯದ ಹೈದರಾಬಾದ್ ಬ್ಯಾಂಕ್‌ಗಳಲ್ಲಿ ಖಾತೆ ತೆರೆದು ಕೂಲಿ ಕಾರ್ಮಿಕರು, ದನ, ಎಮ್ಮೆ ಕಾಯುವ ಅಮಾಯಕ ವ್ಯಕ್ತಿಗಳಿಗೆ 20ರಿಂದ 5 ಲಕ್ಷದವರೆಗೆ ಹಣ ಹಾಕಿ ಡ್ರಾ ಮಾಡಿಕೊಳ್ಳುವ ಮೂಲಕ ಲೋಕಸಭೆ ಚುನಾವಣೆ ಮತ್ತು ಕಾಂಗ್ರೆಸ್ ಪಕ್ಷದ ಕಾರ್ಯಕ್ರಮಗಳಿಗೆ ಬಳಕೆ ಮಾಡಿಕೊಳ್ಳಲಾಗಿದೆ ಎಂದು ಆರೋಪಿಸಿದರು.

ನಿಗಮದ ವ್ಯವಸ್ಥಾಪಕ ನಿರ್ದೇಶಕ ಪದ್ಮನಾಭ ಸಹಿ ತಮ್ಮದಲ್ಲ ಎಂದು ಹೇಳಿದ್ದಾರೆ. ಆದರೆ ಅವರದೇ ಸಹಿ ಎಂದು ಬ್ಯಾಂಕ್‌ನವರು ತಿಳಿಸಿದ್ದಾರೆ, ಇದರಲ್ಲಿ ಯಾವುದು ಸತ್ಯ ಎಂಬುದು ಪತ್ತೆ ಹಚ್ಚಬೇಕಾಗಿದೆ. ನಿಗಮದ ಹೆಸರಿನಲ್ಲಿ ಬೇರೆ ಬ್ಯಾಂಕಿನಲ್ಲಿ ಖಾತೆ ತೆರೆದಾಗ ಆರ್ಥಿಕ ಇಲಾಖೆ ಗಮನಕ್ಕೆ ಏಕೆ ಬಂದಿಲ್ಲ, ಹಣಕಾಸು ಇಲಾಖೆ ಜವಾಬ್ದಾರಿ ನಿರ್ವಹಿಸುವ ಸಿದ್ದರಾಮಯ್ಯ ಹೊಣೆಗಾರರಲ್ಲವೆ ಎಂದು ಪ್ರಶ್ನಿಸಿದರು.

ಹಗರಣದಲ್ಲಿ ಹಣ ಮರು ವರ್ಗಾವಣೆ ಮಾಡಿಸಿದ ವ್ಯಕ್ತಿಗಳು ಯಾರು ಅವರನ್ನು ಇದುವರೆಗೆ ಏಕೆ ಬಂಧಿಸಿಲ್ಲ ಎಂಬುದು ಯಕ್ಷಪ್ರಶ್ನೆಯಾಗಿದೆ. ಬಹು ರಾಜ್ಯಗಳ ಹಗರಣವಾಗಿರುವುದರಿಂದ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು, ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವ ಶರಣಪ್ರಕಾಶ್ ಪಾಟೀಲ್, ನಿಗಮದ ಅಧ್ಯಕ್ಷ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಮುಖಂಡರಾದ ಡಾ.ಸಿದ್ದರಾಮಯ್ಯ, ಕೆ.ಎಸ್.ನಂಜುಂಡೇಗೌಡ, ಅಶೋಕ್‌ಜಯರಾಮ್, ವಿವೇಕ್, ಅಶೋಕ್‌ಕುಮಾರ್, ಅರವಿಂದ್, ಸಿ.ಟಿ.ಮಂಜುನಾಥ್, ಶಿವ ಕುಮಾರ್ ಆರಾಧ್ಯ, ಹನಿಯಂಬಾಡಿ ನಾಗರಾಜು, ಸಿದ್ದರಾಜು, ಎಂ.ಪಿ.ಅರುಣ್ ಕುಮಾರ್, ಪೀಹಳ್ಳಿ ರಮೇಶ್ ಇತರರು ಭಾಗವಹಿಸಿದ್ದರು.



ಬಿಜೆಪಿ ಕಾರ್ಯಕರ್ತರು ಮತ್ತು ಮುಖಂಡರು ಮಂಡ್ಯ ಡಿಸಿ ಕಚೇರಿ ಮುಂದೆ ಪ್ರತಿಭಟನೆ ನಡೆಸುತ್ತಿರುವುದು.

ಜು.1, ಮಾಜಿ ಸ್ಪೀಕರ್ ಕೃಷ್ಣ ಜನ್ಮದಿನ ಆಚರಣೆ

ಕೃಷಿ ಕುರಿತು ವಿಚಾರ ಸಂಕಿರಣ, ಪ್ರತಿಭಾ ಪುರಸ್ಕಾರ, ಸಾಧಕರಿಗೆ ಕೃಷ್ಣ ಪುರಸ್ಕಾರ ಪ್ರದಾನ

ಕೆ.ಆರ್.ಪೇಟೆ,ಜೂ.28– ಶಾಸಕರಾಗಿ, ಮಂತ್ರಿಗಳಾಗಿ, ಸಂಸದರಾಗಿ, ವಿಧಾನ ಸಭೆಯ ಅಧ್ಯಕ್ಷರಾಗಿ ಸುಮಾರು 50 ವರ್ಷಗಳ ಕಾಲ ಅರ್ಪಣಾ ಭಾವನೆಯಿಂದ ಕೆಲಸ ಮಾಡಿದ ವಿಧಾನಸಭೆಯ ಮಾಜಿ ಸ್ಪೀಕರ್ ಕೃಷ್ಣ ಅವರ 84ನೇ ಜನ್ಮ ದಿನವನ್ನು ಜು.1ರಂದು ಬೆಳಗ್ಗೆ 10ಗಂಟೆಗೆ ಕೃಷಿ ಕುರಿತು ವಿಚಾರ ಸಂಕಿರಣ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಕೃಷ್ಣ ಪುರಸ್ಕಾರ ನೀಡುವ ಮೂಲಕ ಪಟ್ಟಣದ ಸುಲೋಚನಮ್ಮ–ರಾಮದಾಸ್ ಸಭಾಂಗಣದಲ್ಲಿ ಆಚರಿಸಲಾಗುತ್ತಿದೆ.

ತಾಲೂಕು ಕೆ.ಆರ್.ಪೇಟೆ ಕೃಷ್ಣ ಪ್ರತಿಷ್ಠಾನದ ಅಧ್ಯಕ್ಷ ಗೂಡೇಹೊಸಳ್ಳಿ ಜವರಾಯಿಗೌಡ ಪಟ್ಟಣದ ಒಕ್ಕಲಿಗರ ಹಾಸ್ಟೆಲ್ (ಆದಿಚುಂಚನಗಿರಿ ಶಿಕ್ಷಣ ಸಂಸ್ಥೆ) ಕಟ್ಟಡದಲ್ಲಿರುವ ಕೃಷ್ಣ ಪ್ರತಿಷ್ಠಾನದ ಕಚೇರಿಯಲ್ಲಿ ಕಾರ್ಯಕ್ರಮದ ಆಹ್ವಾನ ಪತ್ರಿಕೆಗಳನ್ನು ಬಿಡುಗಡೆ ಮಾಡಿ ಮಾತನಾಡಿದರು.

ಕೃಷ್ಣ ಅವರ ಒಡನಾಡಿಗಳಾದ ಕರ್ನಾಟಕ ವಿಧಾನಸಭೆಯ ಮಾಜಿ ಅಧ್ಯಕ್ಷ ರಮೇಶ್‌ಕುಮಾರ್ ಕಾರ್ಯಕ್ರಮವನ್ನು ಉದ್ಘಾಟಿಸುವರು. ಶಾಸಕ ಹೆಚ್.ಟಿ.ಮಂಜು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸುವರು. ಮಾಜಿ ಸಚಿವ ನಾರಾಯಣಗೌಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸುವರು. ಕೃಷಿ ತಜ್ಞರಾದ ಮೈಸೂರಿನ ಕೃಷ್ಣಪ್ರಸಾದ್ ಕೃಷಿ ಉದ್ಯಮಗಳನ್ನು ಕಟ್ಟುವುದು ಹೇಗೆ? ಎಂಬ ವಿಷಯ ಕುರಿತು ಉಪನ್ಯಾಸ ನೀಡುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೃಷ್ಣ ಪ್ರತಿಷ್ಠಾನದ ಅಧ್ಯಕ್ಷ ಜವರಾಯಿಗೌಡ ವಹಿಸುವರು ಎಂದು ತಿಳಿಸಿದರು.

ಸಾಹಿತಿ ಬಲ್ಲೇನಹಳ್ಳಿ ಮಂಜುನಾಥ್, ಅಂತರ್ಜಲ ತಜ್ಞ ನವಿಲು ಮಾರನಹಳ್ಳಿ ರಾಮೇಗೌಡ, ಪೌರಕಾರ್ಮಿಕ ಮಹಿಳೆ ಕರಪವ್ವ ಅವರಿಗೆ 2023–24ನೇ ಸಾಲಿನ ಕೃಷ್ಣ ನಾಗರೀಕ ಪುರಸ್ಕಾರ ನೀಡಿ ಗೌರವಿಸಲಾಗುವುದು. ಭಾರತೀಯ ಸೇನೆಯ ನೌಕಾಪಡೆಯಲ್ಲಿ ಲೆಫ್ಟಿನೆಂಟ್ ಅಧಿಕಾರಿಯಾಗಿ ತಾಲೂಕಿಗೆ ಗೌರವ ತಂದಿರುವ ಬೂಕಹಳ್ಳಿ ಬಿ.ಎಂ.ಸಾಗರ್ ಅವರಿಗೆ ಕೃಷ್ಣ ವಿಶೇಷ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಗುವುದು. ಹಾಗೆಯೇ ತಾಲೂಕಿನ ಸರ್ಕಾರಿ ಶಾಲೆಗಳಲ್ಲಿ ಓದಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕಗಳನ್ನು ಪಡೆದು ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಕೃಷ್ಣ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು ಎಂದು ಅವರು ಕಾರ್ಯಕ್ರಮಗಳ ವಿವರ ನೀಡಿದರು.

ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಾಗಿ ಮಂಡ್ಯ ಜಿಲ್ಲೆಯ ಅಪಾರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜ್, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಮನ್‌ಮುಲ್ ನಿರ್ದೇಶಕ ಡಾಲು ರವಿ, ರಾಜ್ಯ ಆರ್‌ಟಿಓ ಅಧಿಕಾರಿಗಳ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ್ ಸೇರಿದಂತೆ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಜವರಾಯಿಗೌಡ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಕೃಷ್ಣ ಪ್ರತಿಷ್ಠಾನದ ಕಾರ್ಯದರ್ಶಿ ಕತ್ತರಘಟ್ಟ ವಾಸು, ಕೋಶಾಧ್ಯಕ್ಷ ಹೆಚ್.ಜೆ.ರಮೇಶ್, ಪ್ರತಿಷ್ಠಾನದ ನಿರ್ದೇಶಕರಾದ ಚನ್ನಿಂಗೇಗೌಡ, ಹಾದನೂರು ಪರಮೇಶ್, ಆಂತರಿಕ ಲೆಕ್ಕ ಪರಿಶೋಧಕ ತಿಮ್ಮೇಗೌಡ ಇತರರು ಉಪಸ್ಥಿತರಿದ್ದರು.



ಪತ್ರಿಕಾಗೋಷ್ಠಿಯಲ್ಲಿ ಕಾರ್ಯಕ್ರಮದ ಆಹ್ವಾನ ಪತ್ರಿಕೆ ಬಿಡುಗಡೆ ಮಾಡಲಾಯಿತು.

ಅಪರಿಚಿತ ಶವ ಪತ್ತೆ

ಮಂಡ್ಯ,ಜೂ.28– ಮದ್ದೂರು ಟೌನ್ ಮರಕಾಡದೊಡ್ಡಿ ಗೇಟ್ ಬಳಿ ಇರುವ ನವ ಕಾರ್ ಟೈಲ್ ಅಂಡ್ ಗ್ರ್ಯಾನೈಟ್ ಅಂಗಡಿ ಮಳಿಗೆ ಮುಂಭಾಗ ಅಪರಿಚಿತ ವ್ಯಕ್ತಿಯ ಶವ ಪತ್ತೆಯಾಗಿದೆ. ಈ ಕುರಿತು ಮದ್ದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ನಿಮ್ಮ ಪ್ರೀತಿ ವಿಶ್ವಾಸಕ್ಕೆ ನಾವು ಎಂದೂ ಧಕ್ಕೆ ತರಲ್ಲ

ಭಾರತೀನಗರ, ಜೂ.28– ಜಿಲ್ಲೆಯ ಜನರ ಆಶೀರ್ವಾದದಿಂದ ಎಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿದ್ದಾರೆ. ನಿಮ್ಮ ಪ್ರೀತಿ ವಿಶ್ವಾಸಕ್ಕೆ ನಾವು ಎಂದೂ ಧಕ್ಕೆ ತರದಂತೆ ನೋಡಿಕೊಳ್ಳುತ್ತೇವೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್‌ಕುಮಾರಸ್ವಾಮಿ ತಿಳಿಸಿದರು.

ಇಲ್ಲಿಗೆ ಸಮೀಪದ ತೊರೆಬೊಮ್ಮನ ಹಳ್ಳಿ ಗ್ರಾಮದಲ್ಲಿ ಲಕ್ಷ್ಮಿದೇವಿ ದೇವಾಲಯ ಹಾಗೂ ವಿಗ್ರಹ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮಂಡ್ಯ ಜಿಲ್ಲೆಯ ಜನತೆ ನಮ್ಮ ತಂದೆಯವರಾದ ಎಚ್.ಡಿ.ಕುಮಾರಸ್ವಾಮಿ ಅವರನ್ನು ಆಯ್ಕೆಗೊಳಿಸಿ ಕೇಂದ್ರ ಸಚಿವರನ್ನಾಗಿ ಮಾಡಿದ್ದೀರಿ. ರಾಜ್ಯದ ಜವಾಬ್ದಾರಿಯ ಜೊತೆಗೆ ದೇಶದ ಅಭಿವೃದ್ಧಿಗೆ ಕುಮಾರಣ್ಣ ಅವರು ಶ್ರಮಿಸಲ್ಲಿದ್ದಾರೆ.

ಕೇಂದ್ರ ಸರ್ಕಾರ ಕುಮಾರಸ್ವಾಮಿ ಅವರಿಗೆ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆಯನ್ನು ನೀಡಿರುವುದರಿಂದ ಬೆಂಗಳೂರಿಗೆ ವಾರಕ್ಕೆರಡು ದಿನ ಮಾತ್ರ ಬರುತ್ತಾರೆ. ಅವರು ಈ ದಿನ ಮಂತ್ರಿಯಾಗಲು ಮಂಡ್ಯ ಜಿಲ್ಲೆಯ ಜನರೇ ಕಾರಣ. ಹಾಗಾಗಿ ಜನರ ಕಷ್ಟ–ಸುಖ ಕೇಳಲು ನನ್ನ ಹೆಗಲಿಗೆ ವಹಿಸಿದ್ದಾರೆ. ಆ ಜವಾಬ್ದಾರಿಯನ್ನು ನಾನೇ ನಿರ್ವಹಿಸುತ್ತೇನೆ ಎಂದರು.



ತೊರೆಬೊಮ್ಮನಹಳ್ಳಿ ಗ್ರಾಮದಲ್ಲಿ ನಿಖಿಲ್ ಕುಮಾರಸ್ವಾಮಿ ಅವರನ್ನು ಅಭಿನಂದಿಸಲಾಯಿತು.

ರಾಜ್ಯ ಸರ್ಕಾರ ಹೆಚ್ಚು ದಿನ ಉಳಿಯೋದು ಕಷ್ಟ

ಮಂಡ್ಯ,ಜೂ.28– ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಹೆಚ್ಚು ದಿನ ಉಳಿಯುವುದು ಬಹಳ ಕಷ್ಟವಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಭವಿಷ್ಯ ನುಡಿದರು. ಶುಕ್ರವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ತನ್ನ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಬೆಲೆ ಹೆಚ್ಚಳ ಮಾಡುತ್ತಿದೆ. ಕಾಂಗ್ರೆಸ್ ಗ್ಯಾರಂಟಿ ಯೋಜನೆ ಪಕ್ಷಕ್ಕೆ ಲಾಭ ತರುತ್ತಿಲ್ಲ. ಜನರು ಗ್ಯಾರಂಟಿ ಯೋಜನೆ ಕೇಳಿಲ್ಲ. ಗ್ಯಾರಂಟಿಗಾಗಿ ಬೆಲೆ ಹೆಚ್ಚಳ ಮಾಡುತ್ತಿರುವ ಈ ಸರ್ಕಾರ ಹೆಚ್ಚು ದಿನ ಉಳಿಯೋದು ಕಷ್ಟ ಇದೆ ಎಂದರು. ಜನರು ಸರ್ಕಾರದ ಮೇಲಿನ ವಿಶ್ವಾಸ ಕಳೆದುಕೊಂಡಿದ್ದಾರೆ. ಹಾಗಾಗಿ ಅವರು ಯಾರನ್ನು ಸಿಎಂ ಮಾಡುತ್ತಾರೋ, ಎಷ್ಟು ಜನ ಡಿಸಿಎಂ ಆಗಿ ಮಾಡುತ್ತಾರೋ ಕಾದು ನೋಡಬೇಕಿದೆ. ಸರ್ಕಾರ ಯಾವಾಗ ಉರುಳಲಿದೆ ಎಂಬುದನ್ನು ಕಾಲವೇ ಎಲ್ಲದಕ್ಕೂ ಉತ್ತರ ನೀಡಲಿದೆ. ಕಾಂಗ್ರೆಸ್‌ನ ಶಾಸಕರು ತಮ್ಮ ಜೊತೆ ಮಾತಾಡಿದ್ದಾರಾ ಎಂಬ ಪ್ರಶ್ನೆಗೆ ಉತ್ತರಿಸಿ, ಎಲ್ಲವನ್ನ ಬಹಿರಂಗವಾಗಿ ಹೇಳಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದರು. ಒಕ್ಕಲಿಗರ ಮಠದ ಚಂದ್ರಶೇಖರ ಸ್ವಾಮೀಜಿ ಅವರ ಬಗ್ಗೆ ಸಹಕಾರ ಸಚಿವ ಕೆ.ಎನ್.ರಾಜಣ್ಣ ನೀಡಿರುವ ಹೇಳಿಕೆ ಕುರಿತು ಮಾತನಾಡಿ, ಜವಾಬ್ದಾರಿ ಸ್ಥಾನದಲ್ಲಿರುವವರು ಮಾತನಾಡುವಾಗ ಎಚ್ಚರಿಕೆಯಿಂದ ಮಾತನಾಡಬೇಕು ಎಂದರು.

ಒಂದನೇ ಪುಟದಿಂದ

ಮುಡಾ ಆಯುಕ್ತರ ವಿಚಾರಣೆ

ಹಾಗೂ ಜಂಟಿ ನಿರ್ದೇಶಕ ಎಸ್. ಗೋಪಾಲಕೃಷ್ಣ ಗುರುವಾರ ಮಧ್ಯಾಹ್ನ 12.30 ಗಂಟೆಗೆ ದಿಢೀರ್ ಮುಡಾ ಕಚೇರಿಗೆ ಭೇಟಿ ನೀಡಿದರು.

ಆ ವೇಳೆ ಆಯುಕ್ತರು ಕಚೇರಿಯಲ್ಲಿ ಇರಲಿಲ್ಲ. ಅವರು ಕೂಡಲೇ ಬರುವಂತೆ ಹೇಳಿ ಎಂದು ಆಪ್ತ ಸಹಾಯಕರಿಗೆ ಸೂಚಿಸಿ ಆಯುಕ್ತರ ಚೇಂಬರ್‌ನಲ್ಲಿ ತಪಾಸಣೆ ಶುರು ಮಾಡಿದರು. ಕಾರ್ಯದರ್ಶಿ, ನಗರ ಯೋಜಕ ಸದಸ್ಯ (ಟಿಪಿಎಂ), ನಿವೇಶನ ವಿಭಾಗದ ಇಂಜಿನಿಯರ್‌ಗಳು, ಸೂಪರಿಂಟೆಂಡಿಂಗ್ ಇಂಜಿನಿಯರ್ ಕಚೇರಿ ಸಿಬ್ಬಂದಿ, ವಿಶೇಷ ಭೂ ಸ್ವಾಧೀನಾಧಿಕಾರಿ, ಲೆಕ್ಕ ಶಾಖೆ ಅಧಿಕಾರಿಗಳನ್ನು ಕರೆಸಿಕೊಂಡ ಉನ್ನತ ಅಧಿಕಾರಿಗಳ ತಂಡ, ವಿಚಾರಣೆ ನಡೆಸಿ ಮಾಹಿತಿ ಕಲೆ ಹಾಕಿದೆ. ಮಧ್ಯಾಹ್ನ 1.30 ಗಂಟೆ ವೇಳೆಗೆ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ಆಗಮಿಸಿದರು. ಶೇ. 50:50ರ ಅನುಪಾತ ಹಾಗೂ ಪ್ರೋತ್ಸಾಹದಾಯಕ ನಿವೇಶನಗಳ ಹಂಚಿಕೆ ಸ್ಥಿತಿ–ಗತಿ, ಅದಕ್ಕೆ ಸಂಬಂಧಿಸಿದ ನಿಯಮ, ಕಾಯ್ದೆಗಳೇನು, ನ್ಯಾಯಾಲಯಗಳು ನೀಡಿರುವ ತೀರ್ಪು, ಕೋರ್ಟ್ ಎಷ್ಟು ಪ್ರಕರಣಗಳಲ್ಲಿ ಆದೇಶ ನೀಡಿತ್ತು, ನೀವು ಎಷ್ಟು ಮಂದಿಗೆ ಎಷ್ಟು ನಿವೇಶನ ಮಂಜೂರು ಮಾಡಿದ್ದೀರಿ, ಭೂಸ್ವಾಧೀನ ಸಂದರ್ಭ ಪರಿಹಾರ ಮತ್ತು ಇನ್‌ಸೆಂಟಿವ್ ಸೈಟ್ ನೀಡಿರುವ ಪ್ರಕರಣಗಳು, 2020ರಲ್ಲಿ ಈ ಸಂಬಂಧ ಮುಡಾ ಸಭೆಯಲ್ಲಿ ಯಾವ ಶಿಫಾರಸ್ಸಿನಂತೆ 50:50 ಅನುಪಾತದ ನಿವೇಶನ ಹಂಚಿಕೆ ಮಾಡಲು ನಿರ್ಣಯ ಮಾಡಲಾಯಿತು, ಸರ್ಕಾರದಿಂದ ಅನುಮತಿ ಪಡೆಯಲಾಗಿದೆಯೇ, ಸರ್ಕಾರದಿಂದ ಈ ಪ್ರಕ್ರಿಯೆ ಸ್ಥಗಿತಗೊಳಿಸುವಂತೆ ಲಿಖಿತ ನಿರ್ದೇಶನವಿದ್ದರೂ ನಿವೇಶನ ಹಂಚಿಕೆ ಮಾಡಲು ಕಾರಣವೇನು?, ಪ್ರಾಧಿಕಾರದ ಅಧ್ಯಕ್ಷರೂ ಟಿಪ್ಪಣಿಗಳ ಮೂಲಕ ಸೂಚನೆ ನೀಡಿದ್ದರೂ, ಧಿಕ್ಕರಿಸಿದ್ದೇಕೆ? ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳಿ ಆಯುಕ್ತರ ಹೇಳಿಕೆಯನ್ನು ದಾಖಲಿಸಿಕೊಂಡರು.

ಕಚೇರಿ ಸಂಜೆ 5.30 ಗಂಟೆಗೆ ಬಂದ್ ಆಯಿತಾದರೂ, ವಿವಾದಿತ ನಿವೇಶನಗಳ ಹಂಚಿಕೆ ಪ್ರಕರಣಗಳ ಕಡತಗಳನ್ನು ವಶಪಡಿಸಿಕೊಂಡ ಅಧಿಕಾರಿಗಳು, ರಾತ್ರಿ 8.30ರವರೆಗೂ ಕಡತಗಳಲ್ಲಿ ಸಹಿ ಮಾಡಿರುವ ಅಧೀನಾಧಿಕಾರಿಗಳ ಅಭಿಪ್ರಾಯ, ಆಯುಕ್ತರ ಆದೇಶಗಳನ್ನು ಪರಿಶೀಲಿಸಿದ ಬಳಿಕ ಸುಮಾರು 140 ಕಡತಗಳನ್ನು ವಶಕ್ಕೆ ಪಡೆದು ಬೆಂಗಳೂರಿಗೆ ಹಿಂದಿರುಗಿದ್ದಾರೆ. ಈ ನಡುವೆ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಜೂನ್ 26ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದು, ಕಾನೂನು ಬಾಹಿರವಾಗಿ ನಿವೇಶನಗಳನ್ನು ಗೊತ್ತು ಗುರಿ ಇಲ್ಲದೆ ಮಂಜೂರು ಮಾಡಿ ಅಕ್ರಮ ಎಸಗಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ದೂರಿದ್ದರು.

ಮೈಸೂರು ತಾಲೂಕು, ಕಸಬಾ ಹೋಬಳಿ, ಮೈಸೂರು ಗ್ರಾಮದ ಸರ್ವೆ ನಂಬರ್ 86ರ ಪೈಕಿ 7.03 ಎಕರೆ ಜಮೀನಿಗೆ ಸಂಬಂಧಿಸಿದಂತೆ ಎಂ. ಶಾಂತಮ್ಮ ಎಂಬುವರು 2023ರ ಅಕ್ಟೋಬರ್ 20ರಂದು ಭೂ ಪರಿಹಾರಕ್ಕಾಗಿ ಮುಡಾಗೆ ಅರ್ಜಿ ಸಲ್ಲಿಸಿದ್ದರು. ಆದರೆ, ಆಯುಕ್ತರು 13 ದಿನಗಳ ಮುಂಚಿತವಾಗಿ ಅಂದರೆ, 2023ರ ಅಕ್ಟೋಬರ್ 7ರಂದು ಶಾಂತಮ್ಮರಿಗೆ ಮುಡಾ ಅಭಿವೃದ್ಧಿಪಡಿಸಿರುವ ಪ್ರತಿಷ್ಠಿತ ಬಡಾವಣೆಯಲ್ಲಿ 81,670 ಚದರಡಿಗೆ ಸಮಾನವಾದ ನಿವೇಶನಗಳನ್ನು ಹಂಚಿಕೆ ಮಾಡಿರುವುದು ಅಕ್ರಮ ನಡೆದಿರುವುದಕ್ಕೆ ಸಾಕ್ಷಿಯಾಗಿದೆ ಎಂದು ಶ್ರೀವತ್ಸ ತಮ್ಮ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಪ್ರಕರಣದ ಸಂಬಂಧ ಮುಡಾ ಆಯುಕ್ತರು 2023ರ ಅಕ್ಟೋಬರ್ 27ರಂದು ಶೇ. 50:50ರ ಅನುಪಾತದಲ್ಲಿ ನಿವೇಶನ ನೀಡಿ ಹೊರಡಿಸಿರುವ ಅಧಿಕೃತ ಜ್ಞಾಪನಾ ಪತ್ರವನ್ನು ರದ್ದುಪಡಿಸಿ ಅಕ್ರಮದಲ್ಲಿ ಪಾಲ್ಗೊಂಡಿರುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆಯೂ ಶಾಸಕರು ಒತ್ತಾಯಿಸಿದ್ದಾರೆ. ಮುಖ್ಯಮಂತ್ರಿಗಳ ತವರೂರಲ್ಲಿ ಕಾನೂನು ಬಾಹಿರವಾಗಿ ಪ್ರತಿಷ್ಠಿತ ಬಡಾವಣೆಗಳಲ್ಲಿ ಅಭಿವೃದ್ಧಿಪಡಿಸಿರುವ ಬೆಲೆ ಬಾಳುವ ನಿವೇಶನಗಳನ್ನು, ಶೇ.50:50ರ ಅನುಪಾತದಡಿ, ಪ್ರೋತ್ಸಾಹದಾಯಕ ಹಾಗೂ ಬದಲಿ ನಿವೇಶನಗಳನ್ನು ಎಗ್ಗಿಲ್ಲದೇ ಹಂಚಿಕೆ ಮಾಡುತ್ತಿದ್ದಾಗ್ಯೂ, ಸಿದ್ದರಾಮಯ್ಯರಾಗಲೀ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪರಾಗಲೀ, ಜನಪ್ರತಿನಿಧಿಗಳಾಗಲೀ ಪ್ರತಿಕ್ರಿಯಿಸದೇ ಮೌನ ವಹಿಸಿರುವುದು ಸಾರ್ವಜನಿಕ ವಲಯದಲ್ಲಿ ಅಚ್ಚರಿ ಮೂಡಿಸಿದೆ.

ದಕ್ಕಿಸಿಕೊಳ್ಳಬಹುದು...!?

ನಿವೇಶನ ಹಂಚಿಕೆ ಮಾಡಿ ಎಷ್ಟೋ ವರ್ಷಗಳ ನಂತರ, ಆ ಭೂಮಿಯ ಮಾಲೀಕನಿಗೆ ಪರಿಹಾರದ ಹಣ ನೀಡಿರುವ ಬಗ್ಗೆ ಮಾಹಿತಿ ಇಲ್ಲವೆಂದು ಟಿಪ್ಪಣಿ ಬರೆದು, ಬದಲಿ ನಿವೇಶನ ಮಂಜೂರಾತಿ ಮಾಡುವ ಮೂಲಕ ಅವ್ಯವಹಾರ ನಡೆಸಿರುವುದು ಈಗಾಗಲೇ ಚರ್ಚೆಯಾಗುತ್ತಿದೆ. ಹಾಗೆಯೇ ಇದಕ್ಕೆ ಪೂರಕವಾದ ಮತ್ತೊಂದು ಹಗರಣದ ಬಗ್ಗೆ ಬಲ್ಲ ಮೂಲಗಳಿಂದ ಮಾಹಿತಿ ಲಭ್ಯವಾಗಿದ್ದು, ಶೇ.50:50ರ ನೆಪದಲ್ಲಿ ಮುಡಾ ಅಧಿಕಾರಿಗಳು 'ನಕಲಿ' ಆಟವಾಡಿ ಭಾರೀ ಗೋಲ್‌ಮಾಲ್ ನಡೆಸಿದ್ದಾರೆ ಎನ್ನಲಾಗುತ್ತಿದೆ.

ಏನಿದು ನಕಲಿ ಆಟ?: ಹಲವು ವರ್ಷಗಳ ಹಿಂದಿನ ಭೂಸ್ವಾಧೀನ ಪ್ರಕ್ರಿಯೆಯ ನೋಟಿಫಿಕೇಷನ್ ಆಧಾರದಲ್ಲಿ ಯಾವುದೋ ಸರ್ವೆ ನಂಬರ್ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ನಕಲಿ ದಾಖಲೆ ಸೃಷ್ಟಿಸಿಕೊಂಡು, ಸದರಿ ಮಾಲೀಕನಿಗೆ ಶೇ.50:50ರ ಅನುಪಾತದಲ್ಲಿ ಬದಲಿ ನಿವೇಶನ ನೀಡಬೇಕೆಂದು, ಅದಕ್ಕೆ ಆಡಳಿತ ಮಂಡಳಿ ಅನುಮೋದನೆ ಪಡೆದ ನಂತರ ಆ ನಿವೇಶನವನ್ನು ಪ್ರಭಾವಿಗಳಿಗೆ ಕಡಿಮೆ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ದಟ್ಟಗಳ್ಳಿ, ವಿಜಯನಗರ, ಕುವೆಂಪುನಗರ ಸೇರಿದಂತೆ ಪ್ರತಿಷ್ಠಿತ ಬಡಾವಣೆಗಳಲ್ಲಿ ಈ ಅವ್ಯವಹಾರ ನಡೆದಿದೆ. ಮಾರುಕಟ್ಟೆ ಬೆಲೆ ಸುಮಾರು 2 ಕೋಟಿ ರೂ. ಇರುವ ನಿವೇಶನಕ್ಕೆ ಬರೀ ಶೇ.30–40ರಷ್ಟು ಬೆಲೆ ನಿಗದಿ ಮಾಡಿ, ಉಳಿದ ಹಣವನ್ನು ಅಧಿಕಾರಿಗಳು ನುಂಗಿರುವ ಪ್ರಕರಣಗಳು ಸಾಕಷ್ಟು ನಡೆದಿವೆ ಎನ್ನಲಾಗುತ್ತಿದೆ.

ಯಾವುದೋ ಬಡಾವಣೆ, ಯಾವುದೋ ಸರ್ವೆ ನಂಬರ್ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಶೇ.50:50 ಅನುಪಾದಡಿ ನಿವೇಶನಕ್ಕೆ ಅನುಮೋದನೆ ಪಡೆದು, ಮತ್ಯಾರಿಗೋ ಮಾರಾಟ ಮಾಡುವ ಈ 'ನಕಲಿ' ಆಟ, ನಿಯಮಾನುಸಾರವಾಗಿಯೇ ನಡೆಯುತ್ತಿದೆ. ಒಂದು ಸಭೆಯಲ್ಲಿ ಅನುಮೋದನೆಯಾಗುವ ನೂರಾರು ವಿಷಯಗಳಲ್ಲಿ ಇದೂ ಒಂದಾಗಿರುತ್ತದೆ. ಹಾಗಾಗಿ ಎಲ್ಲವನ್ನೂ ಕೂಲಂಕುಶವಾಗಿ ಪರಿಶೀಲಿಸಲು ಆಗುವುದಿಲ್ಲ. ಇದು ಅಧಿಕಾರಿಗಳಿಗೆ ವರದಾನವಾಗಿದೆ ಎಂದು ತಿಳಿದುಬಂದಿದೆ.

ಇ–ಆಕ್ಷನ್‌ನಲ್ಲೂ ಅಕ್ರಮ: ಮುಡಾ ನಿವೇಶನಗಳ ಇ–ಹರಾಜು (e-action) ಪ್ರಕ್ರಿಯೆಯಲ್ಲೂ ಅಧಿಕಾರಿಗಳು ಗೋಲ್‌ಮಾಲ್ ನಡೆಸುತ್ತಾರೆ. ಪ್ರಭಾವಿಗಳ ಜೊತೆ ಮೊದಲೇ ಡೀಲ್ ಮಾಡಿಕೊಂಡು, ಅವರು ಸೂಚಿಸಿದ ಬೆಲೆಯನ್ನು ತಂತ್ರಾಂಶದಲ್ಲೇ ಲಾಕ್ ಮಾಡಲಾಗುತ್ತದೆ. ಅದಕ್ಕಿಂತ ಹೆಚ್ಚು ಮೊತ್ತ ನಮೂದು ಮಾಡಿದರೆ ಆ ಪ್ರಕ್ರಿಯೆಯೇ ಪೂರ್ಣಗೊಳ್ಳುವುದಿಲ್ಲ. ಇ–ಹರಾಜಿನಲ್ಲಿ ಸಾವಿರಾರು ಜನ ಭಾಗವಹಿಸುವುದರಿಂದ ತಾಂತ್ರಿಕ ದೋಷವಾಗಿರಬಹುದು ಎಂದು ಜನ ಭಾವಿಸುತ್ತಾರೆ. ಕಡೆಗೆ ಡೀಲ್ ಮಾಡಿಕೊಂಡಿದ್ದ ವ್ಯಕ್ತಿಗೆ ನಿವೇಶನ ಸಿಗುವಂತಾಗುತ್ತದೆ. ಮೈಸೂರಿನ ಅನೇಕ ಪ್ರಭಾವಿ ವ್ಯಕ್ತಿಗಳು ಇದೇ ರೀತಿಯ ಅಕ್ರಮದಿಂದ ನೂರಾರು ನಿವೇಶನ ಮಾಡಿಕೊಂಡಿದ್ದಾರೆ ಎಂದು ಹೇಳಲಾಗುತ್ತಿದೆ.

ಸಿಎ ನಿವೇಶನ ರೋಲ್‌ಕಾಲ್: ಸಿಎ ನಿವೇಶನ ಮಂಜೂರಾಗಿರುವ ಸಂಘ–ಸಂಸ್ಥೆಗಳಿಂದಲೂ ರೋಲ್‌ಕಾಲ್ ಜೋರಾಗಿದೆ. ಸಿಐಟಿಬಿ ಆಗಿದ್ದಾಗ ನೂರು ವರ್ಷಕ್ಕೆ ಸಿಎ ನಿವೇಶನ ಮಂಜೂರಾಗಿದ್ದು, 30–40 ವರ್ಷವಾದರೂ ಆ ನಿವೇಶನಗಳನ್ನು ಉದ್ದೇಶಿತ ಕಾರ್ಯಕ್ಕೆ ಬಳಸಿಲ್ಲ. ಹೀಗೆ ನಿಯಮಾನುಸಾರ ಸಿಎ ನಿವೇಶನ ಬಳಕೆ ಮಾಡದವರಿಗೆ ರದ್ದು ಮಾಡುವುದಾಗಿ ನೋಟೀಸ್ ನೀಡಿ, ಅವರು ವಿಚಾರಿಸಲೆಂದು ಕಚೇರಿಗೆ ಬಂದಾಗ ಹಣ ಪೀಕುವುದು ಎಗ್ಗಿಲ್ಲದೆ ನಡೆಯುತ್ತಿದೆ ಎಂಬ ಆರೋಪವೂ ಕೇಳಿಬಂದಿದೆ.

ಭಾರೀ ಪ್ರಾಜೆಕ್ಟ್ ಫೇಲ್: ಕುವೆಂಪುನಗರ ನಿರ್ಮಾಣವಾಗಿ ಐದು ದಶಕಗಳಾಗಿದ್ದರೂ ಇಂದಿಗೂ ಅನೇಕ ನಿವೇಶನಗಳು ಮುಡಾ ಸುಪರ್ದಿಯಲ್ಲಿವೆ. ಅವುಗಳನ್ನು ಈ ರೀತಿ ಅಕ್ರಮವಾಗಿ ಮಾರಾಟ ಮಾಡಲು, ಪ್ರಭಾವಿಗಳಿಗೆ ಮಂಜೂರು ಮಾಡಲು ಬಳಸಿಕೊಳ್ಳಲಾಗುತ್ತಿದೆ. ಎಕರೆಯಷ್ಟು ಜಾಗವನ್ನು ವಾಣಿಜ್ಯ ನಿವೇಶನ ಎಂದು ಹಂಚಿಕೆ ಮಾಡಿರುವ ಉದಾಹರಣೆಯೂ ಇದೆ. ಕುವೆಂಪುನಗರದಲ್ಲಿ ಮುಡಾ ಜಾಗವೆಂದು ಫಲಕ ಹಾಕಿರುವ ಜಾಗ, ಈ ಹಿಂದೆ ಯಾವುದೋ ಸಹಕಾರ ಸಂಘದಿಂದ ವಶಪಡಿಸಿಕೊಂಡಿದ್ದು, ಅಲ್ಲಿ ಸುಮಾರು 300 ನಿವೇಶನ ಮಾಡಿ, ಆ ಸಂಘದ ಸದಸ್ಯರಿಗೇ ಹಂಚಿಕೆ ಮಾಡಲಾಗುವುದು ಎಂದು ಸುಮಾರು 500 ಕೋಟಿ ರೂ. ಭಾರೀ ಪ್ರಾಜೆಕ್ಟ್‌ಗೆ ಪ್ರಯತ್ನ ನಡೆಸಲಾಗಿತ್ತು. ಆದರೆ ಅದರಲ್ಲಿ ಸಫಲವಾಗಲಿಲ್ಲ ಎಂದು ಬಲ್ಲ ಮೂಲಗಳು ತಿಳಿಸಿವೆ.

ಯೋಜನೆಗೆ ಹಣ ಕಲ್ಪಿಸಿ

ಭದ್ರಾ ಯೋಜನೆ ಪ್ರಸ್ತಾಪ ಮಾಡುವುದಲ್ಲದೆ, ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ಹಣ ಬಿಡುಗಡೆಗೆ ಮನವಿ ಮಾಡುತ್ತೇವೆ. ಮೇಕೆದಾಟು ಯೋಜನೆ 2018 ರಿಂದ ಕೇಂದ್ರದಲ್ಲಿ ಬಾಕಿ ಇದೆ. ಅನುಷ್ಠಾನಕ್ಕೆ ಹಲವು ಹಂತಗಳ ಅನುಮತಿ ಅಗತ್ಯವಿದೆ. ಪ್ರಸ್ತುತ ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಸಚಿವಾಲಯದಿಂದ ಪರಿಸರ ಅನುಮತಿಯನ್ನು ಶೀಘ್ರವಾಗಿ ದೊರಕಿಸಿಕೊಡುವಂತೆ ಒತ್ತಾಯಿಸಲಾಗುವುದು. ಭದ್ರಾ ಯೋಜನೆ ಮೂಲಕ 2.25 ಲಕ್ಷ ಹೆಕ್ಟೇರ್ ಎತ್ತುವರಿ ನೀರಾವರಿ ಮೂಲಕ ವ್ಯವಸಾಯ ಮತ್ತು ಕುಡಿಯುವ ನೀರು ಒದಗಿಸುವ ಪ್ರಸ್ತಾವನೆಯು 2020 ರಿಂದ ಕೇಂದ್ರ ಸರ್ಕಾರದಲ್ಲಿ ಬಾಕಿ ಇದೆ, ಅದಕ್ಕೂ ಅನುಮತಿ ನೀಡಿ. 'ನಮ್ಮ ಮೆಟ್ರೋ ರೈಲು' ಯೋಜನೆಯಡಿ ಹಂತ–3ರ ಕಾಮಗಾರಿಗೆ 15,611 ಕೋಟಿ ರೂ. ಪ್ರಸ್ತಾವನೆ ಸಲ್ಲಿಸಿದ್ದು, ಅನುಮತಿ ದೊರಕಿಸಿ ಎಂದು ಕೋರಲಿದ್ದೇವೆ ಎಂದರು.

ಕರ್ನಾಟಕಕ್ಕೆ 15ನೇ ಹಣಕಾಸು ಆಯೋಗ ನಿಗದಿಪಡಿಸಿರುವ ಹಣ ಬಿಡುಗಡೆ ಮಾಡಿ, ಅಲ್ಲದೆ, ಎರಡನೆಯ ವರದಿಯಲ್ಲಿ ಪೆರಿಫೆರಲ್ ರಿಂಗ್ ರಸ್ತೆಗೆ 3,000 ಕೋಟಿ ರೂ. ಮತ್ತು ಕೆರೆ ಹಾಗೂ ಜಲಮೂಲಗಳ ಅಭಿವೃದ್ಧಿಗೆ 3,000 ಕೋಟಿ ರೂ. ಸೇರಿ ಒಟ್ಟು 11,495 ಕೋಟಿ ರೂ. ನೀಡಲು ಶಿಫಾರಸ್ಸು ಮಾಡಲಾಗಿದೆ. ಈ ಅನುದಾನ ಹಾಗೂ ವಿಶೇಷ ಅನುದಾನ ಕೂಡಲೇ ಬಿಡುಗಡೆ ಮಾಡುವಂತೆ ಮನವಿ ಮಾಡಲಾಗುವುದು. ಮೈಸೂರು ಅಥವಾ ಹಾಸನಕ್ಕೆ ಮತ್ತೊಂದು ಐಐಟಿ ಮಂಜೂರು ಪ್ರಸ್ತಾವನೆ ಸಲ್ಲಿಕೆ ಮಾಡಿದ್ದು, ಇದು ಈಡೇರಿಸಬೇಕಿದೆ. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಏರ್ ಕಾರ್ಗೋ ಕಾಂಪ್ಲೆಕ್ಸ್ ಆಗಿ ಪರಿಗಣಿಸಲು ಸಿವಿಲ್ ಏವಿಯೇಷನ್ ಸಚಿವಾಲಯಕ್ಕೆ ಜೂನ್ 5ರಂದು ಪ್ರಸ್ತಾವನೆ ಕಳುಹಿಸಲಾಗಿದೆ. ಇದರಿಂದ ರಾಜ್ಯದಲ್ಲಿ ಹೆಚ್ಚು ರಫ್ತು ಮತ್ತು ಆರ್ಥಿಕ ಬೆಳವಣಿಗೆ ಸುಧಾರಿಸಲಿದೆ. ಈ ಪ್ರಸ್ತಾವನೆಗೆ ಅನುಮೋದನೆ ದೊರಕಿಸಿಕೊಡುವುದು.

ಸಚಿವ ಕೆ.ಎನ್.ರಾಜಣ್ಣ ಕಿಡಿ

ಎದುರು ಚರ್ಚೆಗೆ ಬಂದರೂ ಬರಬಹುದು, ಬರದೇ ಇದ್ದರು ಇರಬಹುದು ಎಂದು ಅವರು ಹೇಳಿದರು. ಬಾಲಗಂಗಾಧರನಾಥ ಸ್ವಾಮೀಜಿ ವಿರುದ್ಧ ದೇವೇಗೌಡರು ಈ ಮಠ ಮಾಡಿದ್ದರು. ಮಠ ಪ್ರಾರಂಭ ಮಾಡಿದ ದಿನದ ಭಾಷಣ ಯಾರ ಬಳಿಯಾದರೂ ಇದ್ದರೆ ಕೇಳಿ. ದೇವೇಗೌಡರ ಕೃಪಾಶೀರ್ವಾದದಿಂದ ಮಠ ಮಾಡಿದ್ದ ಇವರು ಈಗ ದೇವೇಗೌಡರ ಅಳಿಯನ ವಿರುದ್ಧ ಡಿ.ಕೆ ಸುರೇಶ್ ಸೋಲಲು ಕಾರಣ. ಕ್ಷೇತ್ರದಲ್ಲಿ ಎಲ್ಲಾ ಎಂಪಿಗಳಿಂತ ಹೆಚ್ಚು ಕೆಲಸ ಮಾಡಿದವರು ಡಿ.ಕೆ ಸುರೇಶ್. ಅಷ್ಟೆಲ್ಲಾ ಕೆಲಸ ಮಾಡಿದರೂ, ಅವರು ಸೋತಿರುವುದು ಪಿತೂರಿಯಿಂದಲೇ. ಇವರುಗಳೆಲ್ಲಾ ಮಾಡಿದ ಆ ಕ್ರಮ ಮುಚ್ಚಿ ಹಾಕಿಕೊಳ್ಳಲು, ಡಿಕೆಶಿಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟು ಕೊಡಿ ಎಂದು ಈಗ ಹೇಳಿರುವುದು ಅಷ್ಟೇ. ದೇವೇಗೌಡರು ಮಠ ಮಾಡಿದ್ದಕ್ಕೆ ಇದು ಉಪಕಾರ ಸ್ಮರಣೆ ಎಂದು ರಾಜಣ್ಣ ವಾಗ್ದಾಳಿ ನಡೆಸಿದರು.

ಸಿದ್ದರಾಮಯ್ಯನವರು ಎಲ್ಲಿಯವರೆಗೂ ಸಿಎಂ ಆಗಿ ಮುಂದುವರಿಯಲು ಅವಕಾಶ ನೀಡುತ್ತಾರೋ, ಅಲ್ಲಿಯವರೆಗೆ ಆ ಸ್ಥಾನದಲ್ಲಿ ಇರುತ್ತಾರೆ. ಯಾವಾಗ ಅವಕಾಶ ತಪ್ಪುತ್ತದೆಯೋ ಆಗ ಅವರು ಹೈಕಮಾಂಡ್‌ನವರು ಮಾತು ಕೇಳಬೇಕಾಗುತ್ತದೆ ಎಂದಿದ್ದಾರೆ.

ಸಮಾಜಕ್ಕೆ ಒಳಿತನ್ನು ಮಾಡುವುದು ಸ್ವಾಮಿಗಳ ಕೆಲಸ. ಸಮಾಜ ಅಂದರೆ ಜಾತಿಗಲ್ಲ, ಇಡೀ ಮಾನವ ಕುಲಕ್ಕೆ ಒಳಿತನ್ನು ಮಾಡುವುದು. ಸಮಾಜದಲ್ಲಿ ಸಾಮಾಜಿಕ ಪಿಡುಗನ್ನು ದೂರ ಮಾಡುವುದು, ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವುದು ಶತಮಾನಗಳಿಂದ ನಡೆದುಕೊಂಡು ಬಂದಿರುವ ಪದ್ಧತಿ. ಲೇಟೆಸ್ಟ್ ಆಗಿ ಹೈಟೆಕ್ ಸ್ವಾಮೀಜಿಗಳು ಬಹಳ ಜನ ಬಂದಿದ್ದಾರೆ. ಅವರುಗಳ ಥಿಂಕಿಂಗ್ ಒಂದೊಂದು ರೀತಿ ಇರುತ್ತದೆ. ಅದಕ್ಕೆ ನಾವೇನು ಹೇಳಲು ಸಾಧ್ಯವಿಲ್ಲ. ಅದನ್ನು ಬ್ಲಾಕ್‌ಮೈಲ್ ಎಂದು ನಾನು ಹೇಳುವುದಿಲ್ಲ. ನಾವು ಸ್ವಾಮೀಜಿಗಳು ಎಂದರೆ ದೇವರ ಅಪರವತಾರ ಎಂದು ಕಾಲಿಗೆ ಬಿದ್ದು, ನಮಸ್ಕಾರ ಮಾಡಿ ಆಶೀರ್ವಾದ ಪಡೆಯಬೇಕು ಎಂಬಂತೆ ನಡೆದುಕೊಂಡಿದ್ದೇವೆ. ಅವರು ಒಬ್ಬ ಮನುಷ್ಯನ ಮಟ್ಟಕ್ಕೆ ಇಳಿದರೆ, ಅದು ಅವರಿಗೆ ಸೇರಿರುವಂತಹದ್ದು ಎಂದು ರಾಜಣ್ಣ ಕುಟುಕಿದ್ದಾರೆ.

ಎಕ್ಸ್‌ಪ್ರೆಸ್ ವೇ ಆರಂಭದಲ್ಲೇ ಆತಂಕ

ಕೊರೆದು ಬೃಹತ್ ಹೋರ್ಡಿಂಗ್ಸ್‌ಗಳನ್ನು ಅಳವಡಿಸಿದ್ದು, ಇದು ಮೇಲ್ಗಾಲುವೆಯನ್ನು ನೆಲ್ಲಕುರುಳಿಸುವ ಪ್ರಿ ಪ್ಲಾನ್ ಎಂದು ಆಕ್ರೋಶ ವ್ಯಕ್ತವಾಗಿದೆ. ದಿವಂಗತ ಡಿ. ದೇವರಾಜ ಅರಸು ಮುಖ್ಯ ಮಂತ್ರಿಗಳಾಗಿದ್ದಾಗ ವರುಣಾ ನಾಲೆ (1979) ನಿರ್ಮಾಣಕ್ಕೆ ಚಾಲನೆ ನೀಡಲಾಗಿತ್ತು. 1998ರಲ್ಲಿ ಹಣಕಾಸು ಸಚಿವರಾಗಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಯೋಜನೆಗೆ ಅನುಮೋದನೆ ನೀಡಿ, ಹಣ ಬಿಡುಗಡೆ ಮಾಡಿದ್ದರು. ಸುಮಾರು 135 ಕಿ.ಮೀ ಉದ್ದದ ಈ ನಾಲೆಯೂ ಮೈಸೂರು, ಟಿ.ನರಸೀಪುರ, ಹೆಚ್.ಡಿ.ಕೋಟೆ, ನಂಜನಗೂಡು ಮತ್ತು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಲಕ್ಷಾಂತರ ಎಕರೆ ಕೃಷಿ ಭೂಮಿಗೆ ನೀರುಣಿಸುತ್ತದೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಸಂಚಾರಕ್ಕೆ ಮುಕ್ತವಾದ ನಂತರ ಜಾಹಿರಾತುದಾರರು ವಾಹನ ಸವಾರರ ಕಣ್ಣಿಗೆ ರಾಚುವಂತೆ ತಮ್ಮ ತಮ್ಮ ಸಂಸ್ಥೆಯ ಬೃಹತ್ ಜಾಹೀರಾತುಗಳ ಹೋರ್ಡಿಂಗ್ ಅಳವಡಿಸಿದ್ದು, ಸರ್ಕಾರದ ಸ್ವತ್ತಿನ ಮೇಲೆ ಕ್ರೌರ್ಯ ಮೆರೆದಿದ್ದಾರೆ. ರಸ್ತೆಯ ಎರಡೂ ಕಡೆಯೂ ದೊಡ್ಡದಾಗಿ ಕಾಣುವಂತೆ ಹೋರ್ಡಿಂಗ್ ಅಳವಡಿಸಿದ್ದು, ನಾಲೆಯ ಕಂಬಗಳಿಗೆ ಇನ್ನಷ್ಟು ಹೊರೆಯನ್ನು ಹೊರಿಸಿದ್ದಾರೆ.

ಅನುಮತಿ ಕೊಟ್ಟವರ್ಯಾರು: ವರುಣಾ ಮೇಲ್ಗಾಲುವೆಯ ಪಿಲ್ಲರ್‌ಗಳನ್ನು ಕೊರೆದು, ದೊಡ್ಡ ದೊಡ್ಡ ಕಬ್ಬಿಣದ ಪಟ್ಟಿಗಳ ಮೇಲೆ ಜಾಹೀರಾತು ಫಲಕಗಳ ಇರಿಸಲಾಗಿದೆ. ಅಲ್ಲದೆ ಪಿಲ್ಲರ್‌ಗಳನ್ನು ವಿರೂಪಗೊಳಿಸಿ, ಕಾಂಕ್ರಿಟ್ ಕಿತ್ತು ಬರುವಂತೆ ಡ್ರಿಲಿಂಗ್ ಮಾಡಿ, ನಾಲೆಯನ್ನು ದುರ್ಬಲಗೊಳಿಸಲಾಗಿದೆ. ಈಗಾಗಲೇ ಸೋರಿಕೆಯಿಂದ ಆತಂಕ ಸೃಷ್ಟಿಯಾಗಿದೆ. ಅದರ ಮೇಲೆ ಇನ್ನೊಂದು ಅವಾಂತರ ಎದುರಾಗಿದೆ.

ಅಕ್ಷಮ್ಯ: ಲಕ್ಷಾಂತರ ರೈತರ ಜೀವನಾಡಿಯೂ ಆಗಿರುವ ವರುಣಾ ನಾಲೆಯನ್ನು ಹಾಳು ಮಾಡುತ್ತಿರುವುದು ಅಕ್ಷಮ್ಯ ಅಪರಾಧ. ಹೋರ್ಡಿಂಗ್ ಅಳವಡಿಸಲು ಅನುಮತಿ ಕೊಟ್ಟಿರುವ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಹೋರ್ಡಿಂಗ್ ಅಳವಡಿಸಿರುವ ಖಾಸಗಿ ಉದ್ಯಮಿಗಳು ರೈತರ ಹಾಗೂ ವಾಹನ ಸವಾರರ ಜೀವನದ ಜೊತೆಗೆ ಚೆಲ್ಲಾಟವಾಡುತ್ತಿದ್ದಾರೆ. ದುರ್ಬಲ ಗೊಂಡಿರುವ ನಾಲೆಯ ಪಿಲ್ಲರ್‌ಗಳು ಯಾವಾಗ ಬೇಕಾದರೂ ಕುಸಿಯಬಹುದು ಎಂದು ಪ್ರಜ್ಞಾವಂತ ನಾಗರಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ನಿಲ್ಲದ ಸೋರಿಕೆ: ಹೋರ್ಡಿಂಗ್ ಹಾವಳಿ ಒಂದು ಕಡೆ ಭಯ ಹುಟ್ಟಿಸಿದರೆ, ನಿಲ್ಲದ ನೀರಿನ ಸೋರಿಕೆ ಇನ್ನಷ್ಟು ಆತಂಕ ಹೆಚ್ಚಿಸಿದೆ. ಕೆಲ ವರ್ಷಗಳ ಹಿಂದೆಯಷ್ಟೇ ಸೋರಿಕೆ ತಡೆಯಲು ಕಾವೇರಿ ನೀರಾವರಿ ನಿಗಮದಿಂದ ಪಾಲಿಮರ್ ತಂತ್ರಜ್ಞಾನ ಬಳಸಿ ದುರಸ್ತಿ ಮಾಡಲಾಗಿತ್ತು. ಆದರೆ, ಸೋರಿಕೆ ಮತ್ತೆ ಕಂಡು ಬರುತ್ತಿದ್ದು, ಮೇಲ್ಗಾಲುವೆ ಉದ್ದಕ್ಕೂ ನೀರು ಜರಿಯಂತೆ ಸೋರುತ್ತಿದೆ. ಇದರಿಂದ ನೀರಿನ ಹಾನಿ ಜೊತೆಗೆ ಆತಂಕವೂ ಹೆಚ್ಚಾಗಿದೆ. ಹಾಡಹಗಲೇ ಇಷ್ಟೆಲ್ಲಾ ಅವಾಂತರ ಆಗುತ್ತಿದ್ದರೂ ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಸುಮ್ಮನ್ನಿರುವುದನ್ನು ಗಮನಿಸಿದರೆ, ಇದರಲ್ಲಿ ಅವರ ಪಾಲು ಇರುವಂತೆ ಕಂಡುಬರುತ್ತಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನೀರಿನ ಕಳವು: ವರುಣಾ ನಾಲೆಯ ನೀರಿನ ಕಳ್ಳತನ ವಿಪರೀತವಾಗಿದೆ. ಇದರಲ್ಲಿ ಬಾರೀ ಕುಳಗಳೇ ಇವೆ. ನಾಲೆಯಿಂದ ನೇರವಾಗಿ ಯಾರ ಅನುಮತಿಯೂ ಇಲ್ಲದೆ ನೀರನ್ನು ಟ್ಯಾಂಕರ್‌ಗಳ ಮೂಲಕ ಸಾಗಿಸಲಾಗುತ್ತಿದೆ ಎಂದು ಇಂಜಿನಿಯರ್ ಒಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ್ದಾರೆ.

ಯಾರ ವ್ಯಾಪ್ತಿಗೆ ಬರಲಿದೆ ಎಂಬುದು ಗೊತ್ತಿಲ್ಲ...!

ವರುಣಾ ನಾಲೆಯ ಮೇಲ್ಗಾಲುವೆ ಪಿಲ್ಲರ್‌ಗಳ ಮೇಲೆ ಅಳವಡಿಸಿರುವ ಹೋರ್ಡಿಂಗ್ಸ್ ಕುರಿತು ಕಾವೇರಿ ನೀರಾವರಿ ನಿಗಮದ ಇಂಜಿನಿಯರ್ ಒಬ್ಬರನ್ನು ಪ್ರಶ್ನಿಸಿದಾಗ, ಅಕ್ವಾಡಕ್ಟ್ ಯಾರ ವ್ಯಾಪ್ತಿಗೆ ಬರುತ್ತದೆ ಎಂಬುದು ಗೊತ್ತಿಲ್ಲ. ಕೇಳಿ ತಿಳಿಸುವುದಾಗಿ ಹೇಳಿದವರು ಮತ್ತೆ ಕರೆ ಸ್ವೀಕರಿಸಲಿಲ್ಲ.

ಹೆಜ್ಜಾಲ–ಚಾಮರಾಜನಗರ ರೈಲ್ವೆ ಮಾರ್ಗ ಸೇರ್ಪಡೆ

ಈ ಪತ್ರದ ವಿಚಾರವಾಗಿ ಕುಮಾರಸ್ವಾಮಿಯವರು ರೈಲ್ವೆ ಸಚಿವರನ್ನು ಭೇಟಿಯಾಗಿ ಚರ್ಚೆ ನಡೆಸಿದ್ದರು. ಮಂಡ್ಯ, ಮೈಸೂರು, ಚಾಮರಾಜನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಜನರಿಗೆ ಬಹಳಷ್ಟು ಅನುಕೂಲ ಆಗುವ ಈ ಯೋಜನೆಯನ್ನು ತುರ್ತಾಗಿ ಅನುಷ್ಠಾನ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಕೋರಿದ್ದರು. ಅದರಂತೆ ರೈಲ್ವೆ ಸಚಿವರಾದ ಅಶ್ವಿನಿ ವೈಷ್ಣವ್ ಅವರು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರಿಗೆ ಭರವಸೆ ನೀಡಿದ್ದಾರೆ.

ಆಪ್ತರ ಬಳಿ ಸಿಎಂ ತೀವ್ರ ಅಸಮಾಧಾನ

ನಂತರವೂ ಮುಖ್ಯಮಂತ್ರಿಗಳು ಸ್ವಾಮೀಜಿಯ ಹೇಳಿಕೆ ಬಗ್ಗೆ ತಮ್ಮ ಆಪ್ತ ಸಚಿವರೊಂದಿಗೂ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು ಎಂದು ಮೂಲಗಳು ತಿಳಿಸಿವೆ. ಡಿಕೆಶಿಗೆ ಸಿಎಂ ಸ್ಥಾನ ಬಿಟ್ಟುಕೊಡುವಂತೆ ಸ್ವಾಮೀಜಿ ತಾವಾಗಿಯೇ ಹೇಳಿದರೋ ಅಥವಾ ಯಾರಾದರೂ ಹೇಳಿಸಿದ್ದಾರೆಯೇ ಎಂದು ಕಾಂಗ್ರೆಸ್ ವಲಯದಲ್ಲಿ ಭಾರೀ ಚರ್ಚೆಯಾಗುತ್ತಿದೆ. ಇದಕ್ಕೂ ಮುನ್ನ ಮಾತನಾಡಿದ್ದ ಸಿದ್ದರಾಮಯ್ಯ, ರಾಜಕಾರಣಕ್ಕೂ ಸ್ವಾಮೀಜಿಗಳಿಗೂ ಯಾವುದೇ ಸಂಬಂಧವಿಲ್ಲ. ಮುಖ್ಯಮಂತ್ರಿ ಯಾರಾಗಬೇಕು ಎಂದು ತೀರ್ಮಾನ ಮಾಡುವುದು ಶಾಸಕರು ಮತ್ತು ಹೈಕಮಾಂಡ್ ಎಂದು ಪ್ರತಿಕ್ರಿಯಿಸಿದ್ದರು.

ದೇಶ - ವಿದೇಶ

ಪ್ರಿಯಕರನ ಮನ ಒಲಿಸಲು ಕೋಟಿ ವೆಚ್ಚದ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡ ಯುವತಿ!



ಜರ್ಮನಿ: ಪ್ರೀತಿ ಕುರುಡು, ಪ್ರೀತಿಗೆ ಜಾತಿ–ಧರ್ಮ, ವಯಸ್ಸು ಯಾವುದೂ ಅಡ್ಡಿಯಾಗುವುದಿಲ್ಲ ಅಂತಾರೆ. ಪ್ರೀತಿಯಲ್ಲಿದ್ದ ವ್ಯಕ್ತಿಗೆ ತನ್ನ ಪ್ರೀತಿಯೇ ಕೇಂದ್ರಬಿಂದು ವಾಗುತ್ತದೆ. ಇದಕ್ಕೆ ಸಾಕ್ಷಿ ಎಂಬಂತೆ ಇತ್ತೀಚಿಗೆ ಜರ್ಮನಿಯ ಯುವತಿ ಯೊಬ್ಬಳ ಪ್ರೇಮ ಕಹಾನಿ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯ ವಿಷಯ ವಾಗಿದೆ. 57 ವರ್ಷದ ಪ್ರಿಯಕರನ ಮನ ಒಲಿಸಲು ಈಕೆ ಬರೋಬ್ಬರಿ 1 ಕೋಟಿ ಗೂ ಅಧಿಕ ರೂ. ಖರ್ಚು ಮಾಡಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದಾಳೆ.

ತನ್ನ ಪ್ರಿಯಕರ ನೀಳ ಕಾಲಿನ ಯುವತಿ ಯರಿಗೆ ಹೆಚ್ಚು ಆಕರ್ಷಿತನಾಗುತ್ತಾನೆ ಎಂಬ ಕಾರಣಕ್ಕೆ ಈಕೆ ಶಸ್ತ್ರಚಿಕಿತ್ಸೆಯ ಮೂಲಕ ತನ್ನ ಹೈಟ್ ಹೆಚ್ಚಿಸಿಕೊಂಡಿದ್ದಾಳೆ. ಅಂದರೆ ಕಾಲಿನ ಮೂಳೆಗಳ ಒಳಗೆ ರಾಡ್‌ಗಳನ್ನು ಹಾಕಿ ಸ್ಕ್ರೂ ಮೂಲಕ ಕಾಲಿನ ಎತ್ತರವನ್ನು ಹೆಚ್ಚಿಸುವ ಶಸ್ತ್ರಚಿಕಿತ್ಸೆ. ಈ ಶಸ್ತ್ರಚಿಕಿತ್ಸೆಯು ದೀರ್ಘಾವಧಿಯ ಚಿಕಿತ್ಸೆಯಾಗಿದ್ದು, ದಿನಕಳೆದಂತೆ ಸೆಂಟಿ ಮೀಟರ್ ಲೆಕ್ಕದಲ್ಲಿ ಎತ್ತರ ಹೆಚ್ಚುತ್ತಾ ಹೋಗುತ್ತದೆ.

ಜರ್ಮನಿಯಲ್ಲಿ ನೆಲೆಸಿರುವ ಈಕೆಯ ಹೆಸರು ಥೆರೆಸಿಯಾ ಫಿಶರ್(31). ಸೋಶಿಯಲ್ ಮೀಡಿಯಾಗಳಲ್ಲಿ ಸಖತ್ ಆಕ್ಟೀವ್ ಆಗಿರುವ ಈಕೆ ಒಂದು ಲಕ್ಷಕ್ಕೂ ಅಧಿಕ ಫಾಲೋವರ್ಸ್‌ಗಳನ್ನು ಹೊಂದಿದ್ದಾಳೆ. ಮಾಡೆಲ್ ಆಗಿ ಗುರುತಿಸಿಕೊಂಡಿರುವ ಈಕೆ ಜರ್ಮನಿಯ ರಿಯಾಲಿಟಿ ಶೋಗಳಲ್ಲಿ ಸ್ಪರ್ಧಿಸಿ ಸಾಕಷ್ಟು ಖ್ಯಾತಿ ಗಳಿಸಿದ್ದಾಳೆ. ಈಕೆಯ ಪ್ರಿಯಕರನ ಹೆಸರು ಸ್ಟೀಫನ್ ಕ್ಲೇಸರ್(57). ಇದೀಗ ಎತ್ತರವನ್ನು ಹೆಚ್ಚಿಸಿಕೊಂಡ ಬಳಿಕ ಪ್ರಿಯಕರ ಸ್ಟೀಫನ್ ಖುಷಿಯಾಗಿದ್ದು, ತನ್ನನ್ನು ಹೆಚ್ಚು ಪ್ರೀತಿಸುತ್ತಿದ್ದಾನಂತೆ.

ಕಳ್ಳತನಕ್ಕಿಳಿದ ಯುಪಿಎಸ್‌ಸಿ ಆಕಾಂಕ್ಷಿ: ದಂಪತಿಯ ರಾಸಲೀಲೆ ವಿಡಿಯೋ ಮಾಡಿ ಬ್ಲಾಕ್ ಮೇಲ್

ಛತ್ತೀಸ್‌ಗಢ: ನಾಗರಿಕ ಸೇವಾ ಪರೀಕ್ಷೆ ಬರೆದು ಅಧಿಕಾರಿಯಾಗುವ ಕನಸು ಕಾಣುತ್ತಿದ್ದ ಯುವಕನೊಬ್ಬ ಪದೇ ಪದೆ ಸಿವಿಲ್ ಪರೀಕ್ಷೆಯಲ್ಲಿ ಫೇಲ್ ಆಗುತ್ತಿದ್ದರಿಂದ ಕೊನೆಗೆ ಕಳ್ಳನಾಗಲು ನಿರ್ಧರಿಸಿದ್ದ. ತನ್ನ ಮನೆಯ ಸುತ್ತಮುತ್ತ ಕಳ್ಳತನ ಮಾಡಲು ಆರಂಭಿಸಿದ್ದು ಆಗಾಗ ಜನರ ಮೊಬೈಲ್‌ಗಳನ್ನು ಕದಿಯುತ್ತಿದ್ದ.

ಕೆಲ ದಿನಗಳ ಹಿಂದೆ ಕಳ್ಳತನ ಮಾಡಲು ಮನೆಯೊಂದಕ್ಕೆ ಆರೋಪಿ ಛತ್ತೀಸ್‌ಗಢದ ವಿನಯ್ ಕುಮಾರ್ ಸಾಹು ನುಗ್ಗಿದ್ದ. ಆ ವೇಳೆ ಮನೆಯಲ್ಲಿ ಗಂಡ ಹೆಂಡತಿ ರಾಸಲೀಲೆಯಲ್ಲಿ ತೊಡಗಿದ್ದರು. ವಿನಯ್ ಕಳ್ಳತನ ಮಾಡುವ ಬದಲು ರಹಸ್ಯವಾಗಿ ಅವರ ಅಶ್ಲೀಲ ವೀಡಿಯೊಗಳನ್ನು ಚಿತ್ರೀಕರಿಸಿ, ಕಳ್ಳ ವಿನಯ್ ದಂಪತಿಗೆ 10 ಲಕ್ಷ ರೂಪಾಯಿಗೆ ಬೇಡಿಕೆ ಇಟ್ಟಿದ್ದ. ಹಣ ಕೊಡದಿದ್ದರೆ ವಿಡಿಯೋ ವೈರಲ್ ಮಾಡುವುದಾಗಿ ಬೆದರಿಕೆ ಹಾಕಲು ಆರಂಭಿಸಿದ್ದಾನೆ. ವಾಸ್ತವವಾಗಿ, ಈತ ಕದ್ದ ಫೋನ್‌ನಿಂದ ವೀಡಿಯೊವನ್ನು ಚಿತ್ರೀಕರಿಸಿದ್ದ. ಇದರಿಂದ ಪ್ರಕರಣವನ್ನು ಭೇದಿಸಲು ಪೊಲೀಸರಿಗೆ ಸುಲಭವಾಯಿತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದುರ್ಗ ಪೊಲೀಸರು ವಿಶೇಷ ತಂಡ ರಚಿಸಿದ್ದರು. ಬುಧವಾರ ಪೊಲೀಸರು ಕಳ್ಳ ವಿನಯ್‌ನನ್ನು ಬಂಧಿಸಿದ್ದಾರೆ. ಅಲ್ಲದೆ ಫೋನ್‌ನಲ್ಲಿದ್ದ ಅಶ್ಲೀಲ ವೀಡಿಯೊವನ್ನು ಡಿಲೀಟ್ ಮಾಡಿದ್ದಾರೆ.

ಬಿಹಾರದಲ್ಲಿ ಮತ್ತೊಂದು ಸೇತುವೆ ಕುಸಿತ, 10 ದಿನದಲ್ಲೆ 4ನೇ ಘಟನೆ



ಪಾಟ್ನಾ: ಬಿಹಾರದ ಕಿಶನ್‌ಗಂಜ್ ಜಿಲ್ಲೆಯಲ್ಲಿ ಮತ್ತೊಂದು ಸೇತುವೆಯೊಂದು ಕುಸಿದು ಬಿದ್ದಿದೆ. ಇದು 10 ದಿನಗಳಲ್ಲಿ ರಾಜ್ಯದಲ್ಲಿ ನಡೆದ ನಾಲ್ಕನೇ ಘಟನೆಯಾಗಿದೆ. 13 ವರ್ಷಗಳಷ್ಟು ಹಳೆಯದಾದ ಸೇತುವೆಯನ್ನು ಬನ್ಸ್ಬರಿ ಶ್ರವಣ ಚೌಕ್ ಬಳಿ ಮಾರಿಯಾ ನದಿಯ ಉಪನದಿಗೆ ನಿರ್ಮಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭಾರೀ ಮಳೆಗೆ 70 ಮೀಟರ್ ಉದ್ದದ ಸೇತುವೆ ಕುಸಿದು ಬಿದ್ದಿದೆ. ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೇತುವೆ ಕುಸಿತದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಸೇತುವೆಯ ಮಧ್ಯ ಭಾಗ ಕುಸಿದು ಬಿದ್ದು, ವೇಗವಾಗಿ ಹರಿಯುವ ನದಿಗೆ ತಾಗಿಕೊಂಡಿರುವುದನ್ನು ವಿಡಿಯೋದಲ್ಲಿ ಕಾಣಬಹುದು. ರಾಜ್ಯ ಗ್ರಾಮೀಣ ಕಾಮಗಾರಿ ಇಲಾಖೆ 2011ರಲ್ಲಿ ಸೇತುವೆ ನಿರ್ಮಿಸಿತ್ತು. ಬಹದ್ದೂರ್‌ಗಂಜ್ ಬ್ಲಾಕ್‌ನಲ್ಲಿರುವ ಸೇತುವೆಯು 70 ಮೀಟರ್ ಉದ್ದ ಮತ್ತು 12 ಮೀಟರ್ ಅಗಲವಿದೆ. ನೇಪಾಳದ ಜಲಾನಯನ ಪ್ರದೇಶದಲ್ಲಿ ಭಾರೀ ಮಳೆಯಾಗುತ್ತಿದ್ದು, ನೀರಿನ ಮಟ್ಟದಲ್ಲಿ ಹಠಾತ್ ಏರಿಕೆಯಾಗಿ ಸೇತುವೆಯ ಒಂದು ಭಾಗ ಕುಸಿದು ಬಿದ್ದಿದೆ ಎಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ತುಷಾರ್ ಸಿಂಗ್ಲಾ ಹೇಳಿದ್ದಾರೆ.

ಶಾಲೆಗೆ ಸೇರಿಸುವುದಾಗಿ ಬಾಲಕನನ್ನು ಕರೆತಂದು ಜೀತಕ್ಕಿಟ್ಟ ದಂಪತಿಗೆ 11 ವರ್ಷ ಜೈಲು

ನ್ಯೂಯಾರ್ಕ್: ಶಾಲೆಗೆ ಸೇರಿಸಲು ಸಹಾಯ ಮಾಡುವುದಾಗಿ ಹೇಳಿ ಭಾರತದಿಂದ ಅಮೆರಿಕಕ್ಕೆ ಬಾಲಕನೊಬ್ಬನನ್ನು ಕರೆತಂದು ಜೀತಕ್ಕಿಟ್ಟಿದ್ದ ದಂಪತಿಗೆ ಅಮೆರಿಕ ನ್ಯಾಯಾಲಯವು 11 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. ಅಷ್ಟೇ ಅಲ್ಲದೆ ಬಾಲಕನಿಗೆ 1.8 ಕೋಟಿ ರೂ. ಪರಿಹಾರವನ್ನು ನೀಡುವಂತೆ ನ್ಯಾಯಾಲಯ ಸೂಚಿಸಿದೆ.



ಈ ದಂಪತಿ ತಮ್ಮದೇ ಸಂಬಂಧಿಯ ಮಗನನ್ನು ಕರೆತಂದು ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಿಟ್ಟಿದ್ದರು. ಕಳೆದ ಮೂರು ವರ್ಷಗಳಿಂದ ಬಾಲಕ ಗ್ಯಾಸ್ ಸ್ಟೇಷನ್‌ನಲ್ಲಿ ಕೆಲಸ ಮಾಡುತ್ತಿದ್ದ. ಅಷ್ಟೇ ಅಲ್ಲದೆ ಅವರು ಬಾಲಕನ ವಲಸೆ ದಾಖಲೆಗಳನ್ನು ಕೂಡ ತಮ್ಮ ಬಳಿ ಇರಿಸಿಕೊಂಡಿದ್ದರು. ಹಾಗೆಯೇ ನಿನಗೆ ಹಣ ಬೇಕೆಂದರೆ ದಿನಕ್ಕೆ 12 ರಿಂದ 17 ಗಂಟೆಗಳ ಕಾಲ ಕೆಲಸ ಮಾಡಬೇಕೆಂದು ಹೇಳಿದ್ದರು. ದೈಹಿಕವಾಗಿ ಮಾನಸಿಕವಾಗಿ ಕಷ್ಟ ಕೊಟ್ಟಿದ್ದರು. ಪೆಟ್ರೋಲ್ ಬಂಕ್‌ನಲ್ಲಿ ಶುಚಿಗೊಳಿಸುವುದು, ಅಡುಗೆ ಮಾಡುವುದು, ಪೆಟ್ರೋಲ್ ಬಂಕ್‌ನ ದಾಖಲೆ ನಿರ್ವಹಣೆ ಸೇರಿದಂತೆ ಕೆಲವು ಕೆಲಸಗಳನ್ನು ಮಾಡಿಸುತ್ತಿದ್ದರು.

31 ವರ್ಷ ಹರ್ಮನ್ ಪ್ರೀತ್ ಸಿಂಗ್‌ಗೆ 11 ವರ್ಷಗಳ ಜೈಲು ಶಿಕ್ಷೆ ಹಾಗೂ 43 ವರ್ಷದ ಕುಲಬೀರ್ ಕೌರ್‌ಗೆ 7 ವರ್ಷಗಳ ಶಿಕ್ಷೆ ವಿಧಿಸಲಾಗಿದೆ. ಹಾಗೆಯೇ ಬಾಲಕನಿಗೆ 1.8 ಕೋಟಿ ರೂ. ಪರಿಹಾರ ನೀಡುವಂತೆ ತಿಳಿಸಲಾಗಿದೆ. ಬಾಲಕನಿಗೆ ಅಮೆರಿಕದಲ್ಲಿ ಒಳ್ಳೆಯ ಶಾಲೆಗೆ ಸೇರಿಸುವುದಾಗಿ ಕುಟುಂಬದವರನ್ನು ನಂಬಿಸಿ ಕರೆತಂದಿದ್ದಾರೆ.

ಸೈಬರ್ ಕ್ರೈಂನಡಿ ಶ್ರೀಲಂಕಾದಲ್ಲಿ 60 ಭಾರತೀಯರ ಬಂಧನ

ಕೊಲಂಬೋ: ಆನ್‌ಲೈನ್ ಹಣ ಕಾಸು ವಂಚನೆಯಲ್ಲಿ ಭಾಗಿಯಾಗಿರುವ ಆರೋಪದ ಮೇಲೆ ಕನಿಷ್ಠ 60 ಭಾರತೀಯರನ್ನೊಳಗೊಂಡ ಗುಂಪನ್ನು ಶ್ರೀಲಂಕಾದ ಅಪರಾಧ ತನಿಖಾ ಇಲಾಖೆ ಬಂಧಿಸಿದೆ.

ಪೊಲೀಸ್ ವಕ್ತಾರ ಎಸ್‌ಎಸ್‌ಪಿ ನಿಹಾಲ್ ತಲ್ದುವಾ ಅವರ ಪ್ರಕಾರ, ಸಿಐಡಿ ಮಡಿವೇಲಾ, ಬಟ್ಟರಮುಲ್ಲಾ ಮತ್ತು ನೆಗೊಂಬೊ ಪ್ರದೇಶಗಳಲ್ಲಿ ಏಕಕಾಲದಲ್ಲಿ ದಾಳಿ ನಡೆಸಿದ್ದು, 135 ಮೊಬೈಲ್ ಫೋನ್‌ಗಳು ಮತ್ತು 57 ಲ್ಯಾಪ್‌ಟಾಪ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಸಾಮಾಜಿಕ ಮಾಧ್ಯಮದಲ್ಲಿ ಸಂವಾದ ನಡೆಸಿ ಹಣ ಸಂಪಾದಿಸಬಹುದು ಎಂದು ವಾಟ್ಸಾಪ್ ಗ್ರೂಪ್ ಮೂಲಕ ಆಮಿಷವೊಡ್ಡಿದ್ದು, ಆಮಿಷಕ್ಕೆ ತುತ್ತಾಗಿ ವಂಚನೆಗೆ ಒಳಗಾದ ಸಂತ್ರಸ್ತೆ ನೀಡಿದ ದೂರ ಆಧಾರದ ಮೇಲೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ತಲ್ದುವಾ ಹೇಳಿದ್ದಾರೆ.

ಬಂಧಿತ ಆರೋಪಿಗಳು ದುಬೈ ಮತ್ತು ಅಫ್ಘಾನಿಸ್ತಾನದಲ್ಲಿ ಅಂತರರಾಷ್ಟ್ರೀಯ ಸಂಪರ್ಕಗಳನ್ನು ಹೊಂದಿದ್ದು, ಇವರೆಲ್ಲ ಹಣಕಾಸು ವಂಚನೆ, ಬೆಟ್ಟಿಂಗ್ ಹಾಗೂ ಗ್ಯಾಂಬ್ಲಿಂಗ್ ಸೇರಿದಂತೆ ಇನ್ನಿತರ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಶಂಕೆ ಇದೆ. ಸ್ಥಳೀಯರು ಹಾಗೂ ವಿದೇಶಿಯರು ಸಹ ಇವರ ಮೋಸದ ಜಾಲಕ್ಕೆ ಬಿದ್ದಿರುವ ಸಾಧ್ಯತೆ ಇದೆ. ತನಿಖೆ ಪ್ರಗತಿಯಲ್ಲಿದೆ ಎಂದು ನಿಹಾಲ್ ತಲ್ದುವಾ ಅವರು ತಿಳಿಸಿದ್ದಾರೆ.

ಮೈಸೂರು ವಿವಿಯಿಂದ 80.35 ಕೋಟಿಯ ಕೊರತೆ ಬಜೆಟ್ ಮಂಡನೆ



ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ ಎನ್.ಕೆ. ಲೋಕನಾಥ್ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಶಿಕ್ಷಣ ಮಂಡಳಿ ಸಭೆಯಲ್ಲಿ ಪ್ರಸಕ್ತ ಸಾಲಿನ ಬಜೆಟ್ ಮಂಡಿಸಲಾಯಿತು. ಕುಲಸಚಿವರಾದ ವಿ.ಆರ್. ಶೈಲಜಾ, ಡಾ. ಬಸಪ್ಪ ಹಣಕಾಸು ಅಧಿಕಾರಿ ಕೆ.ಎಸ್. ರೇಖಾ, ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜೂ. 28(ಆರ್‌ಕೆ)– ಮೈಸೂರು ವಿಶ್ವವಿದ್ಯಾನಿಲಯವು 2024–25ನೇ ಸಾಲಿಗೆ 80.35 ಕೋಟಿ ರೂ. ಕೊರತೆ ಬಜೆಟ್ ಮಂಡಿಸಿದೆ.

ಕ್ರಾಫರ್ಡ್ ಭವನದಲ್ಲಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಅಧ್ಯಕ್ಷತೆಯಲ್ಲಿ ಇಂದು ನಡೆದ ಶಿಕ್ಷಣ ಮಂಡಳಿ ಸಭೆಯಲ್ಲಿ ಹಣಕಾಸು ಅಧಿಕಾರಿ ಕೆ.ಎಸ್. ರೇಖಾ ಪ್ರಸಕ್ತ ಸಾಲಿನ ಆಯ–ವ್ಯಯವನ್ನು ಮಂಡಿಸಿದರು.

277.39 ಕೋಟಿ ರೂ. ಆದಾಯ ನಿರೀಕ್ಷಿಸಲಾಗಿದ್ದು, ವಿವಿಧ ಬಾಬತ್ತಿಗೆ 357.74 ಕೋಟಿ ರೂ. ವೆಚ್ಚವಾಗಬಹುದೆಂದು ಅಂದಾಜಿಸಿರುವುದರಿಂದ ಪ್ರಸಕ್ತ ಸಾಲಿಗೆ 80.35 ಕೋಟಿ ರೂ. ಕೊರತೆ ಆಯ–ವ್ಯಯವನ್ನು ವಿಶ್ವವಿದ್ಯಾನಿಲಯವು ಮಂಡಿಸಿದೆ. ಖಾಯಂ ಸಿಬ್ಬಂದಿ ವೇತನ ಮತ್ತು ಪಿಂಚಣಿಗಾಗಿ ಸರ್ಕಾರದಿಂದ 171.78 ಕೋಟಿ ರೂ., ವಿದ್ಯಾರ್ಥಿ ವೇತನಕ್ಕೆ 174.78 ಕೋಟಿ ರೂ.ಗಳನ್ನು ನಿರೀಕ್ಷಿಸಲಾಗಿದೆ.

ಆಂತರಿಕ ಸಂಪನ್ಮೂಲಗಳಾದ ಪ್ರವೇಶಾತಿ, ನೋಂದಣಿ, ಸಂಯೋಜನೆ, ಇನ್ನಿತರ ಶುಲ್ಕಗಳಿಂದ 42 ಕೋಟಿ ರೂ., ಸ್ಕೀಂ 'ಬಿ' ಕೋರ್ಸುಗಳಿಂದ 3.5 ಕೋಟಿ ರೂ., ಪರೀಕ್ಷಾ ಚಟುವಟಿಕೆಗಳಿಂದ 45 ಕೋಟಿ ರೂ., ವಿವಿಧ ಆಸ್ತಿಗಳಿಂದ 3 ಕೋಟಿ ರೂ., ಇತರ ಮೂಲಗಳಿಂದ 6 ಕೋಟಿ ರೂ. ಸೇರಿದಂತೆ ಒಟ್ಟಾರೆ 277.38 ಕೋಟಿ ರೂ. ಆದಾಯ ನಿರೀಕ್ಷಿಸಲಾಗಿದೆ.

ವೆಚ್ಚಗಳು: ಪಿಂಚಣಿಗಾಗಿ 120 ಕೋಟಿ ರೂ., ವೇತನಕ್ಕೆ 170.37 ಕೋಟಿ ರೂ., ಸಾಮಾನ್ಯ ಆಡಳಿತ ವೆಚ್ಚ 3.10 ಕೋಟಿ ರೂ., ಬೋಧನೆ, ಸಂಶೋಧನೆಗಾಗಿ 1.64 ಕೋಟಿ ರೂ., ವಿದ್ಯಾರ್ಥಿ ಕ್ಷೇಮ ಪಾಲನೆಗೆ 27 ಕೋಟಿ ರೂ., ಕ್ಯಾಂಪಸ್ ನಿರ್ವಹಣೆಗೆ 21.12 ಕೋಟಿ ರೂ., ಪರೀಕ್ಷಾ ಚಟುವಟಿಕೆಗಳಿಗೆ 14.57 ಕೋಟಿ ರೂ. ಸೇರಿ 2024–25ನೇ ಸಾಲಿನಲ್ಲಿ ಒಟ್ಟು 357.74 ಕೋಟಿ ರೂ. ಖರ್ಚಾಗಲಿದೆ ಎಂದು ನಿರೀಕ್ಷಿಸಲಾಗಿದೆ.

2022ರಿಂದ 2024–25ನೇ ಸಾಲಿನಲ್ಲಿ ಸರ್ಕಾರದಿಂದ ಪಿಂಚಣಿ ಅನುದಾನವಾಗಿ 189 ಕೋಟಿ ರೂ. ಕಡಿಮೆ ಅನುದಾನ ನೀಡಿದ ಕಾರಣ ಪ್ರಸಕ್ತ ಸಾಲಿನಲ್ಲಿ 80.35 ಕೋಟಿ ರೂ. ಕೊರತೆ ಬಜೆಟ್ ಅನ್ನು ಮೈಸೂರು ವಿಶ್ವವಿದ್ಯಾನಿಲಯವು ಎದುರಿಸುತ್ತಿದೆ. ವೆಚ್ಚ ಮಿತಿಗೊಳಿಸುವುದು ಅತ್ಯಗತ್ಯ. ಅನಿವಾರ್ಯ ವೆಚ್ಚ ಹೊರತುಪಡಿಸಿ ಉಳಿದ ವೆಚ್ಚ ನಿಯಂತ್ರಿಸಲು ಕ್ರಮ ವಹಿಸಲಾಗಿದೆ ಎಂದು ಹಣಕಾಸು ಅಧಿಕಾರಿಗಳು ತಿಳಿಸಿದ್ದಾರೆ.

ವಿಶ್ವವಿದ್ಯಾನಿಲಯದ 18 ಬ್ಯಾಂಕ್ ಖಾತೆಗಳ ಸ್ವೀಕೃತಿ, ಬಡ್ಡಿ ಸೇರಿ 16.94 ಕೋಟಿ ರೂ. ಆದಾಯ ಮತ್ತು 42.66 ಕೋಟಿ ರೂ.ಗಳನ್ನು ವೆಚ್ಚಕ್ಕೆ ನಿಗದಿಪಡಿಸಿರುವುದರಿಂದ ಆರ್ಥಿಕ ಹೊರೆಯಾಗುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಕುಲಸಚಿವೆ ವಿ.ಆರ್. ಶೈಲಜಾ, ಪರೀಕ್ಷಾಂಗ ಕುಲಸಚಿವ ಡಾ. ಬಸಪ್ಪ ಹಾಗೂ ಶೈಕ್ಷಣಿಕ ಮಂಡಳಿ ಸದಸ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಬೋಧಕೇತರ ಸಿಬ್ಬಂದಿ ಸಂಖ್ಯೆ ಕಡಿತಗೊಳಿಸಲು ಸಮಿತಿ ರಚನೆ

ಮೈಸೂರು ವಿವಿ ಶಿಕ್ಷಣ ಮಂಡಳಿ ಸಭೆಯಲ್ಲಿ ನಿರ್ಧಾರ

ಮೈಸೂರು, ಜೂ.28(ಆರ್‌ಕೆ)– ಬೋಧಕೇತರ ಸಿಬ್ಬಂದಿ ಸಂಖ್ಯೆ ಕಡಿತಗೊಳಿಸುವ ಸಂಬಂಧ ವರದಿ ನೀಡಲು ವಿಶ್ರಾಂತ ಕುಲಪತಿ ಪ್ರೊ. ಅಂಬಳಿಕೆ ಹಿರಿಯಣ್ಣ ಅಧ್ಯಕ್ಷತೆಯಲ್ಲಿ ನಾಲ್ವರ ಸಮಿತಿ ರಚಿಸಲಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ.ಲೋಕನಾಥ್ ತಿಳಿಸಿದ್ದಾರೆ.

ಉನ್ನತ ಶಿಕ್ಷಣ ಇಲಾಖೆ ನಿರ್ದೇಶನದಂತೆ ವಿಶ್ವವಿದ್ಯಾನಿಲಯದಲ್ಲಿ ಕೆಲಸ ನಿರ್ವಹಿಸುತ್ತಿರುವ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಯ ಸಂಖ್ಯೆ ತರ್ಕಬದ್ಧಗೊಳಿಸಲು ರಚಿಸಿರುವ ಸಮಿತಿ ನೀಡುವ ವರದಿ ಆಧರಿಸಿ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಇಂದು ನಡೆದ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಅನಧಿಕೃತವಾಗಿ ಬೋಧಕೇತರ ಸಿಬ್ಬಂದಿಯನ್ನು ಅಗತ್ಯಕ್ಕಿಂತ ಹೆಚ್ಚಾಗಿ ನೇಮಿಸಿಕೊಳ್ಳಲಾಗಿದೆ ಹಾಗಾಗಿ ವರ್ಷಕ್ಕೆ 25 ಕೋಟಿ ರೂ. ವೇತನ ಪಾವತಿಸಬೇಕಾಗಿದೆ ಎಂದರು.

ಅದಕ್ಕೆ ಪ್ರತಿಕ್ರಿಯಿಸಿದ ಕುಲಸಚಿವೆ ವಿ.ಆರ್.ಶೈಲಜ, ಎರಡು ವರ್ಷಗಳಿಂದ ನೇಮಕಾತಿ ಮಾಡಿಲ್ಲ. 2001 ರಿಂದ 2010ರ ಅವಧಿಯಲ್ಲಿ ಈ ನೇಮಕವಾಗಿದೆ. ಈಗ 1340 ಮಂದಿ ಬೋಧಕೇತರ ಸಿಬ್ಬಂದಿಗಳಿದ್ದಾರೆ. 400 ಹುದ್ದೆಗಳು ಸೃಜನವಾಗಿವೆ. ಆದರೆ ಕಾಲ–ಕಾಲಕ್ಕೆ ಹೊರ ಗುತ್ತಿಗೆ, ತಾತ್ಕಾಲಿಕ ಆಧಾರದ ಮೇಲೆ ನೇಮಕ ಮಾಡಲಾಗಿದೆ ಎಂದರು.

ಈಗ ಇದರ ಬಗ್ಗೆ ಸೂಕ್ತ ನಿರ್ಣಯಕ್ಕೆ ಬರಲು ಸಮಿತಿ ರಚಿಸಿದ್ದು, ನಂತರ ಒಟ್ಟಿಗೆ ತೆಗೆಯುವುದೇ? ಹಂತ ಹಂತವಾಗಿ ಕೈಬಿಡಬೇಕೆ, ನ್ಯಾಯಾಲಯದ ಮೊರೆ ಹೋದರೆ ಏನು ಕ್ರಮ ವಹಿಸಬೇಕು ಎಂಬುದರ ಬಗ್ಗೆ ಪರಾಮರ್ಶಿಸಿ ಮುಂದಿನ ಕ್ರಮ ವಹಿಸಬೇಕಾಗಿದೆ ಎಂದು ಶೈಲಜಾ ತಿಳಿಸಿದರು.

ಪಿಂಚಣಿ ಪ್ರಕ್ರಿಯೆಯನ್ನು ಹೆಚ್‌ಆರ್‌ಎಂಎಸ್ ಅಡಿ ತರಲು ಸರ್ಕಾರದ ಅನುಮತಿ ಬೇಕು ಎಂದು ಪ್ರೊ. ಡಿ.ಆನಂದ ಸಲಹೆ ನೀಡಿದಾಗ, ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಿರಿ. ನಾನು ಸದನದಲ್ಲಿ ವಿಷಯ ಪ್ರಸ್ತಾಪಿಸುತ್ತೇನೆ ಎಂದು ಸಿ.ಎನ್.ಮಂಜೇಗೌಡ ತಿಳಿಸಿದರು.

ನಿವೃತ್ತರ ಪಿಂಚಣಿ ಅನುದಾನವನ್ನು ಬೇರೆ ಉದ್ದೇಶಕ್ಕೆ ಬಳಸಲಾಗುತ್ತಿದೆ ಎಂಬ ಅನುಮಾನ ಮೂಡಿರುವುದರಿಂದ ಹೆಚ್‌ಆರ್‌ಎಂಎಸ್ ಅಡಿ ಪಾವತಿಸಬೇಕು ಎಂದು ಸದಸ್ಯರು ಅಭಿಪ್ರಾಯಪಟ್ಟರು.

ಅದಕ್ಕೆ ಉತ್ತರಿಸಿದ ಪ್ರೊ ಲೋಕನಾಥ್ ಅವರು, ಪಿಂಚಣಿ ಹಣವನ್ನು ಬೇರೆ ಉದ್ದೇಶಕ್ಕೆ ಬಳಸುತ್ತಿಲ್ಲ. ಅದಕ್ಕೆ ಅವಕಾಶವೂ ಇಲ್ಲ. ಸರ್ಕಾರ ವರ್ಷದಿಂದ ವರ್ಷಕ್ಕೆ ಪಿಂಚಣಿ ಅನುದಾನ ಕಡಿತಗೊಳಿಸುತ್ತಿದೆ. 2018 ರಿಂದ ಅಭಿವೃದ್ಧಿ ಅನುದಾನವನ್ನು ನೀಡುತ್ತಿಲ್ಲ ವಾದರೂ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ನಿರ್ವಹಣೆ ಮಾಡುತ್ತಿದ್ದೇವೆ ಎಂದು.

ಮಾನಸ ಗಂಗೋತ್ರಿ ಕ್ಯಾಂಪಸ್‌ನಲ್ಲಿ ಬಿಯರ್ ಬಾಟಲಿ, ಸಿಗರೇಟ್ ಪ್ಯಾಕ್, ಪ್ಲಾಸ್ಟಿಕ್ ಬಾಟಲಿ, ಫುಡ್ ಪ್ಯಾಕೆಟ್‌ಗಳು ಯಥೇಚ್ಛವಾಗಿ ಬಿದ್ದಿರುತ್ತವೆ. ವಾಯು ವಿಹಾರ, ವ್ಯಾಯಾಮ ಮಾಡುವವರಿಗೆ ಈ ದೃಶ್ಯ ಗೋಚರಿಸುತ್ತಿದೆ. ಕ್ಯಾಂಪಸ್ ನಿರ್ವಹಣೆಗೆ 21 ಕೋಟಿ ರೂ. ಖರ್ಚು ತೋರಿಸಿದ್ದೀರಿ ಹಾಗಾದರೆ ಸ್ವಚ್ಛತೆ ಇರಬೇಕಿತ್ತಲ್ಲಾ ಎಂದು ಮಂಜೇಗೌಡರು ತಿಳಿಸಿದರು.

ನಾವು ನಿಯತಕಾಲಿಕವಾಗಿ ಸ್ವಚ್ಛಗೊಳಿಸುತ್ತಿದ್ದೇವೆ. ಕ್ಯಾಂಪಸ್ ನಿರ್ವಹಣೆ ಎಂದರೆ ಕೇವಲ ಗಂಗೋತ್ರಿಯಷ್ಟೇ ಅಲ್ಲದೆ, ವಿಶ್ವವಿದ್ಯಾನಿಲಯಕ್ಕೆ ಸೇರಿದ ಎಲ್ಲಾ ಕಟ್ಟಡ, ಕುಕ್ಕರಹಳ್ಳಿ ಕೆರೆ, ಹೌಸ್ ಕೀಪಿಂಗ್ ಸೇರಿದಂತೆ ಎಲ್ಲಾ ಆಸ್ತಿಗಳ ನಿರ್ವಹಣೆಯಾಗಿದೆ ಎಂದು ಕುಲಪತಿಗಳು ಸಮಜಾಯಿಷಿ ನೀಡಿದರು.

ಮೈಸೂರು ತಾಲೂಕು ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಯೋಜನೆ



ವರುಣಾ ಗ್ರಾಮದ ಸರ್ಕಾರಿ ಶಾಲೆಯ ಆವರಣದಲ್ಲಿ ನೂತನ ಕೊಠಡಿ ನಿರ್ಮಾಣಕ್ಕೆ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಗುದ್ದಲಿ ಪೂಜೆ ನೆರವೇರಿಸಿದರು.

ಮೈಸೂರು, ಜೂ. 28(ಎಂಟಿವೈ)– ಭವಿಷ್ಯದಲ್ಲಿ ಉತ್ತಮ ಸತ್ಪ್ರಜೆಗಳನ್ನು ರೂಪಿಸಲು ಗುಣಮಟ್ಟದ ಶಿಕ್ಷಣ ನೀಡುವ ಅಗತ್ಯವಿದ್ದು, ಈ ನಿಟ್ಟಿನಲ್ಲಿ ವರುಣಾ ಕ್ಷೇತ್ರದ ವ್ಯಾಪ್ತಿಯ ಮೈಸೂರು ತಾಲೂಕಿನ ಸರ್ಕಾರಿ ಶಾಲೆಗಳ ಅಭಿವೃದ್ಧಿ ಪಡಿಸಲು ಯೋಜನೆ ರೂಪಿಸಲಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದ್ದಾರೆ.

ವರುಣಾ ಗ್ರಾಮದ ಸರ್ಕಾರಿ ಶಾಲೆಯ ಆವರಣದಲ್ಲಿ ಯುನೈಟೆಡ್ ವೇ ವತಿಯಿಂದ ನಿರ್ಮಿಸುತ್ತಿರುವ ಶಾಲಾ ಕಟ್ಟಡಕ್ಕೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ಶಾಲೆಗಳಿಗೆ ಅಗತ್ಯ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಕಾರ್ಯಕ್ರಮ ರೂಪಿಸುತ್ತಿದೆ. ಸಿಎಸ್‌ಆರ್ ಫಂಡ್‌ನಲ್ಲಿ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದ್ದು, ವರುಣಾ ಕ್ಷೇತ್ರದಲ್ಲಿರುವ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಸಿಎಸ್‌ಆರ್ ಫಂಡ್‌ನಲ್ಲಿ 7 ಕೋಟಿ ರೂ. ವಿನಿಯೋಗಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಮೊದಲ ಹಂತದಲ್ಲಿ ವರುಣಾ, ವರಕೋಡು, ದೇವಲಾಪುರ, ಹಡಜನ, ಸೋಮೇಶ್ವರಪುರ, ಹಾರೋಹಳ್ಳಿ, ಯಡಕೊಳ, ಮೊಸಂಬಾಯನಹಳ್ಳಿ, ಸಿದ್ದರಾಮನ ಹುಂಡಿ, ಜಂತಗಳ್ಳಿ ಗ್ರಾಮಗಳಲ್ಲಿ ಸಿಎಸ್‌ಆರ್ ಫಂಡ್‌ನಿಂದ ನೂತನ ಕಟ್ಟಡ, ಶೌಚಾಲಯ, ಕಾಂಪೌಂಡ್, ಮೈದಾನ ಸೇರಿದಂತೆ ಶಾಲೆಗಳ ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ. ವರುಣಾ ಕ್ಷೇತ್ರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಕ್ಷೇತ್ರವಾಗಿದ್ದು, ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ತಂದು ಅಭಿವೃದ್ಧಿಪಡಿಸಲಾಗುತ್ತಿದೆ. ಇದಲ್ಲದೆ 30 ಅಂಗನವಾಡಿ ಕಟ್ಟಡಗಳನ್ನು ನಿರ್ಮಾಣ ಮಾಡುತ್ತಿದ್ದೇವೆ. ಗುಣಮಟ್ಟದ ಶಿಕ್ಷಣ ಪ್ರತಿಯೊಬ್ಬರಿಗೂ ಸಿಗಬೇಕು ಎನ್ನುವ ನಿಟ್ಟಿನಲ್ಲಿ ಅಂಗನವಾಡಿಗಳಲ್ಲಿ ಮಕ್ಕಳಿಗೆ ಇಂಗ್ಲೀಷ್ ಕಲಿಕೆಗೆ ಅವಕಾಶ ಮಾಡಿಕೊಡಲಾಗಿದೆ ವರುಣಾ ಕ್ಷೇತ್ರದ ಶಾಲೆಗಳ ಅಭಿವೃದ್ಧಿಗೆ ಹೆಚ್ಚು ಹೆಚ್ಚು ಕಂಪನಿಗಳು ಸಿಎಸ್‌ಆರ್ ಫಂಡ್ ನೀಡಲು ಮುಂದೆ ಬರುತ್ತಿವೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ವಿಶೇಷಾಧಿಕಾರಿ ಕೆ.ಎನ್. ವಿಜಯ್, ಕೆಪಿಸಿಸಿ ಕಾರ್ಯದರ್ಶಿ ವರುಣಾ ಮಹೇಶ್, ಗ್ರಾ.ಪಂ. ಅಧ್ಯಕ್ಷೆ ಗೌರಮ್ಮ, ಬಿಇಒ ವಿವೇಕಾನಂದ, ಬಿಆರ್‌ಸಿ ಮಹಾದೇವ, ಯುನೈಟೆಡ್ ವೇ ಸಿಇಓ ರಾಜೇಶ್ ಕೃಷ್ಣನ್, ಭಾಗ್ಯ, ಮುಖಂಡರಾದ ಕೆ.ಎಸ್.ಶಿವರಾಮ್, ಅಹಿಂದ ಜವರಪ್ಪ, ರಮೇಶ್, ದೇವಯ್ಯ, ಮಹೇಂದ್ರ, ಕೃಷ್ಣಮೂರ್ತಿ, ಆಪ್ತ ಸಹಾಯಕ ಶಿವಸ್ವಾಮಿ, ಪ್ರದೀಪ್ ಕುಮಾರ್, ಮಂಜುಳಾ ಮಂಜುನಾಥ್, ನಾಗರಾಜ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ನಾಡಪ್ರಭು ಕೆಂಪೇಗೌಡರ ಜಯಂತಿ



ಮೈಸೂರಿನ ಕುವೆಂಪುನಗರದಲ್ಲಿ ನಾಡಪ್ರಭು ಕೆಂಪೇಗೌಡರ 515ನೇ ಜಯಂತಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ವಿಕ್ರಾಂತ್ ಪಿ.ದೇವೇಗೌಡ, ನಿಂಗಪ್ಪ ತೊಣಚಿಕೊಪ್ಪಲ್ ಮಾರಮ್ಮ ದೇವಾಸ್ಥಾನದ ಗುಡ್ಡಪ್ಪ ಎಲ್.ಚಂದ್ರು, ಬೈರವ ಗ್ರೂಪ್ ಮಾದೇವ್, ಕಂಡೆಯ ಚನ್ನಪ್ಪ, ಗದ್ದೆಯ ರಂಗಪ್ಪ, ಅಂಬೇಡ್ಕರ್ ಶಾಲೆಯ ಅಧ್ಯಕ್ಷ ನಾಗರಾಜಪ್ಪ, ಸಕಲಮ್ಮ ಚೌಡಪ್ಪ, ಮುಡಾ ಮಾದಪ್ಪ, ಗಂಗೆ ಮರಿಯಪ್ಪ, ನಾಗಣ್ಣ, ಬುಡಂಗಪ್ಪ ಮಾದೇವ್, ಕಜ್ಜಪಣ ಕೃಷ್ಣಪ್ಪ, ಹೊರಗಜ್ಜೆ ಬೋರಪ್ಪ, ಡಿ.ಗುರುದೇವ್(ಪ್ರದೀಪ್), ಅರವಿಂದ್‌ನಗರ ರಾಜು, ಬಿಜೆಪಿ ನಾಗಣ್ಣ, ಪಾಂಡವಪುರ ರಾಮೇಗೌಡ ಅವರಿದ್ದರು.

ದೆಹಲಿ ವಿಮಾನ ನಿಲ್ದಾಣ ಟರ್ಮಿನಲ್–1 ಛಾವಣಿ ಕುಸಿತ; ಓರ್ವ ಸಾವು, 7 ಮಂದಿಗೆ ಗಾಯ

ನವದೆಹಲಿ: ಬಿಡುವಿಲ್ಲದೆ ಸುರಿಯುವ ಮಳೆಯ ನಡುವೆ ಶುಕ್ರವಾರ ನಸುಕಿನ ಜಾವ ದೆಹಲಿ ವಿಮಾನ ನಿಲ್ದಾಣದ ಟರ್ಮಿನಲ್–1 ನಿರ್ಗಮನ ಗೇಟ್‌ನಲ್ಲಿನ ಮೇಲ್ಛಾವಣಿ ಭಾಗವು ಕುಸಿದು ಬಿದ್ದ ಪರಿಣಾಮ ಒಬ್ಬರು ಮೃತಪಟ್ಟು, 7 ಮಂದಿ ಗಾಯಗೊಂಡಿದ್ದಾರೆ, ದುರ್ಘಟನೆಯಲ್ಲಿ ಟ್ಯಾಕ್ಸಿಗಳು ಮತ್ತು ಕಾರುಗಳು ಸೇರಿದಂತೆ ಅನೇಕ ವಾಹನಗಳು ಜಖಂಗೊಂಡಿವೆ.



ಇಂದು ನಸುಕಿನ ಜಾವ 5 ಗಂಟೆ ಸುಮಾರಿಗೆ ಟರ್ಮಿನಲ್ 1ರಲ್ಲಿ ದುರ್ಘಟನೆ ನಡೆದಿದ್ದು, ಸುರಕ್ಷತಾ ಕ್ರಮಗಳಾಗಿ ಟರ್ಮಿನಲ್‌ನಿಂದ ಎಲ್ಲಾ ಚೆಕ್–ಇನ್ ಮತ್ತು ನಿರ್ಗಮನಗಳನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿದೆ ಎಂದು ದೆಹಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿಗಮ ತಿಳಿಸಿದೆ.

ವಿಮಾನಗಳ ಹಾರಾಟ ರದ್ದು: ಇದಲ್ಲದೆ, ಟರ್ಮಿನಲ್ 1 ರಿಂದ ಕಾರ್ಯನಿರ್ವಹಿಸುವ ಎರಡು ವಿಮಾನಯಾನ ಸಂಸ್ಥೆಗಳಾದ ಇಂಡಿಗೋ ಮತ್ತು ಸ್ಪೈಸ್ ಜೆಟ್‌ಗಳ ವಿಮಾನ ಕಾರ್ಯಾಚರಣೆಗಳನ್ನು ಮಧ್ಯಾಹ್ನ 2 ಗಂಟೆಯವರೆಗೆ ಸ್ಥಗಿತಗೊಳಿಸಲಾಗಿದೆ ಎಂದು ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ.

ಟರ್ಮಿನಲ್ 2 ಮತ್ತು 3 ರಿಂದ ನಿಗದಿತ ವಿಮಾನಗಳ ನಿರ್ಗಮನವನ್ನು ಬದಲಾಯಿಸಲು ನಾವು ವಿಮಾನಯಾನ ಸಂಸ್ಥೆಗಳೊಂದಿಗೆ ಸಮಾಲೋಚನೆ ನಡೆಸುತ್ತಿದ್ದೇವೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಘಟನೆಯಲ್ಲಿ ನಿರ್ಗಮನದ ಮುಂಭಾಗದ ಮೇಲಾವರಣ ಮತ್ತು ಸಪೋರ್ಟ್ ಬೀಮ್ ಗಳು ಕುಸಿದಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೆಹಲಿ ಅಗ್ನಿಶಾಮಕ ಸೇವೆಯ ನಿರ್ದೇಶಕ ಅತುಲ್ ಗಾರ್ಗ್ ಅವರು ಘಟನೆಯ ಬಗ್ಗೆ ಬೆಳಿಗ್ಗೆ 5.30 ಕ್ಕೆ ಮಾಹಿತಿ ಬಂದಿದೆ ಎಂದರು. ತಕ್ಷಣವೇ 4 ಅಗ್ನಿಶಾಮಕ ಟೆಂಡರ್‌ಗಳು ಸ್ಥಳಕ್ಕೆ ಧಾವಿಸಿದವು. ವಿಮಾನ ನಿಲ್ದಾಣದಲ್ಲಿ, ಪಿಕ್ ಅಪ್ ಮತ್ತು ಡ್ರಾಪ್ ಪ್ರದೇಶದಲ್ಲಿ ಛಾವಣಿಯ ಒಂದು ಭಾಗವು ಕೆಲವು ಕಾರುಗಳ ಮೇಲೆ ಕುಸಿದಿರುವುದನ್ನು ಅಗ್ನಿಶಾಮಕ ದಳದವರು ನೋಡಿದರು, ಇದರಡಿ ಇಬ್ಬರು ಸಿಕ್ಕಿಹಾಕಿಕೊಂಡಿದ್ದು ಹಲವಾರು ಮಂದಿ ಗಾಯಗೊಂಡಿದ್ದಾರೆ.

ಡೆಂಗ್ಯೂ ಬಗ್ಗೆ ಜನರಲ್ಲಿ ಅರಿವು ಮೂಡಿಸಿದ ಆರೋಗ್ಯ ಇಲಾಖೆ



ಆರೋಗ್ಯ ಇಲಾಖೆಯಿಂದ ಡೆಂಗ್ಯೂ ನಿಯಂತ್ರಣ ಮತ್ತು ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಕ್ಷೇತ್ರ ಮಟ್ಟದಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು.

ಮೈಸೂರು, ಜೂ.28(ಜಿಎ)–ಮೈಸೂರು ನಗರದ ಹೆಚ್.ಹೆಚ್.ಎಂ.ಬಿ.ಜಿ ಮತ್ತು ಇಂದಿರಾ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿ ಡೆಂಗ್ಯೂ ನಿಯಂತ್ರಣ ಮತ್ತು ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಕ್ಷೇತ್ರ ಮಟ್ಟದಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು.

ಆರೋಗ್ಯ ಇಲಾಖೆ ಸಿಬ್ಬಂದಿಗಳು ಮನೆ ಮನೆಗೆ ಭೇಟಿ ನೀಡಿ, ಲಾರ್ವಾ ಸಮೀಕ್ಷಾ ಕಾರ್ಯಕ್ರಮಕ್ಕೆ ಸಾರ್ವಜನಿಕರು ಸಹಕರಿಸ ಬೇಕೇಂದು ಮನವಿ ಮಾಡಿದರು. ಈ ವೇಳೆ ನೀರಿನ ಬಾಟಲಿನಿಂದ ಅಣುಕು ಪ್ರದರ್ಶನ ಮಾಡುವುದರ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು. ಡಿಹೆಚ್‌ಓ ಡಾ.ಪಿ. ಸಿ.ಕುಮಾರಸ್ವಾಮಿ, ಜಿಲ್ಲಾ ರೋಗ ವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳು, ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳು ಮತ್ತು ಆರೋಗ್ಯ ಸಿಬ್ಬಂದಿಗಳು ಭಾಗವಹಿಸಿದ್ದರು.

ಪೊಲೀಸರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ, ಆರೋಪಿಯನ್ನು ಕರೆದೊಯ್ದ ಇರಾನಿ ಗ್ಯಾಂಗ್

ಗದಗ, ಜೂ. 28– ಸರಗಳ್ಳತನದಲ್ಲಿ ಕುಖ್ಯಾತರಾಗಿರುವ ಇರಾನಿ ಗ್ಯಾಂಗ್ ಸದಸ್ಯರು ಸಿನಿಮೀಯ ರೀತಿಯಲ್ಲಿ ಪೊಲೀಸರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ, ಅವರ ವಶದಲ್ಲಿದ್ದ ಆರೋಪಿಯನ್ನು ಕರೆದೊಯ್ದ ಘಟನೆ ಗದಗದಲ್ಲಿ ಇಂದು ರಾತ್ರಿ ನಡೆದಿದೆ.

ಈ ಘಟನೆಯಲ್ಲಿ ಗಂಗಾವತಿಯ ಸುಮಾರು ನಾಲ್ವರು ಪೊಲೀಸರು ತೀವ್ರವಾಗಿ ಗಾಯಗೊಂಡಿದ್ದು, ಅವರು ಆರೋಪಿಯೊಂದಿಗೆ ಪ್ರಯಾಣಿಸುತ್ತಿದ್ದ ಖಾಸಗಿ ಕಾರ್ ಅನ್ನು ಸಂಪೂರ್ಣವಾಗಿ ಜಖಂಗೊಳಿಸಲಾಗಿದೆ.

ವಿವರ: ಗಂಗಾವತಿಯಲ್ಲಿ ನಡೆದಿದ್ದ ಸರಗಳವು ಪ್ರಕರಣದ ಆರೋಪಿ ಅಮ್ಜದ್ ಅಲಿ ಇರಾನಿ ಎಂಬಾತ ಗದಗದಲ್ಲಿ ಇರುವ ಮಾಹಿತಿ ಪಡೆದಿದ್ದ ಗಂಗಾವತಿ ಪೊಲೀಸರು, ಖಾಸಗಿ ವಾಹನದಲ್ಲಿ ಗದಗಕ್ಕೆ ಬಂದು, ಆತನನ್ನು ವಶಕ್ಕೆ ಪಡೆದು ಗಂಗಾವತಿಗೆ ಕರೆದೊಯ್ಯುತ್ತಿದ್ದರು. ಗದಗ ಹೊರವಲಯದ ಸೇತುವೆಯೊಂದರ ಮೇಲೆ ಪೊಲೀಸರಿದ್ದ ಕಾರು ಚಲಿಸುತ್ತಿದ್ದಾಗ ಮತ್ತೊಂದು ಕಾರಿನಲ್ಲಿ ಹಿಂಬಾಲಿಸಿ ಬಂದ ಇರಾನಿ ಗ್ಯಾಂಗ್ ಸದಸ್ಯರು ಪೊಲೀಸರ ಕಾರನ್ನು ಅಡ್ಡಗಟ್ಟಿ ಮಾರಕಾಸ್ತ್ರಗಳಿಂದ ಕಾರಿನ ಗಾಜುಗಳನ್ನು ಒಡೆದು ಹಾಕಿದ್ದಲ್ಲದೇ, ಪೊಲೀಸರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ, ಅಮ್ಜದ್ ಅಲಿ ಇರಾನಿಯನ್ನು ತಮ್ಮೊಂದಿಗೆ ಕರೆದೊಯ್ದಿದ್ದಾರೆ. ತೀವ್ರವಾಗಿ ಗಾಯಗೊಂಡಿರುವ ಪೊಲೀಸರು ಗದಗದ ಆಸ್ಪತ್ರೆಯಲ್ಲಿ ಒಳರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ರುಕ್ಮಿಣೀಶ ವಿಜಯ ಕುರಿತು ಪ್ರವಚನ

ಮೈಸೂರು, ಜೂ. 28– ಶ್ರೀಕೃಷ್ಣ ಟ್ರಸ್ಟ್ ಹಾಗೂ ಶ್ರೀಕೃಷ್ಣ ಮಿತ್ರಮಂಡಳಿಯ ವತಿಯಿಂದ ಸರಸ್ವತಿಪುರಂನ ಶ್ರೀಕೃಷ್ಣಧಾಮದಲ್ಲಿ ಜೂ. 29 ರಿಂದ ಜು. 5 ರವರೆಗೆ ಪ್ರತಿದಿನ ಸಂಜೆ 6 ರಿಂದ 7.30 ರವರೆಗೆ ಶ್ರೀ ಅದಮಾರು ಪೀಠಾಧೀಶರಾದ ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದಗಳವರಿಂದ ಶ್ರೀಮದ್ ವಾದಿರಾಜ ವಿರಚಿತ ರುಕ್ಮಿಣೀಶ ವಿಜಯ ವಿಷಯದ ಬಗ್ಗೆ ಪ್ರವಚನ ನಡೆಯಲಿದೆ.

ಮೈಸೂರಲ್ಲಿ ವಿನೂತನ ವಿನ್ಯಾಸದ ಆಭರಣಗಳ ಪ್ರದರ್ಶನ, ಮಾರಾಟ 'ದ ಜ್ಯುವೆಲರಿ ಶೋ'ಗೆ ಚಾಲನೆ

ಮೈಸೂರು,ಜೂ.28(ಎಂಟಿವೈ)– ಮದುವೆಯೂ ಸೇರಿದಂತೆ ಶುಭ ಸಮಾರಂಭಗಳಿಗೆ ದೇಶದ ಪ್ರಸಿದ್ಧ ಆಭರಣ ವಿನ್ಯಾಸಕರು ಮಾಡಿರುವ ವಿನೂತನ ವಿನ್ಯಾಸದ ಆಭರಣಗಳ ಮಾರಾಟ ಮತ್ತು ಪ್ರದರ್ಶನ ಮೇಳ 'ದ ಜ್ಯುವೆಲರಿ ಶೋ' ಮೈಸೂರಿನ ಎಂ.ಜಿ.ರಸ್ತೆಯಲ್ಲಿರುವ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್ ಸಭಾಂಗಣದಲ್ಲಿ ಆರಂಭವಾಗಿದೆ. ಮೂರು ದಿನಗಳ ಈ ಆಭರಣ ಮಾರಾಟ ಮತ್ತು ಪ್ರದರ್ಶನ ಮೇಳವನ್ನು ಚಿತ್ರನಟಿ ಆರಾಧನ ಉದ್ಘಾಟಿಸಿದರು. ಈ ಮೇಳ ಜೂ.30ರ ರಾತ್ರಿ 9 ಗಂಟೆವರೆಗೂ ನಡೆಯಲಿದ್ದು, ದೇಶದ ವಿವಿಧೆಡೆಯಿಂದ 20ಕ್ಕೂ ಹೆಚ್ಚು ಪ್ರಸಿದ್ಧ ವಿನ್ಯಾಸಕರು ತಯಾರಿಸಿರುವ ಆಭರಣವನ್ನು ಪ್ರದರ್ಶನಕ್ಕಿಡಲಾಗಿದೆ.



ಮೈಸೂರಿನ ಎಂ.ಜಿ.ರಸ್ತೆಯಲ್ಲಿರುವ ರ್‍ಯಾಡಿಸನ್ ಬ್ಲೂ ಪ್ಲಾಜ ಹೋಟೆಲ್ ಸಭಾಂಗಣದಲ್ಲಿ ಆಯೋಜಿಸಿದ್ದ 'ದ ಜ್ಯುವೆಲರಿ ಶೋ' ಅನ್ನು ಚಿತ್ರನಟಿ ಆರಾಧನ ಉದ್ಘಾಟಿಸಿದರು.

ಗೋಲ್ಡನ್ ಕ್ರಿಪರ್ ಸಂಸ್ಥೆ ಆಯೋಜಿಸಿರುವ ಈ ಆಭರಣ ಮೇಳದಲ್ಲಿ ಬಿಐಎಸ್ ಹಾಲ್ ಮಾರ್ಕ್ ಚಿನ್ನದಲ್ಲಿಯೇ ತಯಾರಿಸಿರುವ ಆಭರಣವನ್ನೂ ಪ್ರದರ್ಶನ ಹಾಗೂ ಮಾರಾಟಕ್ಕಿಡಲಾಗಿದೆ. ಅಂತರರಾಷ್ಟ್ರೀಯ ಗುಣಮಟ್ಟದ ಜಿಐಎ, ಐಜಿಐ ಪ್ರಮಾಣೀಕೃತ ಆಭರಣಗಳಾಗಿರುವುದರಿಂದ ಗ್ರಾಹಕರ ವಿಶ್ವಾಸ ಗಳಿಸುವಲ್ಲಿ ಈ 'ದ ಜ್ಯುವೆಲರಿ ಶೋ' ಯಶಸ್ವಿಯಾಗುತ್ತಿದೆ. ಪ್ರದರ್ಶನದಲ್ಲಿ ಬೆಂಗಳೂರಿನ ಗಜರಾಜ್, ಎಂ.ಪಿ. ಜ್ಯುವೆಲರ್ಸ್, ದವನಂ, ಪಂಚಕೇಸರಿ ಬಡೇರ, ಪಿ ಎಂ ಜೆ, ಸಿಂಹ ಜ್ಯುವೆಲರ್ಸ್, ಶ್ರೀ ಕುಮಾರನ್ ತಂಗಮಳಿಗೈ, ಶ್ರೀ ಗಣೇಶ್ ಜೆಮ್ಸ್, ಮಶ್ರೀ, ಟ್ರೈದಿಯಾ, ವಂಡರ್ ಡೈಮೆಂಡ್ಸ್, ರೂಪಂ ಸಿಲ್ವರ್, ಸ್ಯಾಂಚೀಸ್, ಮದನ್ ಜೆಮ್ಸ್, ರಾಜ್ ಡೈಮೆಂಡ್ಸ್(ಮೈಸೂರು), ಡರ್ಲಾ ಗೋಲ್ಡ್(ಮೈಸೂರು), ಸುನಿಲ್ ಜ್ಯುವೆಲರ್ಸ್(ಜೈಪುರ್) ಭಾಗವಹಿಸುತ್ತಿರುವ ಆಭರಣ ಮಳಿಗೆಗಳು ತಮ್ಮ ಆಭರಣ ಪ್ರದರ್ಶನಕ್ಕಿಟ್ಟಿವೆ.

ಈ ಸಂದರ್ಭದಲ್ಲಿ ಗೋಲ್ಡನ್ ಕ್ರೀಪರ್ ಸಂಸ್ಥೆಯ ಜಗದೀಶ್ ಬಿ.ಎನ್ ಮತ್ತು ಹೇಮಲತಾ ಜಗದೀಶ್, ಆರತಿ ಸೋಮಯ್ಯ, ಗಾಯತ್ರಿ ಜವರೇಗೌಡ, ಚೈತ್ರಾ ರಂಗಸ್ವಾಮಿ, ಆಶಾ ದಿವ್ಯೇಶ್, ಹೇಮಾ ಮಾಲಿನಿ ಲಕ್ಷ್ಮಣ್, ಪಲ್ಲವಿ, ನಿರ್ಮಲಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಗ್ಲಾಸ್ ಬ್ರಿಡ್ಜ್ ಕೆಳಭಾಗ ಭೂ ಕುಸಿತ

- ಅಪಾಯದ ಹಿನ್ನೆಲೆಯಲ್ಲಿ ಸೆ.15ರವರೆಗೆ ವೀಕ್ಷಣೆ ಸ್ಥಗಿತ
- ಕಂದಾಯ ಇಲಾಖೆ ಅಧಿಕಾರಿಗಳಿಂದ ಪರಿಶೀಲನೆ



ನಂದಿಮೊಟ್ಟೆ ಬಳಿಯ ಗ್ಲಾಸ್ ಬ್ರಿಡ್ಜ್ ಪಿಲ್ಲರ್ ಕೆಳಭಾಗ ಭೂ ಕುಸಿತವಾಗಿರುವುದು.

ಮಡಿಕೇರಿ, ಜೂ.28–ನಗರದ ಹೊರ ವಲಯದ ಅಬ್ಬಿಫಾಲ್ಸ್ ಜಂಕ್ಷನ್ ನಂದಿ ಮೊಟ್ಟೆ ಬಳಿಯ ಗ್ಲಾಸ್ ಬ್ರಿಡ್ಜ್‌ನ ಪಿಲ್ಲರ್ ಕೆಳಭಾಗ ಶುಕ್ರವಾರ ಭೂ ಕುಸಿತವಾಗಿದೆ.

ಸ್ಥಳದಲ್ಲಿ ಪ್ಲಾಸ್ಟಿಕ್ ಹೊದಿಕೆಗಳನ್ನು ಅಳ ವಡಿಸಿ ಮತ್ತಷ್ಟು ಭೂ ಕುಸಿತವಾಗದಂತೆ ತಡೆಯುವ ಪ್ರಯತ್ನ ಮಾಡಲಾಗಿದೆ. ಗ್ಲಾಸ್ ಬ್ರಿಡ್ಜ್ ನಿರ್ಮಾಣಕ್ಕೆ ಆರಂಭದಲ್ಲೇ ಸ್ಥಳೀಯರಿಂದ ಅಪಸ್ವರಗಳು ಕೇಳಿ ಬಂದಿದ್ದರೂ, ಕೆಲ ಪ್ರಭಾವಿಗಳು ಕಾಮಗಾರಿ ಮುಕ್ತಾಯ ಗೊಳಿಸಿದ್ದಾರೆ ಎನ್ನಲಾಗಿದೆ. ಇದೀಗ ಭೂ ಕುಸಿತ ವಾಗಿರುವ ಸ್ಥಳಕ್ಕೆ ಕಂದಾಯ ಇಲಾಖೆ ಅಧಿಕಾರಿಗಳು ತೆರಳಿ ಪರಿಶೀಲನೆ ನಡೆಸಿದ್ದಾರೆ. ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ಗ್ಲಾಸ್ ಬ್ರಿಡ್ಜ್‌ನ ಪ್ರವೇಶ ದ್ವಾರಕ್ಕೆ ಬೀಗ ಹಾಕಲಾಗಿದೆ.

ಬ್ರಿಡ್ಜ್ ವೀಕ್ಷಣೆ ಸ್ಥಗಿತ: ಜಿಲ್ಲೆಯಲ್ಲಿ ಅನಧಿಕೃತವಾಗಿ ನಡೆಯುತ್ತಿರುವ 'ಗ್ಲಾಸ್ ಬ್ರಿಡ್ಜ್' ವೀಕ್ಷಣೆಯನ್ನು ಸೆಪ್ಟೆಂಬರ್ 15ರವರೆಗೆ ಸ್ಥಗಿತಗೊಳಿಸುವಂತೆ ತಹಸೀಲ್ದಾರ್‌ಗೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಸೂಚಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ನಡೆದ ಪ್ರಕೃತಿ ವಿಕೋಪ ನಿರ್ವಹಣೆ ಸಭೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿ, ಸೆ.15ರವರೆಗೆ ಗ್ಲಾಸ್‌ಬ್ರಿಡ್ಜ್ ವೀಕ್ಷಣೆ ಸ್ಥಗಿತಗೊಳಿಸುವಂತೆ ಆದೇಶ ಹೊರಡಿಸಲಾಗಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಯಾವುದೇ ಸುರಕ್ಷತೆ ಇಲ್ಲದೆ ಗ್ಲಾಸ್ ಬ್ರಿಡ್ಜ್ ನಿರ್ಮಾಣ ಮಾಡಲಾಗಿದೆ. ಸುರಕ್ಷತೆ ಇಲ್ಲದಿರುವ ಗ್ಲಾಸ್ ಬ್ರಿಡ್ಜ್‌ಗೆ ಪಿಡಿಓಗಳು ಹೇಗೆ ಎನ್‌ಓಸಿ ನೀಡುತ್ತಾರೆ. ಸಭೆಯ ನಡಾವಳಿ ಮಾಡಿಕೊಂಡು ಎನ್‌ಓಸಿ ನೀಡಿದರೆ ಸಾಕೆ? ಸುರಕ್ಷತೆ ಬೇಡವೇ ಎಂದು ಡಿಸಿ ವೆಂಕಟ್ ರಾಜಾ ಅಧಿಕಾರಿಗಳನ್ನು ಪ್ರಶ್ನಿಸಿದರು. ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ 'ಗ್ಲಾಸ್ ಬ್ರಿಡ್ಜ್' ವೀಕ್ಷಣೆಗೆ ಬರುವುದರಿಂದ ಏನಾದರೂ ತೊಂದರೆಯಾದಲ್ಲಿ ಯಾರೂ ಜವಾಬ್ದಾರಿ ವಹಿಸಿಕೊಳ್ಳುತ್ತಾರೆ? ಎಂದು ಪಂಚಾಯತ್ ರಾಜ್ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ.

ಜಿಲ್ಲೆಯಲ್ಲಿ ಉತ್ತಮ ಮಳೆಯಾಗುತ್ತಿದ್ದು, ಜುಲೈ ಮತ್ತು ಆಗಸ್ಟ್‌ನಲ್ಲಿ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದೆ. ಆದ್ದರಿಂದ ಪ್ರಕೃತಿ ವಿಕೋಪ ನಿರ್ವಹಣೆಗೆ ಅಧಿಕಾರಿಗಳು ಹೆಚ್ಚಿನ ನಿಗಾ ವಹಿಸಬೇಕಿದೆ. ಜುಲೈ ಮೊದಲ ವಾರ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಕೆಡಿಪಿ ಸಭೆ ನಡೆಯಲಿದ್ದು, ಅಧಿಕಾರಿಗಳು ತಮ್ಮ ತಮ್ಮ ಇಲಾಖೆಗಳ ಸಂಪೂರ್ಣ ಮಾಹಿತಿ ವರದಿಯನ್ನು ಜು.5ರೊಳಗೆ ನೀಡಬೇಕು. ಬಾಕಿ ಕಾಮಗಾರಿಗಳ ಪರಿಶೀಲಿಸಿ ಸಭೆಗೆ ಹಾಜರಾಗಬೇಕು ಎಂದು ಸೂಚಿಸಿದರು.

ಸಾರಿಗೆ ಸಂಪರ್ಕ ಕಲ್ಪಿಸುವ ಸೇತುವೆಗಳು, ರಸ್ತೆಗಳ ಬಗ್ಗೆ ಗಮನಹರಿಸಬೇಕು. ಯಾವುದೇ ಕಾರಣಕ್ಕೂ ಸಾರ್ವಜನಿಕರಿಂದ ದೂರು ಬರದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು. ತಗ್ಗು ಪ್ರದೇಶದಲ್ಲಿ ಹೆಚ್ಚಿನ ಮಳೆಯಿಂದಾಗಿ ಮನೆಗೆ ನೀರು ನುಗ್ಗುವುದು ಸೇರಿದಂತೆ ಮಳೆಯಿಂದ ಉಂಟಾಗುವ ಹಾನಿ ಬಗ್ಗೆ ನಿಖರ ಮಾಹಿತಿ ಒದಗಿಸಬೇಕು. ನಿಯಮಾನುಸಾರ ಪರಿಹಾರ ನೀಡಬೇಕು ಎಂದು ತಾಕೀತು ಮಾಡಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿಲ್ಲಾ ವಿಪತ್ತು ನಿರ್ವಹಣಾ ಪರಿಣಿತರಾದ ಆರ್.ಎಂ.ಅನನ್ಯ ವಾಸುದೇವ್, ಉಪ ವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.



ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಗ್ಲಾಸ್ ಬ್ರಿಡ್ಜ್‌ನ ಪ್ರವೇಶ ದ್ವಾರಕ್ಕೆ ಬೀಗ ಹಾಕಿರುವುದು.

ಬಿಜೆಪಿ ಎಸ್‌ಟಿ ಮೋರ್ಚಾ ಪ್ರತಿಭಟನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಕಾರ್ಯಕರ್ತರ ಆಗ್ರಹ



ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಜಿಲ್ಲಾ ಬಿಜೆಪಿ ಎಸ್‌ಟಿ ಮೋರ್ಚಾ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಮಡಿಕೇರಿ, ಜೂ.28–ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಹಗರಣದ ನೇರ ಹೊಣೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಹೊತ್ತು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿ ಕೊಡಗು ಜಿಲ್ಲಾ ಬಿಜೆಪಿ ಎಸ್‌ಟಿ ಮೋರ್ಚಾ ಕಾರ್ಯಕರ್ತರು ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದ ಮಾಜಿ ಶಾಸಕರು, ಬಿಜೆಪಿ ಎಸ್‌ಟಿ ಮೋರ್ಚಾ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು, ಭ್ರಷ್ಟ ಕಾಂಗ್ರೆಸ್ ಸರ್ಕಾರ ತೊಲಗಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಘೋಷಣೆ ಕೂಗಿದರು.

ಮಾಜಿ ಶಾಸಕ ಕೆ.ಜಿ.ಬೋಪಯ್ಯ ಮಾತನಾಡಿ, ರಾಜ್ಯ ಸರ್ಕಾರ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಹಗರಣದ ತನಿಖೆಯನ್ನು ವಿಳಂಬ ಮಾಡುತ್ತಿದೆ. ಆರೋಪ ಎದುರಿಸುತ್ತಿರುವ ಮಾಜಿ ಸಚಿವ ನಾಗೇಂದ್ರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಅಧಿಕಾರಿಗಳನ್ನು ಹೊಣೆ ಮಾಡಿ ತನಿಖೆ ನಡೆಸಲಾಗುತ್ತಿದೆ. ಇದು ಹಗರಣ ಮುಚ್ಚಿ ಹಾಕುವ ಹುನ್ನಾರವಾಗಿದೆ ಎಂದು ಆರೋಪಿಸಿದರು.

ಮಾಜಿ ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಮಾತನಾಡಿ, ನಿಗಮದಲ್ಲಿ ನಡೆದಿರುವ ಭ್ರಷ್ಟಾಚಾರ ಕುರಿತು ಉನ್ನತ ಮಟ್ಟದ ತನಿಖೆಯಾಗಬೇಕು. ರಾಜ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಎಸ್‌ಟಿ ಮೋರ್ಚಾ ಜಿಲ್ಲಾಧ್ಯಕ್ಷ ಎಂ.ಎಂ.ಪರಮೇಶ್ವರ ಮಾತನಾಡಿ, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಅವ್ಯವಹಾರದ ನೇರ ಹೊಣೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಹೊರಬೇಕು. ಈ ಬಗ್ಗೆ ರಾಜ್ಯಪಾಲರು ಮಧ್ಯಪ್ರವೇಶ ಮಾಡಿ ಸೂಕ್ತ ಕ್ರಮ ಕೈಗೊಳ್ಳಬೇಕು. ಪರಿಶಿಷ್ಟರಿಗೆ ಅನ್ಯಾಯ ಮಾಡಿರುವ ರಾಜ್ಯ ಸರ್ಕಾರವನ್ನು ತಕ್ಷಣ ವಜಾಗೊಳಿಸಬೇಕು ಎಂದು ಒತ್ತಾಯಿಸಿದರು.

ಬಳಿಕ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರಿಗೆ ಮನವಿ ಸಲ್ಲಿಸಿದರು. ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಪ್ರಧಾನ ಕಾರ್ಯದರ್ಶಿಗಳಾದ ಮಹೇಶ್ ಜೈನಿ, ವಿ.ಕೆ.ಲೋಕೇಶ್, ವಕ್ತಾರ ಬಿ.ಕೆ.ಅರುಣ್ ಕುಮಾರ್, ಉಪಾಧ್ಯಕ್ಷ ಮನು ಮಂಜುನಾಥ್, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಪಿ.ಎಂ.ರವಿ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಅನಿತಾ ಪೂವಯ್ಯ, ವಿರಾಜಪೇಟೆ ಅಧ್ಯಕ್ಷ ಸುವಿನ್ ಗಣಪತಿ, ಮಡಿಕೇರಿ ಅಧ್ಯಕ್ಷ ನಾಗೇಶ್ ಕುಂದಲ್ಪಾಡಿ, ನಗರಾಧ್ಯಕ್ಷ ಉಮೇಶ್ ಸುಬ್ರಮಣಿ, ಪ್ರಮುಖರಾದ ಯಮುನಾ ಚಂಗಪ್ಪ, ಬೊಳ್ಳಜಿರ ಬಿ.ಅಯ್ಯಪ್ಪ, ನಗರಸಭಾ ಸದಸ್ಯರು, ವಿವಿಧ ಮೋರ್ಚಾಗಳ ಪದಾಧಿಕಾರಿಗಳು, ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ದುಬಾರೆ ರಿವರ್ ರ್‍ಯಾಫ್ಟಿಂಗ್ ತಾತ್ಕಾಲಿಕ ಸ್ಥಗಿತ

ಮಡಿಕೇರಿ, ಜೂ.28– ಕಾವೇರಿ ನದಿ ಪಾತ್ರದ ಗ್ರಾಮಗಳಲ್ಲಿ ಉತ್ತಮ ಮಳೆಯಾದ ಹಿನ್ನೆಲೆಯಲ್ಲಿ ಪ್ರವಾಸಿ ತಾಣ ದುಬಾರೆಯ ಕಾವೇರಿ ನದಿಯಲ್ಲಿ ಭಾರೀ ಪ್ರಮಾಣದಲ್ಲಿ ನದಿ ನೀರು ಏರಿಕೆಯಾಗಿದೆ. ಈ ಕಾರಣಕ್ಕಾಗಿ ದುಬಾರೆ ರಿವರ್ ರ್‍ಯಾಫ್ಟಿಂಗ್ ಕ್ರೀಡೆಯನ್ನು ತಾತ್ಕಾಲಿಕವಾಗಿ ಸ್ಥಗಿತ ಮಾಡಲಾಗಿದೆ.

ಇನ್ನು ಅಲ್ಲಿನ ಆನೆ ಕ್ಯಾಂಪ್‌ಗೆ ಪ್ರವಾಸಿಗರನ್ನು ಕರೆದುಕೊಂಡು ಹೋಗಲು ಅರಣ್ಯ ಇಲಾಖೆ ದೋಣಿ ಬಳಸುತ್ತಿದ್ದು, ನೀರಿನ ಮಟ್ಟ ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಈ ದೋಣಿ ಸಂಚಾರವನ್ನು ಕೂಡ ಸ್ಥಗಿತ ಮಾಡಲಾಗಿದೆ. ಸ್ಥಳದಲ್ಲಿ ಅರಣ್ಯ ಇಲಾಖೆ ಗಾರ್ಡ್‌ಗಳನ್ನು ನೇಮಿಸಲಾಗಿದ್ದು, ಯಾರು ಕೂಡ ನೀರಿಗೆ ಇಳಿಯದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ.

ಕಾರು ಮರಕ್ಕೆ ಡಿಕ್ಕಿ; ಮೂವರಿಗೆ ಗಾಯ

ಮಡಿಕೇರಿ: ಓವರ್‌ಟೇಕ್ ವೇಳೆ ಚಾಲಕನ ನಿಯಂತ್ರಣ ತಪ್ಪಿದ ಕಾರು ಮರಕ್ಕೆ ಡಿಕ್ಕಿಯಾಗಿ ಮೂವರು ಗಾಯಗೊಂಡಿರುವ ಘಟನೆ ಗೋಣಿಕೊಪ್ಪ–ಪೊನ್ನಂ ಪೇಟೆ ಮಾರ್ಗ ಮಧ್ಯದ ಜೋಡುಬೀಟಿಯಲ್ಲಿ ಶುಕ್ರವಾರ ಸಂಭವಿಸಿದೆ.



ಕಾರಿನಲ್ಲಿದ್ದ ಗೋಣಿ ಕೊಪ್ಪಲಿನ ಪವನ್, ದಿಲನ್ ಹಾಗೂ ಅರುಣ್ ಅವರು ಸಣ್ಣ ಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದು, ಮತ್ತೊಬ್ಬ ಸ್ಥಳದಿಂದ ಓಡಿ ಹೋಗಿದ್ದಾನೆ ಎನ್ನಲಾಗಿದೆ. ವಾಹನವನ್ನು ಓವರ್‌ಟೇಕ್ ಮಾಡಲು ಹೋದಾಗ ಚಾಲಕನ ನಿಯಂತ್ರಣ ತಪ್ಪಿದ ಕಾರು ಮೊದಲು ಚರಂಡಿಗೆ ಉರುಳಿ ಬಳಿಕ ಮರಕ್ಕೆ ಡಿಕ್ಕಿಯಾಗಿದೆ. ಕಾರು ಸಂಪೂರ್ಣ ನಜ್ಜುಗುಜ್ಜಾಗಿದ್ದು, ಅದೃಷ್ಟವಶಾತ್ ಕಾರಿನಲ್ಲಿದ್ದರು ಸಣ್ಣಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ. ಗಾಯಾಳುಗಳಿಗೆ ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗಿದೆ.

ಸ್ಥಳಕ್ಕೆ ಗೋಣಿಕೊಪ್ಪ ಪೊಲೀಸ್ ಠಾಣಾಧಿಕಾರಿ ರೂಪಾದೇವಿ, ಪೊನ್ನಂಪೇಟೆ ಠಾಣಾಧಿಕಾರಿ ನವೀನ್ ಹಾಗೂ ಸಿಬ್ಬಂದಿ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಈ ಸಂಬಂಧ ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಸ್‌ನೊಂದಿಗೆ ತಮ್ಮೂರಿಗೆ ಮರಳಿದ ಪ್ರತಿಭಟನಾಕಾರರು



ಮಡಿಕೇರಿಯಲ್ಲಿ ಸೂರ್ಲಬ್ಬಿ ಗ್ರಾಮಸ್ಥರು ಬಸ್ ಸಂಚಾರ ಮತ್ತೆ ಆರಂಭಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು.

ಮಡಿಕೇರಿ, ಜೂ.28– ಹಲವು ವರ್ಷಗಳಿಂದ ನಿಂತು ಹೋಗಿದ್ದ ಬಸ್ ಮಾರ್ಗವನ್ನು ಮತ್ತೆ ಆರಂಭಿಸುವಂತೆ ಪ್ರತಿಭಟನೆ ನಡೆಸಿದ ಗ್ರಾಮಸ್ಥರು, ಕೊನೆಗೂ ತಮ್ಮೂರಿಗೆ ಬಸ್‌ನೊಂದಿಗೆ ಮರಳಿದರು.

ನಗರದಲ್ಲಿ ಶುಕ್ರವಾರ ಸೋಮವಾರಪೇಟೆ ತಾಲೂಕಿನ ಸೂರ್ಲಬ್ಬಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು. ಪ್ರತಿಭಟನೆಗೆ ಮಣಿದ ಸಾರಿಗೆ ಸಂಸ್ಥೆಯ ಮಡಿಕೇರಿ ಘಟಕದ ಸಹಾಯಕ ನಿಯಂತ್ರಣ ಮೇಲ್ವಿಚಾರಣಾಧಿಕಾರಿ ಈರಸಪ್ಪ, ತಕ್ಷಣ ಬಸ್ ಮಾರ್ಗ ಪ್ರಾರಂಭಿಸಿ ಅದೇ ಬಸ್‌ನಲ್ಲಿ ಪ್ರತಿಭಟನಾಕಾರರನ್ನು ಅವರ ಊರಿಗೆ ಕಳುಹಿಸಿದರು.

ಇಕ್ಕಟ್ಟಾದ ರಸ್ತೆಯೊಂದಿಗೆ ಸೂರ್ಲಬ್ಬಿ ಅತ್ಯಂತ ಕುಗ್ರಾಮ ಎಂಬ ಹಣೆಪಟ್ಟಿ ಹೊತ್ತುಕೊಂಡಿದ್ದು, ಗ್ರಾಮಕ್ಕೆ 2018ರಲ್ಲಿ ಒಟ್ಟು 3 ಬಸ್ ಮಾರ್ಗವನ್ನು ಪ್ರಕೃತಿ ವಿಕೋಪ, ಕೋವಿಡ್ ಲಾಕ್‌ಡೌನ್ ಸೇರಿದಂತೆ ಇತರ ಕಾರಣಗಳಿಂದ ಸ್ಥಗಿತಗೊಳಿಸಲಾಗಿತ್ತು. ಈ ಮಾರ್ಗವನ್ನು ಮತ್ತೆ ಆರಂಭಿಸಬೇಕೆಂದು ಸೂರ್ಲಬ್ಬಿ, ಹಮ್ಮಿಯಾಲ, ಮಂಕ್ಯ, ತಾಕೇರಿ ಗ್ರಾಮಸ್ಥರು ಆಗ್ರಹಿಸಿದ್ದರು. ಆದರೆ, ಕಾರಣಾಂತರಗಳಿಂದ ಮಡಿಕೇರಿ–ಸೂರ್ಲಬ್ಬಿ–ತಾಕೇರಿ–ಸೋಮವಾರಪೇಟೆ ಮಾರ್ಗವಾಗಿ ಬಸ್ ಸೇವೆ ಒದಗಿಸಿರಲಿಲ್ಲ.

ಗ್ರಾಮಸ್ಥರ ಧರಣಿ: ಹಲವು ಬಾರಿ ಮನವಿ ಮಾಡಿದ್ದರೂ ಮಡಿಕೇರಿ ಕೆಎಸ್‌ಆರ್‌ಟಿಸಿ ಘಟಕ ನಮಗೆ ಯಾವುದೇ ರೀತಿ ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿ ಸೂರ್ಲಬ್ಬಿ, ಹಮ್ಮಿಯಾಲ, ಮುಟ್ಲು, ಮಂಕ್ಯ, ಕಿಕ್ಕರಳ್ಳಿ, ತಾಕೇರಿ ಗ್ರಾಮಗಳ ಬೆರಳಣಿಕೆಯ ಗ್ರಾಮಸ್ಥರು ಮಡಿಕೇರಿ ಘಟಕದ ಮುಂದೆ ಧರಣಿ ನಡೆಸಿದರು.

ಯಾವುದೇ ಬಸ್‌ಗಳು ಘಟಕದ ಒಳಗೆ ಹಾಗೂ ಹೊರ ಹೋಗದಂತೆ ಪ್ಲಾಸ್ಟಿಕ್ ಟಾರ್ಪಲ್ ಹಾಗೂ ಛತ್ರಿ ಹಿಡಿದು ಮಳೆಯಲ್ಲೇ ಪ್ರತಿಭಟನೆ ನಡೆಸಿದರು. ಬಸ್ ಮಾರ್ಗವನ್ನು ತಕ್ಷಣ ಮತ್ತೆ ಆರಂಭಿಸಬೇಕು. ಇಲ್ಲದಿದ್ದರೆ ಸ್ಥಳದಿಂದ ಕದಲುವುದಿಲ್ಲ ಎಂದು ಪಟ್ಟುಹಿಡಿದರು.

ಮಣಿದ ಅಧಿಕಾರಿಗಳು: ಧರಣಿ ಸ್ಥಳಕ್ಕೆ ಆಗಮಿಸಿದ ಕೆಎಸ್‌ಆರ್‌ಟಿಸಿ ಘಟಕದ ಸಹಾಯಕ ನಿಯಂತ್ರಣ ಮೇಲ್ವಿಚಾರಣೆ ಅಧಿಕಾರಿ ಈರಸಪ್ಪ, ಪ್ರತಿಭಟನಾನಿರತ ಗ್ರಾಮಸ್ಥರ ಮನವಿ ಆಲಿಸಿದರು. ತಕ್ಷಣ 2 ಬಸ್ ಸೇವೆಯನ್ನು ಗ್ರಾಮಕ್ಕೆ ನೀಡಲಾಗುತ್ತಿದೆ. ಮಡಿಕೇರಿ ಘಟಕದಲ್ಲಿ ಚಾಲಕ, ನಿರ್ವಾಹಕ ಸೇರಿದಂತೆ ಸಿಬ್ಬಂದಿ ಕೊರತೆ ಮುಗಿದ ನಂತರ ಮತ್ತೊಂದು ಬಸ್ ಸಂಚಾರ ಆರಂಭಿಸುವುದಾಗಿ ಗ್ರಾಮಸ್ಥರ ಮನವೊಲಿಸಿದರು. ಬಳಿಕ ಪ್ರತಿಭಟನೆ ಅಂತ್ಯಗೊಳಿಸಲಾಯಿತು.

ಪ್ರತಿಭಟನೆಯಲ್ಲಿ ತಾಕೇರಿ ಪೊನ್ನಪ್ಪ, ಮುದ್ದಂಡ ತಿಮ್ಮಯ್ಯ, ನಾಪಂಡ ಲೋಹಿತ್, ನಾಪಂಡ ರಘು, ಚಾಮೇರ ಸಂತೋಷ್ ಚಂಗಪ್ಪ ಮತ್ತಿತರರು ಭಾಗವಹಿಸಿದ್ದರು.

ಬೈಕ್‌ಗೆ ಟ್ರ್ಯಾಕ್ಟರ್ ಡಿಕ್ಕಿ: ಆಹಾರ ಇಲಾಖೆ ನಿರೀಕ್ಷಕ ಸಾವು

- ಶಿರಸ್ತೇದಾರ್‌ಗೆ ಗಂಭೀರ ಗಾಯ
- ಬಸವಾಪುರ ಗೇಟ್ ಬಳಿ ಘಟನೆ

ಗುಂಡ್ಲುಪೇಟೆ, ಜೂ.28–ಬೈಕ್‌ಗೆ ಟ್ರ್ಯಾಕ್ಟರ್ ಡಿಕ್ಕಿ ಹೊಡೆದ ಪರಿಣಾಮ ಆಹಾರ ಇಲಾಖೆ ನಿರೀಕ್ಷಕ ಸ್ಥಳದಲ್ಲೇ ಮೃತಪಟ್ಟಿದ್ದು, ಶಿರಸ್ತೇದಾರ್ ಗಂಭೀರವಾಗಿ ಗಾಯಗೊಂಡಿರುವ ಘಟನೆ ಪಟ್ಟಣ ಸಮೀಪದ ಬಸವಾಪುರ ಗೇಟ್ ಬಳಿ ಶುಕ್ರವಾರ ನಡೆದಿದೆ.



ನಾಗೇಂದ್ರಪ್ಪ

ತಾಲೂಕಿನ ಆಹಾರ ಇಲಾಖೆ ನಿರೀಕ್ಷಕ ನಾಗೇಂದ್ರಪ್ಪ(45) ಮೃತಪಟ್ಟಿದ್ದು, ಗಾಯಗೊಂಡ ಶಿರಸ್ತೇದಾರ್ ರಮೇಶ್(52) ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ತಾಲೂಕಿನ ಹಂಗಳ ಗ್ರಾಮದಲ್ಲಿ ಶುಕ್ರವಾರ ಜಿಲ್ಲಾಡಳಿತ ಆಯೋಜಿಸಿದ್ದ ಜನಸಂಪರ್ಕ ಸಭೆ ಮುಗಿಸಿಕೊಂಡು ಈ ಇಬ್ಬರು ಅಧಿಕಾರಿಗಳು ಬೈಕ್‌ನಲ್ಲಿ ಕಚೇರಿಗೆ ಹೋಗುತ್ತಿದ್ದರು. ಈ ವೇಳೆ ಬಸವಾಪುರ ಗೇಟ್‌ನಿಂದ ಇಟ್ಟಿಗೆ ತುಂಬಿಕೊಂಡು ಹಂಗಳ ಗ್ರಾಮದ ಕಡೆಗೆ ಹೋಗುತ್ತಿದ್ದ ಟ್ರ್ಯಾಕ್ಟರ್ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ನಾಗೇಂದ್ರಪ್ಪ ಸ್ಥಳದಲ್ಲೇ ಮೃತಪಟ್ಟಿದ್ದು, ತೀವ್ರವಾಗಿ ಗಾಯಗೊಂಡಿರುವ ರಮೇಶ್ ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಜನಸಂಪರ್ಕ ಸಭೆ ಮುಗಿಸಿಕೊಂಡು ಹೋಗುತ್ತಿದ್ದ ಜಿಲ್ಲಾಧಿಕಾರಿ ಶಿಲ್ಪನಾಗ್, ಜಿಪಂ ಸಿಇಓ ಅಧಿಕಾರಿ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಕೊಳ್ಳೇಗಾಲ ಉಪವಿಭಾಗಾಧಿಕಾರಿ ಮಹೇಶ್, ತಹಸೀಲ್ದಾರ್ ರಮೇಶ್ ಬಾಬು, ತಾಪಂ ಇಓ ರಾಮಲಿಂಗಯ್ಯ ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿ, ಪರಿಶೀಲಿಸಿದರು.

ಈ ಸಂಬಂಧ ಪಟ್ಟಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಟ್ರ್ಯಾಕ್ಟರ್ ಹಾಗೂ ಚಾಲಕನನ್ನು ವಶಕ್ಕೆ ಪಡೆದಿದ್ದಾರೆ.

ಸ್ಫೂರ್ತಿ ಟ್ರಸ್ಟ್‌ನ ಮೂವರು ಸದಸ್ಯರ ವಜಾ

ಚಾಮರಾಜನಗರ, ಜೂ.28–ತಾಲೂಕಿನ ಅಂಕನಶೆಟ್ಟಿಪುರ ಸ್ಫೂರ್ತಿ ಟ್ರಸ್ಟ್‌ನ ಮೂವರು ಸದಸ್ಯರನ್ನು ವಜಾಗೊಳಿಸಲಾಗಿದೆ ಎಂದು ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಎ.ಎಸ್.ಮಹದೇವಸ್ವಾಮಿ ತಿಳಿಸಿದ್ದಾರೆ.

ಟ್ರಸ್ಟಿಗಳಾದ ಶಿವಸ್ವಾಮಿ, ಬಿ.ಪಿ.ಪ್ರಕಾಶ್ ಹಾಗೂ ಸಿ.ನಟರಾಜನ್ ಅವರನ್ನು ವಜಾಗೊಳಿಸಲಾಗಿದೆ. ಅಂಕನಶೆಟ್ಟಿಪುರ ಸ್ಫೂರ್ತಿ ಟ್ರಸ್ಟ್‌ನಡಿ ಪ್ರೇರಣಾ ವಿದ್ಯಾಸಂಸ್ಥೆಗೆ 2024–25ನೇ ಸಾಲಿನಲ್ಲಿ ಪ್ರವೇಶ ಪಡೆಯಬಾರದು ಎಂದು ಶಿಕ್ಷಣ ಇಲಾಖೆ ನೋಟಿಸ್ ಜಾರಿ ಮಾಡಿದ್ದು, ಈ ಹಿನ್ನೆಲೆಯಲ್ಲಿ ಈ ಮೂವರು ಟ್ರಸ್ಟ್‌ಗೆ ಅಗೌರವ ಉಂಟು ಮಾಡಲಾಗಿದೆ. ಆದ್ದರಿಂದ ಟ್ರಸ್ಟ್‌ನ ಸದಸ್ಯತ್ವದಿಂದ ವಜಾಗೊಳಿಸಲಾಗಿದೆ.

ಸ್ಫೂರ್ತಿ ಟ್ರಸ್ಟ್‌ನಡಿ ನಡೆಯುತ್ತಿರುವ ಪ್ರೇರಣಾ ವಿದ್ಯಾಸಂಸ್ಥೆಯ ಮಾನ್ಯತೆ ನವೀಕರಣ ಹಾಗೂ ಶಾಲೆ ಸ್ಥಳಾಂತರ ಬಗ್ಗೆ ಈ ಮೂವರು ಟ್ರಸ್ಟ್‌ನ ಸಂಸ್ಥಾಪಕನಾದ ನನ್ನ ಗಮನಕ್ಕೆ ತಂದಿಲ್ಲ. ಏಕಪಕ್ಷೀಯವಾಗಿ ಈ ಮೂವರು ನಡೆದುಕೊಂಡಿದ್ದಾರೆ. ಅಲ್ಲದೇ 2023ರ ಡಿ.15ರಂದು ಶಾಲೆಗೆ ಶಿಕ್ಷಣ ಸಂಯೋಜಕರು ಭೇಟಿ ನೀಡಿ, ಟ್ರಸ್ಟ್‌ನ ಸದಸ್ಯರ ಸಭೆ ಕರೆದು ತೀರ್ಮಾನ ತಿಳಿಸುವಂತೆ ಹೇಳಿದ್ದರೂ ಸಭೆ ಕರೆಯದೆ ಇಲಾಖೆ ನಿಯಮವನ್ನು ಉಲ್ಲಂಘಿಸಿದ್ದಾರೆ. ಇದರಿಂದ ವಿದ್ಯಾರ್ಥಿಗಳ ಭವಿಷ್ಯ ಹಾಗೂ ಟ್ರಸ್ಟ್‌ನ ಗೌರವಕ್ಕೆ ಧಕ್ಕೆಯಾಗಿದೆ. ಈ ಹಿನ್ನೆಲೆಯಲ್ಲಿ ಈ ಮೂವರನ್ನು ವಜಾಗೊಳಿಸಲಾಗಿದೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಜು.25ರಿಂದ ಕುಡಿತ ಬಿಡಿಸುವ ಶಿಬಿರ



ಶಿಬಿರದ ಪೂರ್ವಭಾವಿ ಸಭೆಯಲ್ಲಿ ದುಗ್ಗಹಟ್ಟಿ ರಾಜೇಶ್ ಮಾತನಾಡಿದರು.

ಯಳಂದೂರು: ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಕುಡಿತ ಬಿಡಿಸುವ 18ನೇ ಉಚಿತ ಶಿಬಿರವನ್ನು ಜು.25 ರಿಂದ ಆ.3ರವರೆಗೆ ನಡೆಸಲಾಗುವುದು ಎಂದು ಶಿಬಿರದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ದುಗ್ಗಹಟ್ಟಿ ರಾಜೇಶ್ ಮಾಹಿತಿ ನೀಡಿದರು.

ಪಟ್ಟಣದ ಜೆಎಸ್‌ಎಸ್ ಕಾಲೇಜಿನಲ್ಲಿ ನಡೆದ ಶಿಬಿರದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ವಿವಿಧ ಭಾಗಗಳಲ್ಲಿ 17 ಶಿಬಿರಗಳನ್ನು ನಡೆಸಲಾಗಿದೆ. 18ನೇ ಶಿಬಿರವನ್ನು ಯಳಂದೂರಿನಲ್ಲಿ ನಡೆಸಲಾಗುವುದು.

ತಾಲೂಕಿನ ಪ್ರತಿ ಗ್ರಾಮದಲ್ಲಿ ಪ್ರಚಾರ ನಡೆಸಿ ಶಿಬಿರಾರ್ಥಿಗಳನ್ನು ಗುರುತಿಸಲು ಸಾರ್ವಜನಿಕರು ಸಹಕಾರ ನೀಡಬೇಕು. ಈ ಮೂಲಕ ಶಿಬಿರ ಯಶಸ್ವಿಯಾಗಿ ಜರುಗುವಂತೆ ಸಹಕರಿಸಬೇಕೆಂದು ಮನವಿ ಮಾಡಿದರು.

ಕಸಾಪ ಮಾಜಿ ಅಧ್ಯಕ್ಷ ಮದ್ದೂರು ವಿರೂಪಾಕ್ಷ ಮಾತನಾಡಿದರು. ವೈ.ಎನ್.ಪ್ರಕಾಶ್, ರೋಟರಿ ಅಧ್ಯಕ್ಷರಾದ ಸಾಗರ್, ಗೌಡಹಳ್ಳಿ ಬಸವಣ್ಣ ಡಿ.ಪಿ.ಪ್ರಭುಶಂಕರ್, ಮೆಳ್ಳಹಳ್ಳಿ ಮಲ್ಲು, ಪಪಂ ಸದಸ್ಯ ಬಿ.ರವಿ, ಮದ್ದೂರು ಚಕ್ರವರ್ತಿ, ವೈ.ಎನ್.ನಾಗಣ್ಣ, ಕಟ್ಟವಾಡಿ ಸಿದ್ದರಾಜು, ಎಂ.ಪಿ.ಪುಟ್ಟಣ್ಣ ಇತರರು ಸಭೆಯಲ್ಲಿ ಹಾಜರಿದ್ದರು.

ಜಿಲ್ಲಾಡಳಿತ ಭವನ ಮುತ್ತಿಗೆಗೆ ಬಿಜೆಪಿ ಯತ್ನ

- 100ಕ್ಕೂ ಹೆಚ್ಚು ಕಾರ್ಯಕರ್ತರ ಬಂಧನ, ಬಿಡುಗಡೆ
- ಸರ್ಕಾರದ ವಿರುದ್ಧ ಪ್ರತಿಭಟನೆ

ಚಾಮರಾಜನಗರ, ಜೂ.28–ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ 187 ಕೋಟಿ ರೂ. ಅವ್ಯವಹಾರ ನಡೆದಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಜಿಲ್ಲಾ ಬಿಜೆಪಿ ಕಾರ್ಯಕರ್ತರು, ಜಿಲ್ಲಾಡಳಿತ ಭವನ ಮುತ್ತಿಗೆಗೆ ಯತ್ನಿಸಿದರು. ಈ ವೇಳೆ 100ಕ್ಕೂ ಹೆಚ್ಚು ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ ಬಳಿಕ ಬಿಡುಗಡೆಗೊಳಿಸಿದರು.

ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಶುಕ್ರವಾರ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ ಕುಮಾರ್, ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಎಸ್‌ಟಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಜಯಸುಂದರ್, ಮಾಜಿ ಶಾಸಕ ಎಸ್.ಬಾಲರಾಜು ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆ ಮಾರ್ಗವಾಗಿ ಜಿಲ್ಲಾಡಳಿತದ ಭವನದ ಮುಖ್ಯದ್ವಾರದ ವರೆಗೆ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರು, ರಾಜ್ಯ ಸರ್ಕಾರ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಶಿವಕುಮಾರ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಗೇಟ್‌ಗೆ ಬೀಗ: ಪ್ರತಿಭಟನಾಕಾರರು, ಜಿಲ್ಲಾಡಳಿತ ಭವನಕ್ಕೆ ಮುತ್ತಿಗೆ ಹಾಕುವ ವಿಚಾರ ತಿಳಿದ ಪೊಲೀಸರು, ಜಿಲ್ಲಾಡಳಿತ ಭವನ ಮುಖ್ಯದ್ವಾರದ ಗೇಟ್‌ಗಳಿಗೆ ಬೀಗ ಹಾಕಿದರು. ಇದರಿಂದ ಆಕ್ರೋಶಗೊಂಡ ಪ್ರತಿಭಟನಾಕಾರರು, ರಸ್ತೆಯಲ್ಲೇ ಅರ್ಧ ಗಂಟೆಗೂ ಹೆಚ್ಚು ಕಾಲ ಪ್ರತಿಭಟನೆ ನಡೆಸಿದರು. ನಂತರ ಭವನಕ್ಕೆ ನುಗ್ಗಲು ಮುಂದಾದ ನೂರಾರು ಕಾರ್ಯಕರ್ತರನ್ನು ಬಂಧಿಸಿ, ನಂತರ ಬಿಡುಗಡೆಗೊಳಿಸಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಜಿಲ್ಲಾ ಬಿಜೆಪಿ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್‌ಕುಮಾರ್ ಮಾತನಾಡಿ, ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದಿಂದ ಕೂಡಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ಸಚಿವ ನಾಗೇಂದ್ರ ರಾಜೀನಾಮೆ ನೀಡಿದರೆ ಸಾಲದು, ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಓಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ಜನಧ್ವನಿ ವೆಂಕಟೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಬೇಂದ್ರಪ್ಪ, ಮುಡ್ನಾಕೂಡು ಪ್ರಕಾಶ್, ಹೊನ್ನೂರು ಮಹದೇವಸ್ವಾಮಿ, ಚಾಮುಲ್ ಅಧ್ಯಕ್ಷ ನಾಗೇಂದ್ರ ನಿಶಾಂತ್ ಹನೂರು, ಜಿಲ್ಲಾ ಉಪಾಧ್ಯಕ್ಷ ಶಿವು ವಿರಾಟ್, ಬಿಜೆಪಿ ಉಪಾಧ್ಯಕ್ಷರಾದ ಮಂಗಲ ಶಿವಕುಮಾರ್, ನಾಗಶ್ರೀ ಪ್ರತಾಪ್, ಅರಕಲವಾಡಿ ನಾಗೇಂದ್ರ, ಹನುಮಂತಶೆಟ್ಟಿ, ನಗರಸಭೆ ಮಾಜಿ ಅಧ್ಯಕ್ಷ ಸುರೇಶ್‌ನಾಯಕ, ಎಸ್ಟಿ ಮೋರ್ಚಾ ಜಿಲ್ಲಾಧ್ಯಕ್ಷ ಚಂದ್ರಶೇಖರ್, ಉಪಾಧ್ಯಕ್ಷ ಬುಲೆಟ್ ಚಂದ್ರು, ನಗರ ಮಂಡಲದ ಅಧ್ಯಕ್ಷ ಶಿವರಾಜು, ಎಸ್ಟಿ ಮೋರ್ಚಾ ಟೌನ್ ಅಧ್ಯಕ್ಷ ಬಸವರಾಜು, ಚಂದ್ರು, ಬಂಗಾರನಾಯಕ, ಬಸವರಾಜು, ಎಪಿಎಂಸಿ ಮಾಜಿ ಅಧ್ಯಕ್ಷ ಮನೋಜ್‌ಕುಮಾರ್, ಎಸ್ಸಿ ಮೋರ್ಚಾ ಅಧ್ಯಕ್ಷ ಮೂಡಹಳ್ಳಿ ಮೂರ್ತಿ ಇತರರು ಭಾಗವಹಿಸಿದ್ದರು.

ಮಹಿಳೆಯರ ಸ್ವಾಭಿಮಾನ ಬದುಕಿಗೆ ಶಿಕ್ಷಣ ಅಗತ್ಯ

ಚಾಮರಾಜನಗರ: ಮಹಿಳೆಯರು ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಶಿಕ್ಷಣ ಅತ್ಯವಶ್ಯಕವಾಗಿದ್ದು, 12ನೇ ಶತಮಾನದಲ್ಲೇ ಬಸವಣ್ಣನವರು ಮಹಿಳೆಯರಿಗೆ ಸಮಾನತೆ ನೀಡಿದ್ದರು ಎಂದು ಮೈಸೂರಿನ ಮರಿಮಲ್ಲಪ್ಪ ಪದವಿಪೂರ್ವ ಕಾಲೇಜಿನ ಶೈಕ್ಷಣಿಕಾಧಿಕಾರಿ ಹಾಗೂ ಸಾಹಿತಿ ಮಂಗಳಾ ಮುದ್ದುಮಾದಪ್ಪ ತಿಳಿಸಿದರು.

ನಗರದ ಕರಿನಂಜನಪುರದ ಗುಬ್ಬಿ ತೋಟದಪ್ಪ ಉಚಿತ ಮಹಿಳಾ ವಿದ್ಯಾರ್ಥಿನಿಯದಲ್ಲಿ ಮೈಸೂರಿನ ಚಾಮರಾಜೇಶ್ವರಿ ಅಕ್ಕನ ಬಳಗದಿಂದ ನಡೆದ ಸಮಾಜ ಸೇವಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹೆಣ್ಣೊಂದು ಕಲಿತರೆ ಶಾಲೆವೊಂದು ತೆರೆದಂತೆ ಎಂಬ ನಾಣ್ನುಡಿಯಂತೆ ಪ್ರತಿ ಮನೆಯಲ್ಲೂ ಹೆಣ್ಣು ಮಕ್ಕಳು ಶಿಕ್ಷಣ ಪಡೆಯಬೇಕು. ತಂದೆ–ತಾಯಿ ಹಾಗೂ ಹಿರಿಯರನ್ನು ಗೌರವಿಸುವ ಪರಿಪಾಠ ಬೆಳೆಸಿಕೊಳ್ಳಬೇಕು. ವಿದ್ಯಾಭ್ಯಾಸದ ಜೊತೆಗೆ ಸಮಯ ಪರಿಪಾಲನೆ, ಶಿಸ್ತು ಹಾಗೂ ಕುಟುಂಬದ ಗೌರವವನ್ನು ಕಾಪಾಡುವ ಜವಾಬ್ದಾರಿ ಮಹಿಳೆಯರದ್ದಾಗಿದೆ ಎಂದರು.

ಬಹಳ ಕಷ್ಟಪಟ್ಟು ತಂದೆ–ತಾಯಿ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುತ್ತಾರೆ. ಅವರ ಆಶಯ ಮತ್ತು ಆಸೆಯನ್ನು ಈಡೇರಿಸುವ ದಿಕ್ಕಿನಲ್ಲಿ ಬದುಕು ರೂಪಿಸಿಕೊಳ್ಳಬೇಕು. ಸ್ವಾಭಿಮಾನದ ಬದುಕು ಕಟ್ಟಿಕೊಂಡು ಬಸವ ಮಾರ್ಗದಲ್ಲಿ ನಡೆಯೋಣ. ನಮ್ಮ ಧರ್ಮ ಮತ್ತು ವಚನವನ್ನು ತಿಳಿದುಕೊಂಡು ಅದರಂತೆ ನಡೆಯುವ ಮೂಲಕ ಪರಿಪೂರ್ಣ ಜೀವನ ನಮ್ಮದಾಗಬೇಕು ಎಂದು ತಿಳಿಸಿದರು.

ಗುಬ್ಬಿ ತೋಟದಪ್ಪ ವಿದ್ಯಾರ್ಥಿನಿಲಯದ ಅಧ್ಯಕ್ಷ ಕಾಳನಹುಂಡಿ ಗುರುಸ್ವಾಮಿ ಮಾತನಾಡಿ, ಜೀವನದಲ್ಲಿ ಬಸವ ತತ್ವ ಅಳವಡಿಸಿಕೊಂಡು ವಚನಗಳನ್ನು ಅರ್ಥ ಮಾಡಿಕೊಂಡರೆ ಬದುಕು ಸುಂದರವಾಗಿರುತ್ತದೆ ಎಂದರು. ಇದೇ ವೇಳೆ ಚಾಮರಾಜೇಶ್ವರಿ ಅಕ್ಕನ ಬಳಗದ ಪದಾಧಿಕಾರಿಗಳು ಹಾಸ್ಟೆಲ್‌ಗೆ ಕುಕ್ಕರ್ ಕೊಡುಗೆ ನೀಡಿ, ವಾರ್ಡನ್, ಅಡುಗೆಯವರು ಹಾಗೂ ನಿಯಲದ ಅಧ್ಯಕ್ಷರನ್ನು ಸನ್ಮಾನಿಸಿದರು. ಬಳಗದ ಅಧ್ಯಕ್ಷೆ ಮಾದಲಾಂಬಿಕೆ ನಂಜುಂಡಸ್ವಾಮಿ, ಹಾಸ್ಟೆಲ್ ಪದಾಧಿಕಾರಿಗಳಾದ ಎ.ಎಂ.ಗುರುಸ್ವಾಮಿ, ಪರಮಶಿವಯ್ಯ, ಪ್ರಭುಸ್ವಾಮಿ, ಆರ್.ಪುಟ್ಟಮಲ್ಲಪ್ಪ, ಗೌಡಿಕೆ ನಾಗೇಶ್, ಅಕ್ಕನ ಬಳಗದ ಕಾರ್ಯದರ್ಶಿ ಪ್ರತಿಮಾ ಮಂಜುನಾಥ್, ಇಂದಿರಾ ಪರಮಶಿವಯ್ಯ, ವಿಜಯಾ ಚಿನ್ನಸ್ವಾಮಿ, ಸುನೀತಾ ಗುರು ಉಪಸ್ಥಿತರಿದ್ದರು.



ಕರಿನಂಜನಪುರದ ಗುಬ್ಬಿ ತೋಟದಪ್ಪ ಮಹಿಳಾ ವಿದ್ಯಾರ್ಥಿನಿಲಯಕ್ಕೆ ಚಾಮರಾಜೇಶ್ವರಿ ಅಕ್ಕನ ಬಳಗದಿಂದ ಕುಕ್ಕರ್ ಕೊಡುಗೆ ನೀಡಲಾಯಿತು.

ಕೋಡಿಮೋಳೆ ಕೆರೆ ತುಂಬಿಸಲು ಕ್ರಮ ವಹಿಸಿ

ಸಭೆಯಲ್ಲಿ ಅಧಿಕಾರಿಗಳಿಗೆ ಕಾಡಾ ಅಧ್ಯಕ್ಷ ಮರಿಸ್ವಾಮಿ ಸೂಚನೆ



ಕಾಡಾ ಕಚೇರಿಯಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿದರು.

ಚಾಮರಾಜನಗರ, ಜೂ. 28–ತಾಲೂಕಿನ ಕೋಡಿಮೋಳೆ ಕೆರೆಯನ್ನು ತುಂಬಿಸಿ, ಅಲ್ಲಿಂದ ಪಂಪ್ ಮೂಲಕ ಇತರೆ ಕೆರೆಗಳಿಗೆ ನೀರು ಹರಿಸುವ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಗೆ ಕಾವೇರಿ ಜಲಾನಯನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಕಾಡಾ) ಅಧ್ಯಕ್ಷ ಪಿ.ಮರಿಸ್ವಾಮಿ ಸೂಚಿಸಿದರು.

ಕಾಡಾ ಕಚೇರಿಯಲ್ಲಿ ನಡೆದ ಪ್ರಾಧಿಕಾರ ಸಭೆಯಲ್ಲಿ ಮಾತನಾಡಿದ ಅವರು, ನದಿ ಮೂಲದಿಂದ ಕೆರೆಗಳನ್ನು ತುಂಬಿಸುವ ಎರಡನೇ ಹಂತದ ಕಾಮಗಾರಿ ಆರಂಭಗೊಂಡು ಬಹಳ ದಿನವಾಗಿವೆ. ನೀರಿನ ಸಮಸ್ಯೆಯಿಂದಾಗಿ ಕೋಡಿಮೋಳೆ ಕೆರೆಯಿಂದ ಇತರೆ ಕೆರೆಗಳಿಗೆ ನೀರು ಹರಿಸಲು ಸಾಧ್ಯವಾಗುತ್ತಿಲ್ಲ. ಈ ಸಮಸ್ಯೆಯನ್ನು ಶೀಘ್ರ ಪರಿಹರಿಸಿ ಕೆರೆಗಳಿಗೆ ನೀರು ತುಂಬಿಸಲು ಕ್ರಮ ವಹಿಸಬೇಕು ಎಂದರು.

ಕಾಡಾ ವ್ಯಾಪ್ತಿಯ ರೈತರು ಬೆಳೆಗಳನ್ನು ಸಾಗಿಸಲು ಉತ್ತಮವಾದ ರಸ್ತೆಗಳನ್ನು ನಿರ್ಮಿಸಲು ಕ್ರಿಯಾ ಯೋಜನೆ ಸಿದ್ಧಪಡಿಸಬೇಕು. ಮುಖ್ಯಮಂತ್ರಿಗಳು ಹಾಗೂ ನೀರಾವರಿ ಸಚಿವರ ಗಮನ ಸೆಳೆದು ಅನುದಾನ ಬಿಡುಗಡೆ ಮಾಡಿಸಿ, ಗುಣಮಟ್ಟದ ರಸ್ತೆಗಳನ್ನು ನಿರ್ಮಿಸಲು ಕ್ರಮ ವಹಿಸಬೇಕು ಎಂದು ಆದೇಶಿಸಿದರು.

ಜೊತೆಗೆ ಚಾಮರಾಜನಗರ ತಾಲೂಕಿನ ಉಮ್ಮತ್ತೂರು ಕೆರೆಗೆ ನೀರು ತುಂಬಿಸಲು ಮುಂದಾಗಬೇಕು. ಕಾಡಾ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ರಚನೆಯಾಗಿರುವ ಸಹಕಾರ ಸಂಘಗಳು ಉತ್ತಮ ರೀತಿ ಕಾರ್ಯನಿರ್ವಹಿಸಲು ಸಲಹೆ ನೀಡಿದರು.

ಸಭೆಯಲ್ಲಿ ಕಾಡಾ ಆಡಳಿತಾಧಿಕಾರಿ ಹೆಚ್.ಕೆ.ದಿವಾಕರ ನಾಯಕ್, ಉಪ ಆಡಳಿತಾಧಿಕಾರಿ ಬಿ.ಆರ್.ರೂಪ, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಭೂ ಅಭಿವೃದ್ಧಿ ಅಧಿಕಾರಿಗಳಾದ ಚಂದ್ರಕಲಾ, ಶಿವಪ್ರಕಾಶ್, ರವಿಚಂದ್ರನ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರಲ್ಲಿ ಸೆಮಿ ಕಂಡಕ್ಟರ್ ಪಾರ್ಕ್ ಯುಗಾರಂಭ...!



ಸಂಗ್ರಹ ಚಿತ್ರ

ಕೇನ್ಸ್ 20 ಎಕರೆ, ವರ್ಥ್ ಟೆಕ್ನಾಲಜಿಗೆ 10 ಎಕರೆ ಭೂಮಿ ಮಂಜೂರು

ಕೋಚನಹಳ್ಳಿಯಲ್ಲಿರುವ ಸೆಮಿ ಕಂಡಕ್ಟರ್ ಪಾರ್ಕ್; 800 ಕೋಟಿ ಬಂಡವಾಳ ಹೂಡಲು ಹೈದರಾಬಾದ್ ಉದ್ಯಮಿ ಆಸಕ್ತಿ; ಮೈಸೂರಿನಲ್ಲಿ ಭರಪೂರ ಉದ್ಯೋಗಾವಕಾಶ

ಬಾಪುಲಿಂಗರಾಜ್ ಅರಸ್

ಮೈಸೂರು, ಜೂ.28– ಮೈಸೂರಿನ ಕಡಕೊಳ ಸಮೀಪದ ಕೋಚನಹಳ್ಳಿ ಕೈಗಾರಿಕಾ ಪ್ರದೇಶದ 140 ಎಕರೆ ಪ್ರದೇಶದಲ್ಲಿ ಸೆಮಿ ಕಂಡಕ್ಟರ್ ಪಾರ್ಕ್‌ನಲ್ಲಿ ಎಲೆಕ್ಟ್ರಾನಿಕ್ ಕಂಪನಿಗಳ ಸ್ಥಾಪನೆಗೆ ಅವಕಾಶ ಕಲ್ಪಿಸಲಾಗಿದೆ. ಇದರಲ್ಲಿ ಮೈಸೂರು ಮೂಲದ ಕೇನ್ಸ್ ಟೆಕ್ನಾಲಜಿ, ವರ್ಥ್ ಎಲೆಕ್ಟ್ರಾನಿಕ್‌ಗೆ ಈಗಾಗಲೇ ಅಗತ್ಯ ಭೂಮಿ ಮಂಜೂರಾಗಿದ್ದು, ಈ ಮೂಲಕ ಕೊನೆಗೂ ಮೈಸೂರಿನ ಸೆಮಿ ಕಂಡಕ್ಟರ್ ಪಾರ್ಕ್‌ಗೆ ಹಿಡಿದ ಗ್ರಹಣ ಬಿಟ್ಟಿದೆ.

ಮೈಸೂರಿನ ಕಡಕೊಳ ಹಾಗೂ ತಾಂಡ್ಯ ಎರಡನೇ ಹಂತದಲ್ಲಿ ಅಭಿವೃದ್ಧಿಯಾಗಿರುವ ಕೋಚನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಸೆಮಿ ಕಂಡಕ್ಟರ್ ಪಾರ್ಕ್ (ಎಲೆಕ್ಟ್ರಾನಿಕ್ ತಯಾರಿಕಾ ಕ್ಲಸ್ಟರ್– ಇಎಂಸಿ) ನಿರ್ಮಾಣ ಮಾಡಲು 234 ಎಕರೆ ಭೂಮಿ ಸ್ವಾಧೀನ ಮಾಡಿಕೊಳ್ಳಲಾಗಿತ್ತು.

ಕೆಐಎಡಿಬಿ ಭೂಸ್ವಾಧೀನ ಮಾಡಿಕೊಂಡ 234 ಎಕರೆಯಲ್ಲಿ ಸಿಎ ನಿವೇಶನ, ಪಾರ್ಕ್, ರಸ್ತೆ, ಎಸ್ ಟಿಪಿ ಕಳೆದು 140 ಎಕರೆಯಲ್ಲಿ ಸೆಮಿ ಕಂಡಕ್ಟರ್ ಪಾರ್ಕ್ ನಿರ್ಮಿಸಲಾಗಿದೆ. ಈಗಾಗಲೇ ಸೆಮಿ ಕಂಡಕ್ಟರ್ ಪಾರ್ಕ್‌ನಲ್ಲಿ ರಸ್ತೆ, ಚರಂಡಿ ಸೇರಿದಂತೆ ಇತರೆ ಮೂಲಭೂತ ಸೌಕರ್ಯ ಕಲ್ಪಿಸಿದ್ದು, ಕೆಲವು ಕಾಮಗಾರಿ ಅಷ್ಟೇ ಬಾಕಿ ಇದೆ.

ಇಸ್ರೇಲ್ ಮೂಲದ ಐಎಸ್‌ಎಂಸಿ ಅನಲಾಗ್ ಫ್ಯಾಬ್ ಪ್ರೈವೇಟ್ ಲಿಮಿಟೆಡ್ ಮೈಸೂರಿನಲ್ಲಿ ಸೆಮಿ ಕಂಡಕ್ಟರ್ ಚಿಪ್ ತಯಾರಿಕಾ ಘಟಕ ಸ್ಥಾಪನೆ ಮಾಡಲು ನಿರ್ಧರಿಸಿತ್ತು. ಇದರಿಂದ ಮೈಸೂರಿನಲ್ಲಿ 10 ಸಾವಿರ ಉದ್ಯೋಗ ಸೃಷ್ಟಿಯಾಗುತ್ತಿತ್ತು. ಆದರೆ ಇಸ್ರೇಲ್ ಮೂಲದ ಐಎಸ್‌ಎಂಸಿ ಅನಲಾಗ್ ಫ್ಯಾಬ್ ಪ್ರೈವೇಟ್ ಲಿಮಿಟೆಡ್ ಅನ್ನು ಅಮೇರಿಕಾ ಮೂಲದ ಕಂಪನಿ ಖರೀದಿ ಮಾಡಿತು. ಕೊನೆಗೆ ಈ ಕಾರಣದಿಂದ ಮೈಸೂರಿನ ಈ ಯೋಜನೆಯನ್ನೇ ರದ್ದುಗೊಳಿಸಿತ್ತು. ಹಾಗಾಗಿ ಮೈಸೂರಿನಲ್ಲಿ ಸೆಮಿ ಕಂಡಕ್ಟರ್ ಪಾರ್ಕ್‌ಗೆ ಮೀಸಲಿಟ್ಟ 234 ಎಕರೆ ಪ್ರದೇಶ ಪಾಳು ಬಿತ್ತು. ಸೆಮಿ ಕಂಡಕ್ಟರ್ ಪಾರ್ಕ್‌ಗೆ ಮೀಸಲಿಟ್ಟ ಭೂಮಿಯನ್ನು ಅದೇ ಉಪಯೋಗಕ್ಕೆ ಬಳಸಬೇಕೆಂದು ಸರ್ಕಾರ ಕಟ್ಟುನಿಟ್ಟಿನ ಆದೇಶ ನೀಡಿತು. ಆದರೆ ಯಾವ ಸೆಮಿ ಕಂಡಕ್ಟರ್ ಕಂಪನಿಯೂ ಇಲ್ಲಿ ಬಂಡವಾಳ ಹೂಡಲು ಆಸಕ್ತಿ ತೋರದ ಹಿನ್ನೆಲೆಯಲ್ಲಿ ಹಲವು ವರ್ಷಗಳಿಂದ ಮೈಸೂರಿನ ಸೆಮಿ ಕಂಡಕ್ಟರ್ ಪಾರ್ಕ್ ಯೋಜನೆಗೆ ಗ್ರಹಣ ಹಿಡಿದಿತ್ತು. ಮೈಸೂರಿಗೆ ಯಾವ ಸೆಮಿ ಕಂಡಕ್ಟರ್ ಕಂಪನಿಯೂ ಬರುವುದಿಲ್ಲ. ಹಾಗಾಗಿ ಯಾವ ಉದ್ಯೋಗವೂ ಸೃಷ್ಟಿಯಾಗಲ್ಲ ಎಂಬ ಆತಂಕ ಮೈಸೂರಿನ ಜನರಲ್ಲಿತ್ತು. ಆದರೆ ಈಗ ಕೋಚನಹಳ್ಳಿ ಕೈಗಾರಿಕಾ ಪ್ರದೇಶದ ಸೆಮಿ ಕಂಡಕ್ಟರ್ ಪಾರ್ಕ್ ಯೋಜನೆಗೆ ಹಿಡಿದಿದ್ದ ಗ್ರಹಣ ದೂರವಾಗಿದೆ. ಉದ್ದೇಶಿತ ಸೆಮಿ ಕಂಡಕ್ಟರ್ ಕಂಪನಿಗಳು ಇಲ್ಲಿ ಬಂಡವಾಳ ಹೂಡಲು ಉತ್ಸುಕತೆ ತೋರಿವೆ. ರಾಜ್ಯ ಸರ್ಕಾರದ ಜೊತೆ ಒಪ್ಪಂದ ಏರ್ಪಟ್ಟು ಈಗ ಭೂಮಿ ಕೂಡ ಮಂಜೂರಾಗಿದೆ.

234 ಎಕರೆ ಭೂಮಿ ಸ್ವಾಧೀನ, 140 ಎಕರೆ ಮಂಜೂರಾತಿಗೆ ಸಿದ್ಧ

ಕೋಚನಹಳ್ಳಿ ಕೈಗಾರಿಕಾ ಪ್ರದೇಶದ ಎಲೆಕ್ಟ್ರಾನಿಕ್ ತಯಾರಿಕಾ ಕ್ಲಸ್ಟರ್‌ನಲ್ಲಿ ಅಭಿವೃದ್ಧಿ ಯಾಗಿರುವ 140 ಎಕರೆ ಪ್ರದೇಶವನ್ನು ಕಂಪನಿಗಳಿಗೆ ನೀಡಲು ಮಂಜೂರಾತಿ ಪ್ರಕ್ರಿಯೆಗಳು ಆರಂಭವಾಗಿದೆ. ಕೇನ್ಸ್ ಟೆಕ್ನಾಲಜಿಗೆ 20 ಎಕರೆ, ವರ್ಥ್ ಟೆಕ್ನಾಲಜಿಗೆ 10 ಎಕರೆ ಈಗಾಗಲೇ ಸರ್ಕಾರದಿಂದ ಮಂಜೂರಾಗಿದೆ.

ಕೇನ್ಸ್ ಟೆಕ್ನಾಲಜಿ ತೆಲಂಗಾಣದಲ್ಲಿ ಒಂದು ಘಟಕ ಸ್ಥಾಪನೆ ಮಾಡಿದ್ದರೂ, ಮೈಸೂಲ್ಲೂ ಒಂದು ಯೂನಿಟ್ ಸ್ಥಾಪಿಸಲು ಆಸಕ್ತಿ ತೋರಿದೆ. ಕೇನ್ಸ್ ಮತ್ತು ವರ್ಥ್ ಟೆಕ್ನಾಲಜಿ ರಾಜ್ಯ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿರುವ ಕಾರಣ ಭೂಮಿ ಮಂಜೂರಾಗಿದೆ. ಉಳಿದ ಕಂಪನಿಗಳು ಸ್ಥಳ ವೀಕ್ಷಣೆ ಮಾಡಿದ್ದು, ಎಲೆಕ್ಟ್ರಾನಿಕ್ ಉತ್ಪನ್ನ ತಯಾರಿಕಾ ಘಟಕ ಸ್ಥಾಪಿಸಲು ಆಸಕ್ತಿ ತೋರಿವೆ. ಯಾವ ಕಂಪನಿ ಮುಂದೆ ಬಂದರೂ ಭೂಮಿ ಮಂಜೂರು ಮಾಡಲಾಗುವುದು.

ಸೆಮಿ ಕಂಡಕ್ಟರ್ ಕಂಪನಿ ಸ್ಥಾಪಿಸಲು ಕೇಂದ್ರ ಸರ್ಕಾರದಿಂದ ಸಬ್ಸಿಡಿಯೂ ದೊರೆಯಲಿದೆ. ಒಂದು ಎಕರೆ ಭೂಮಿಗೆ ಮಾರುಕಟ್ಟೆ ದರ 1.16 ಕೋಟಿ. ಈಗಾಗಲೇ ಒಟ್ಟು 234 ಎಕರೆ ಪ್ರದೇಶದ ರಸ್ತೆ, ಒಳ ಚರಂಡಿ, ಎಸ್‌ಟಿಪಿ ಸೇರಿದಂತೆ ಹಲವು ಮೂಲಭೂತ ಸೌಕರ್ಯ ಕಲ್ಪಿಸುವ ಜಾಗ ಹೊರತುಪಡಿಸಿ ಸೆಮಿ ಕಂಡಕ್ಟರ್ ಕಂಪನಿ ನಿರ್ಮಾಣಕ್ಕೆ 140 ಎಕರೆ ಭೂಮಿ ಲಭ್ಯವಿದೆ.

–ಬಾಲಚಂದ್ರ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆಐಎಡಿಬಿ

ಸೆಮಿ ಕಂಡಕ್ಟರ್ ಘಟಕಗಳಿಗೆ ಶೇ.20ರಷ್ಟು ಸಬ್ಸಿಡಿ ನೀಡಲು ಸಿದ್ಧ

ಸೆಮಿ ಕಂಡಕ್ಟರ್ ಉದ್ಯಮ ಬೆಳವಣಿಗೆಗೆ ಗುಜರಾತ್ ನೀಡಿರುವಂತೆ ಶೇಕಡ 50 ರಷ್ಟು ಸಬ್ಸಿಡಿಯನ್ನು ಕೇಂದ್ರ ಸರ್ಕಾರ ನೀಡಿದರೆ ರಾಜ್ಯ ಸರ್ಕಾರ ಕೂಡ ತನ್ನ ಪಾಲಿನ ಶೇಕಡ 20 ರಷ್ಟು ಸಬ್ಸಿಡಿ ನೀಡಲು ಸಿದ್ಧವಿದೆ ಎಂದು ರಾಜ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಭರವಸೆ ನೀಡಿದ್ದಾರೆ.

ಗುಜರಾತ್‌ನಲ್ಲಿ ಸ್ಥಾಪನೆಯಾಗಿರುವ ಅಮೇರಿಕಾ ಮೂಲದ ಮೈಕ್ರಾನ್ ಕಂಪನಿಗೆ ಕೇಂದ್ರ ಸರ್ಕಾರ ಶೇಕಡ 50 ರಷ್ಟು ಸಬ್ಸಿಡಿ ನೀಡಿದ್ದು, ಗುಜರಾತ್ ಸರ್ಕಾರ ಶೇಕಡ 20 ರಷ್ಟು ಸಬ್ಸಿಡಿ ನೀಡಿದೆ. ಇದರಂತೆ ಕರ್ನಾಟಕ ಸರ್ಕಾರ ಕೂಡ ಸಬ್ಸಿಡಿ ನೀಡಲು ಸಿದ್ಧವಿದೆಯೇ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಹೇಳಿಕೆಗೆ ಎಂ.ಬಿ.ಪಾಟೀಲ್ ಸ್ಪಷ್ಟನೆ ನೀಡಿದ್ದಾರೆ.

ಮೈಸೂರಿನಲ್ಲಿ ಸೆಮಿ ಕಂಡಕ್ಟರ್ ಕಂಪನಿ ಸ್ಥಾಪನೆ ಮಾಡಲು ಕೇಂದ್ರ ಸರ್ಕಾರ ಶೇ.50ರಷ್ಟು ಸಬ್ಸಿಡಿ ಹಾಗೂ ರಾಜ್ಯ ಸರ್ಕಾರ ಶೇ.20ರಷ್ಟು ಸಬ್ಸಿಡಿ ನೀಡಿದರೆ ಕೋಚನಹಳ್ಳಿ ಕೈಗಾರಿಕಾ ಪ್ರದೇಶದ ಸೆಮಿ ಕಂಡಕ್ಟರ್ ಪಾರ್ಕ್ ಪೂರ್ತಿ ಉದ್ದಿಮೆಗಳು ನಿರ್ಮಾಣವಾಗಲಿದೆ. ಕೆಲವು ಎಲೆಕ್ಟ್ರಾನಿಕ್ ಉತ್ಪನ್ನಗಳನ್ನು ಚೈನಾ ಸೇರಿದಂತೆ ಹಲವು ದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಆದರೆ ಈಗ ಮೈಸೂರಿನಲ್ಲೇ ಸೆಮಿ ಕಂಡಕ್ಟರ್ ಕಂಪನಿ ನಿರ್ಮಾಣವಾದರೆ ಭಾರತದ ಮಾರುಕಟ್ಟೆಯಲ್ಲಿ ಎಲೆಕ್ಟ್ರಾನಿಕ್ ಉತ್ಪನ್ನಗಳ ಬೆಲೆ ಕಡಿಮೆಯಾಗಲಿದೆ.

ಜೊತೆಗೆ 140 ಎಕರೆ ಪ್ರದೇಶದಲ್ಲಿ ಸ್ಥಾಪನೆಯಾಗಲಿರುವ ಸೆಮಿ ಕಂಡಕ್ಟರ್ ಕಂಪನಿಗಳಲ್ಲಿ ಲಕ್ಷಾಂತರ ಜನರಿಗೆ ಉದ್ಯೋಗ ದೊರೆಯಲಿದೆ. ಇದರಲ್ಲಿ ಸ್ಥಳೀಯರು ಮಾತ್ರವಲ್ಲದೆ ದೇಶದ ಬೇರೆ ರಾಜ್ಯದ ಜನರು ಕೂಡ ಇಲ್ಲಿಗೆ ಉದ್ಯೋಗ ಅರಸಿ ಬರುತ್ತಾರೆ. ಮೈಸೂರಿನಲ್ಲಿ ಬಾಡಿಗೆ ಮನೆಗಳಿಗೆ ಇದರಿಂದ ಹೆಚ್ಚು ಬೇಡಿಕೆ ಬರುತ್ತದೆ. ಅಲ್ಲದೆ ವ್ಯಾಪಾರ ವಹಿವಾಟು ಕೂಡ ಹೆಚ್ಚಾಗುತ್ತದೆ.

ಮೈಸೂರಿನ ಕೈಗಾರಿಕಾ ಬೆಳವಣಿಗೆಗೆ ಮತ್ತಷ್ಟು ವೇಗ

ಕೋಚನಹಳ್ಳಿ ಕೈಗಾರಿಕಾ ಪ್ರದೇಶದ 234 ಎಕರೆ ಪ್ರದೇಶದಲ್ಲಿ 140 ಎಕರೆ ಮಂಜೂರಾತಿಗೆ ಸಿದ್ಧವಾಗಿದೆ. ಒಟ್ಟು ಪರಿಸರ ಪ್ರಭಾವದ ಮೌಲ್ಯ ಮಾಪನ (Total Environment Impact Assessment Report) ವರದಿ ಬಂದ ನಂತರ ಮಂಜೂರಾತಿ ಪ್ರಕ್ರಿಯೆ ಆರಂಭವಾಗಲಿದೆ. 140 ಎಕರೆ ಭೂಮಿ ಎಲೆಕ್ಟ್ರಾನಿಕ್, ಸೆಮಿ ಕಂಡಕ್ಟರ್, ಇಎಂಸಿ ಎಲೆಕ್ಟ್ರಾನಿಕ್ ಉತ್ಪಾದನಾ ಘಟಕಗಳಿಗೆ ಮಾತ್ರ ಮೀಸಲಾಗಿದೆ. ಸುಮಾರು 70 ಉದ್ಯಮಗಳಿಗೆ ಅರ್ಧ ಎಕರೆಯಿಂದ 10 ಎಕರೆ ತನಕ ವಿಶಾಲವಾದ ಕೈಗಾರಿಕಾ ನಿವೇಶನಗಳನ್ನು ಅಭಿವೃದ್ಧಿ ಮಾಡಲಾಗಿದೆ. ಇತ್ತೀಚೆಗೆ ಹೈದರಾಬಾದ್ ಮೂಲದ ಉದ್ಯಮಿ 800 ಕೋಟಿ ರೂ.ಹೂಡಿಕೆಗಾಗಿ 49 ಎಕರೆಗೆ ಬೇಡಿಕೆ ಸಲ್ಲಿಸಿದ್ದಾರೆ. ಇದು ಸ್ಥಾಪನೆಯಾದರೆ ಸುಮಾರು 4 ರಿಂದ 5 ಸಾವಿರ ಜನರಿಗೆ ಉದ್ಯೋಗ ದೊರೆಯಲಿದೆ. ಅಲ್ಲದೆ ಒಂದು ಸಾವಿರ ಯುವ ಜನತೆಗೆ ಅಪ್ರೆಂಟಿಷಿಪ್ ತರಬೇತಿ ಕೂಡ ದೊರೆಯಲಿದೆ. ಇದರಿಂದ ಮೈಸೂರಿನ ಕೈಗಾರಿಕಾ ಅಭಿವೃದ್ಧಿಗೆ ಮತ್ತಷ್ಟು ವೇಗ ದೊರೆಯಲಿದೆ. –ಸುರೇಶ್ ಕುಮಾರ್ ಜೈನ್, ಪ್ರಧಾನ ಕಾರ್ಯದರ್ಶಿ, ಮೈಸೂರು ಕೈಗಾರಿಕಾ ಸಂಘ



ವಿವಿ ಮಟ್ಟದ ಕಾಮರ್ಸ್ ಫೆಸ್ಟ್ ಮನಸ್ ವೃದ್ಧಿ ಸ್ಪರ್ಧೆಯಲ್ಲಿ ಎಂಎಂಕೆ ಅಂಡ್ ಎಸ್‌ಡಿಎಂ ಕಾಲೇಜು ಪ್ರಥಮ

ಮೈಸೂರು, ಜೂ.28(ಎಸ್‌ಪಿಎನ್)– ವಿಶ್ವವಿದ್ಯಾನಿಲಯದ ಮಟ್ಟದ ಕಾಮರ್ಸ್ ಫೆಸ್ಟ್ 'ಮನಸ್ ವೃದ್ಧಿ–2ಕೆ24'ನಲ್ಲಿ ಸ್ಪರ್ಧಿಸಿದ್ದ 17 ಕಾಲೇಜು ತಂಡಗಳ ಪೈಕಿ ಮೈಸೂರಿನ ಎಂಎಂಕೆ ಅಂಡ್ ಎಸ್‌ಡಿಎಂ ಮಹಿಳಾ ಕಾಲೇಜು ತಂಡ ಎಲ್ಲಾ ವಿಭಾಗದಲೂ ಉತ್ತಮ ಪ್ರದರ್ಶನ ನೀಡಿ ಪ್ರಥಮ ಸ್ಥಾನ ಗಳಿಸಿದರೆ, ಮೈಸೂರಿನ ವಿದ್ಯಾವರ್ಧಕ ಪದವಿ ಕಾಲೇಜು ಎರಡನೇ ಸ್ಥಾನ ಪಡೆದಿದೆ.

ಮೈಸೂರು ವಿವಿ ಮಾನಸಗಂಗೋತ್ರಿ ಲಲಿತಾಕಲಾ ಕಾಲೇಜು ಆವರಣದಲ್ಲಿ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದ ವತಿಯಿಂದ ನಡೆದ ಎರಡು ದಿನದ ಅಂತರ ವಿಶ್ವವಿದ್ಯಾನಿಲಯದ ಮಟ್ಟದ ಕಾಮರ್ಸ್ ಫೆಸ್ಟ್ 'ಮನಸ್ ವೃದ್ಧಿ–2ಕೆ24'ನಲ್ಲಿ ಸ್ಪರ್ಧೆಯಲ್ಲಿ ವಿಜೇತ ತಂಡಗಳಿಗೆ ವಾಣಿಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಕೆ.ನಾಗೇಂದ್ರಬಾಬು ಚಾಂಪಿಯನ್ ಶಿಫ್ ಟ್ರೋಫಿ ವಿತರಿಸಿದರು.

ನಂತರ ಮಾತನಾಡಿದ ಅವರು, ಕಾಲೇಜು ವಿದ್ಯಾರ್ಥಿಗಳಿಗೆ ಮನಸ್ ವೃದ್ಧಿ–24 ಫೆಸ್ಟ್‌ಗಳನ್ನು ರಾಜ್ಯದ ಎಲ್ಲಾ ವಿವಿಗಳಲ್ಲಿ ಆಯೋಜನೆ ಪ್ರಸ್ತುತ ಅಗತ್ಯವಿದೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಇಂತಹ ಫೆಸ್ಟ್‌ಗಳನ್ನು ಪರಿಚಯಿಸುವುದರಿಂದ ಭವಿಷ್ಯದಲ್ಲಿ ಉತ್ತಮ ನಾಯಕತ್ವ ರೂಪಿಸಿಕೊಳ್ಳಲು ಸಾಧ್ಯವಿದೆ ಎಂದರು. ಕಾಮರ್ಸ್ ವಿದ್ಯಾರ್ಥಿಗಳ ಒಂದೇ ವೇದಿಕೆಗೆ ತರುವ ಇಂತಹ ಫೆಸ್ಟ್‌ಗಳಲ್ಲಿ ಸ್ಪರ್ಧೆಯ ಜೊತೆಗೆ ಸ್ನೇಹ ವೃದ್ಧಿಗೂ ಉತ್ತಮ ವೇದಿಕೆಯಾಗಲಿದೆ. ಹಾಗಾಗಿ ಕಾಲೇಜು ಹಂತದಲ್ಲಿ ಪಠ್ಯದ ಜೊತೆಗೆ ವೃತ್ತಿ ಕೌಶಲ್ಯ ಅಳವಡಿಸಿಕೊಂಡಿರುವ ಪಠ್ಯೇತರ ಚಟುವಟಿಕೆಗಳಿಗೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು. ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್ ವಿಭಾಗದ ಡೀನ್ ಡಾ.ಬಿ. ಮಹದೇವಪ್ಪ ಮಾತನಾಡಿ, ಇಂತಹ ದೊಡ್ಡಮಟ್ಟದ ಈವೆಂಟ್ ಆಯೋಜಿಸುವುದರ ಹಿಂದೆ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ಹಿರಿಯ ವಿದ್ಯಾರ್ಥಿಗಳ ಶ್ರಮವಿದೆ. ಮ್ಯಾನೇಜ್ಮೆಂಟ್ ವಿಭಾಗದಲ್ಲಿ ಕಾಮರ್ಸ್ ಫೆಸ್ಟ್ ಆಯೋಜನೆ ಮಾಡುವುದರಿಂದ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯಲ್ಲಿ ಇಂತಹ ವೇದಿಕೆಯಲ್ಲಿ ಪ್ರದರ್ಶಿಸಲು ಸಹಕಾರಿಯಾಗಲಿದೆ ಎಂದರು.

ಡಾ.ಹೆಚ್.ರಾಜಶೇಖರ್ ಮಾತನಾಡಿ, ಅಂತರ ವಿವಿ ಮಟ್ಟದಲ್ಲಿ ಆಯೋಜನೆಗೊಂಡಿರುವ ಈ 'ಮನಸ್ ವೃದ್ಧಿ' ಫೆಸ್ಟ್‌ನಲ್ಲಿ ವಿವಿಧ ಕಾಲೇಜಿನ 17 ತಂಡಗಳು ಭಾಗವಹಿಸಿ, ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿವೆ ಎಂದರು. ವೇದಿಕೆಯಲ್ಲಿ ಮೈಸೂರು ವಿವಿ ವಾಣಿಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ.ಬಿ.ನಾಗರಾಜು, ಡಾ.ಎನ್.ನಾಗರಾಜ, ಡಾ.ಎಂ.ಎಲ್.ಅಶೋಕ ಸೇರಿದಂತೆ ಇತರೆ ಬೋಧಕ ಮತ್ತು ಬೋಧಕೇತರ ವರ್ಗ ಉಪಸ್ಥಿತರಿದ್ದರು.



ವಿಶ್ವವಿದ್ಯಾನಿಲಯದ ಮಟ್ಟದ ಕಾಮರ್ಸ್ ಫೆಸ್ಟ್ 'ಮನಸ್ ವೃದ್ಧಿ–2ಕೆ24'ನಲ್ಲಿ ಸ್ಪರ್ಧಿಸಿದ್ದ 17 ಕಾಲೇಜು ತಂಡಗಳ ಪೈಕಿ ಮೈಸೂರಿನ ಎಂಎಂಕೆ ಅಂಡ್ ಎಸ್‌ಡಿಎಂ ಮಹಿಳಾ ಕಾಲೇಜು ತಂಡ ಎಲ್ಲಾ ವಿಭಾಗದಲೂ ಉತ್ತಮ ಪ್ರದರ್ಶನ ನೀಡಿ ಪ್ರಥಮ ಸ್ಥಾನಗಳಿಸಿತು.

ಇಂದು ಸಾಧಕರಿಗೆ ಸತ್ಕಾರ ಕಾರ್ಯಕ್ರಮ

ಮೈಸೂರು, ಜೂ. 28– ಮೈಸೂರಿನ ನವಭಾರತ ನಿರ್ಮಾಣ ಟ್ರಸ್ಟ್ ಆಶ್ರಯದಲ್ಲಿ 2023–24ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿ ಉತ್ತೀರ್ಣರಾದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಜೂ.29ರಂದು 'ಸಾಧಕರಿಗೆ ಸತ್ಕಾರ' ಎಂಬ ಹೆಸರಿನಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ನಾಳೆ (ಜೂ.29) ಶನಿವಾರ ಸಂಜೆ 5 ಗಂಟೆಗೆ ವಿಜಯನಗರ ರೈಲ್ವೆ ಲೇಔಟ್ ಬಡಾವಣೆಯ ಇಂದಿರಾ ನರ್ಸಿಂಗ್ ಹೋಮ್ ಮುಂಭಾಗದ ರಂಗಮಂದಿರದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಂಸತ್ ಸದಸ್ಯರೂ ಆದ ರಾಜವಂಶಸ್ಥ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಿದ್ದಾರೆ. ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಸಂಸ್ಕೃತಿ ಚಿಂತಕ ಪ್ರೊ.ಎಂ.ಕೃಷ್ಣೇಗೌಡ, ವಾಗ್ಮಿ ಶ್ರೀಮತಿ ಸುಧಾ ಬರಗೂರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಅಧ್ಯಕ್ಷತೆ ವಹಿಸಲಿದ್ದು, ನವಭಾರತ ನಿರ್ಮಾಣ ಟ್ರಸ್ಟ್ ಅಧ್ಯಕ್ಷರೂ, ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್ ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆ.

ಕಾರ್ಯಕ್ರಮದ ಅಂಗವಾಗಿ ಮೈಸೂರಿನ ಖ್ಯಾತ ಸಂಗೀತ ಕಲಾವಿದ ನಿತಿನ್ ರಾಜಾರಾಮ ಶಾಸ್ತ್ರಿ ಹಾಗೂ ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ.


ರಮಾಗೋವಿಂದ ರಂಗಮಂದಿರದಲ್ಲಿ ನಾಳೆ ಪ್ರತಿಜ್ಞಾ – ಸ್ವಪ್ನನಾಟಕ ಪ್ರದರ್ಶನ

ಮೈಸೂರು, ಜೂ.28– ಜೂನ್ 30ರ ಭಾನುವಾರ ಸಂಜೆ 7 ಗಂಟೆಗೆ ರಾಮಕೃಷ್ಣನಗರದ ನೃಪತುಂಗ ಕನ್ನಡ ಶಾಲೆಯ ಆವರಣದಲ್ಲಿರುವ ರಮಾಗೋವಿಂದ ರಂಗಮಂದಿರದಲ್ಲಿ ರಂಗವಲ್ಲಿ ಪ್ರಯೋಗಿಸುವ ಹೊಸ ನಾಟಕ, ಭಾಸ ಮಹಾಕವಿಯ 'ಪ್ರತಿಜ್ಞಾ ಮತ್ತು ಸ್ವಪ್ನ ನಾಟಕ' ಪ್ರದರ್ಶನ ಏರ್ಪಡಿಸಿದೆ. ನಿರ್ದೇಶಕ ನೀನಾಸಂ ಪದವೀಧರ ಸಾಲಿಯಾನ್ ಉಮೇಶ್ ನಾರಾಯಣ.

ಪ್ರವಾಸಿಗರ ಆಕರ್ಷಿಸಲು ಸೋಮನಾಥಪುರ ಟೂರಿಸ್ಟ್ ಸರ್ಕ್ಯೂಟ್ ರಚನೆ

ಶ್ರೀ ಚೆನ್ನಕೇಶವ ದೇವಾಲಯವನ್ನು ಪ್ರಸಿದ್ಧ ಪ್ರವಾಸಿ ತಾಣವಾಗಿಸಲು ಸರ್ಕಾರದ ಯೋಜನೆ: ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕಿ ಸವಿತಾ ಮಾಹಿತಿ

● ದಸರಾ ವೇಳೆ 9 ದಿನ ವಿಶಿಷ್ಟ ಕಾರ್ಯಕ್ರಮ ● ಸರ್ಕ್ಯೂಟ್‌ನಲ್ಲಿ ತಲಕಾಡು, ಮುಡುಕುತೊರೆ ಸೇರ್ಪಡೆ: ಅಗತ್ಯ ಪ್ರಚಾರಕ್ಕೆ ಸಿದ್ಧತೆ ● ಈ ತಾಣಗಳಿಗೆ ಸಮರ್ಪಕ ಬಸ್ ಸೌಕರ್ಯ



ಮೈಸೂರು, ಜೂ.28(ಬಿಎಲ್‌ಯು)– ಅತ್ಯದ್ಭುತ ಶ್ರೀಮಂತ ಕಲಾ ವೈಭವ ಹೊಂದಿರುವ ಮೈಸೂರು ಜಿಲ್ಲೆ ತಲಕಾಡು ಬಳಿಯ ಸೋಮನಾಥಪುರದ ಶ್ರೀ ಚೆನ್ನಕೇಶವ ದೇವಾಲಯ ಸೇರಿದಂತೆ ಸುತ್ತಲಿನ ಪ್ರವಾಸಿ ತಾಣಗಳನ್ನು ಸೋಮನಾಥಪುರ ಟೂರಿಸ್ಟ್ ಸರ್ಕ್ಯೂಟ್ ಅಡಿ ಸುಪ್ರಸಿದ್ಧ ಪ್ರವಾಸಿ ತಾಣವಾಗಿ ಮಾಡಲು ಸರ್ಕಾರ ಯೋಜನೆ ರೂಪಿಸಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ತಿಳಿಸಿದರು. ಮೈಸೂರಿನ ರುಚಿ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ಇಂದಿನಿಂದ ಆರಂಭವಾದ ಎರಡು ದಿನಗಳ ಇಂಡಿಯಾ ಡೋಮೆಸ್ಟಿಕ್ ಟ್ರಾವೆಲ್ ಮಾರ್ಟ್ ಉದ್ಘಾಟಿಸಿದ ನಂತರ ಪತ್ರಕರ್ತರಿಗೆ ಈ ವಿಚಾರ ತಿಳಿಸಿದ ಅವರು, ಈ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುಮೋದನೆ ದೊರೆತ ನಂತರ ಇದರ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಹೇಳಿದರು.

ದೇಶ–ವಿದೇಶದ ಲಕ್ಷಾಂತರ ಪ್ರವಾಸಿಗರು ಮೈಸೂರಿಗೆ ಬರುತ್ತಾರೆ. ಮೈಸೂರು ಅರಮನೆ, ಮೃಗಾಲಯ, ಚಾಮುಂಡಿಬೆಟ್ಟ, ಕೆಆರ್‌ಎಸ್, ಬಂಡಿಪುರ, ನಾಗರಹೊಳೆ ಸೇರಿದಂತೆ ಇತರೆ ಪ್ರವಾಸಿ ತಾಣ ವೀಕ್ಷಿಸಿ ಹೋಗುತ್ತಾರೆ. ಆದರೆ ಸೋಮನಾಥಪುರದ ಶ್ರೀ ಚೆನ್ನಕೇಶವ ದೇವಾಲಯ ಎಂಬ ಪ್ರಾಚೀನ ಕಲಾ ಪ್ರಕಾರದ ಪ್ರವಾಸಿ ತಾಣ ಇದೆ ಎಂಬ ಮಾಹಿತಿ ಅವರಿಗೆ ಇಲ್ಲ ಎಂದರು. ಈ ಹಿನ್ನೆಲೆಯಲ್ಲಿ ಪ್ರವಾಸಿಗರಿಗೆ ಸೋಮನಾಥಪುರದ ಶ್ರೀ ಚೆನ್ನಕೇಶವ ದೇವಾಲಯದ ಐತಿಹಾಸಿಕ ಹಿನ್ನೆಲೆ, ಶ್ರೀಮಂತ ಶಿಲ್ಪ ಕಲಾ ಪ್ರಕಾರ ಸೇರಿದಂತೆ ಇತರೆ ಮಾಹಿತಿಗಳಿರುವ ಸ್ಥಳ ಮಹಿಮೆಯನ್ನು ಪ್ರಚಾರ ಮಾಡಬೇಕು. ಈ ಮೂಲಕ ಪ್ರವಾಸಿ ತಾಣವನ್ನು ಅಭಿವೃದ್ಧಿ ಮಾಡಿ ಉತ್ತೇಜಿಸುವ ಅವಶ್ಯವಿದೆ ಎಂದು ತಿಳಿಸಿದರು.

ಈ ಹಿನ್ನೆಲೆಯಲ್ಲಿ ಸೋಮನಾಥಪುರದ ಶ್ರೀ ಚೆನ್ನಕೇಶವ ದೇವಾಲಯವನ್ನು ಪ್ರಖ್ಯಾತ ಪ್ರವಾಸಿ ತಾಣವಾಗಿ ಮಾಡಲು ಯೋಜನೆ ರೂಪಿಸಲಾಗಿದೆ. ಮೊದಲ ಹಂತದಲ್ಲಿ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ 9 ದಿನಗಳ ಕಾಲ ಶ್ರೀ ಚೆನ್ನಕೇಶವ ದೇವಾಲಯಕ್ಕೆ ವರ್ಣರಂಜಿತ ದೀಪಾಲಂಕಾರ ಮಾಡಲಾಗುವುದು. ಜೊತೆಗೆ ಸಂಗೀತ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗುವುದು. ಮೈಸೂರು ಸೇರಿದಂತೆ ಇತರೆ ಸ್ಥಳಗಳಿಂದ ಸೋಮನಾಥಪುರಕ್ಕೆ ಸಮರ್ಪಕ ಕೆಎಸ್‌ಆರ್‌ಟಿಸಿ ಬಸ್ ಸಂಪರ್ಕ ಕಲ್ಪಿಸಲಾಗುವುದು ಎಂದು ಸವಿತಾ ಮಾಹಿತಿ ನೀಡಿದರು.

ಸೋಮನಾಥಪುರದ ಸಮೀಪ ತಲಕಾಡು, ಮುಡುಕುತೊರೆ ಸೇರಿದಂತೆ ಇತರೆ ಪ್ರವಾಸಿ ತಾಣಗಳಿವೆ. ಸೋಮನಾಥಪುರಕ್ಕೆ ಬಂದವರು ಇತರೆ ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ನಿಟ್ಟಿನಲ್ಲಿ ಸೋಮನಾಥಪುರ ಟೂರಿಸ್ಟ್ ಸರ್ಕ್ಯೂಟ್ ಮಾಡಲು ಕೂಡ ಯೋಜಿಸಲಾಗಿದೆ ಎಂದು ಹೇಳಿದರು.

ಸರ್ಕಾರದ ಹಂತದಲ್ಲಿ ಈ ಬಗ್ಗೆ ಸಮಾಲೋಚನೆ ನಡೆಯುತ್ತಿದ್ದು, ಸರ್ಕಾರ ಇದಕ್ಕೆ ಅನುಮೋದನೆ ನೀಡಿದರೆ ದಸರಾ ವೇಳೆಗೆ ಇದನ್ನು ಕಾರ್ಯರೂಪಕ್ಕೆ ತರಲಾಗುವುದು ಎಂದು ಸವಿತಾ ಮಾಹಿತಿ ನೀಡಿದರು.

ಕರ್ನಾಟಕದ ಪ್ರಾಚೀನ ದೇವಾಲಯಗಳಲ್ಲಿ ಒಂದಾದ ಸೋಮನಾಥಪುರದ ಶ್ರೀ ಚೆನ್ನಕೇಶವ ದೇವಾಲಯವು ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ (ಯುನೆಸ್ಕೊ) ಪಟ್ಟಿಯಲ್ಲಿದೆ.

ಹೊಯ್ಸಳರ ದೊರೆ ಮುಮ್ಮಡಿ ನರಸಿಂಹ ದಂಡನಾಯಕನಾಗಿದ್ದ ಸೋಮನಾಥ 1258ರ ಸುಮಾರಿನಲ್ಲಿ ಇದನ್ನು ನಿರ್ಮಾಣ ಮಾಡಿದನು. ತರುವಾಯ ಈ ಸ್ಥಳಕ್ಕೆ ತನ್ನ ಹೆಸರನ್ನೇ ಅಂದರೆ ಸೋಮನಾಥಪುರ ಎಂದು ನಾಮಕರಣ ಮಾಡಿದನು.

ಬೇಲೂರು, ಹಳೇಬೀಡಿನಂತೆ ಶಿಲ್ಪ ಕಲಾ ಪ್ರಕಾರ ಹೊಂದಿರುವ ಸೋಮನಾಥಪುರದ ಶ್ರೀ ಚೆನ್ನಕೇಶವ ದೇವಾಲಯ ಅತ್ಯದ್ಭುತ ರಚನೆಯಾಗಿದೆ. ಅಂದಿನ ಶಿಲ್ಪಿಗಳ ಜಾಣ್ಮೆ, ಚಾಕಚಕ್ಯತೆ, ಕೌಶಲ್ಯ, ಕುಸುರಿ ಕೆತ್ತನೆಯ ವೈಶಿಷ್ಟತೆಯನ್ನು ಈ ದೇವಾಲಯ ಬಿಂಬಿಸುತ್ತದೆ.

ಯುನೆಸ್ಕೊ ಪಟ್ಟಿಯಲ್ಲಿರುವ ಈ ದೇವಾಲಯದ ಬಗ್ಗೆ ಹೆಚ್ಚಿನ ಪ್ರಚಾರವಿಲ್ಲ. ಇಂತಹ ಒಂದು ದೇವಾಲಯ ಇದೆ ಎಂಬ ಮಾಹಿತಿ ಕೂಡ ಪ್ರವಾಸಿಗರಿಗಿಲ್ಲ. ಈ ದೇವಾಲಯದ ಬಗ್ಗೆ ಪ್ರವಾಸೋದ್ಯಮ ಇಲಾಖೆ ಹೆಚ್ಚು ಪ್ರಚಾರ ಮಾಡಿದರೆ ಮೈಸೂರಿಗೆ ಭೇಟಿ ನೀಡುವ ಪ್ರವಾಸಿಗರು ಇಲ್ಲಿಗೂ ಭೇಟಿ ನೀಡುತ್ತಾರೆ.

ಸೋಮನಾಥಪುರಕ್ಕೆ ಪ್ರವಾಸಿಗರನ್ನು ಅತ್ಯಾಕರ್ಷಿಸಲು ಸರ್ಕಾರ ಈಗ ಯೋಜನೆ ರೂಪಿಸಿದೆ. ಆದರೆ ಇದು ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಲಿದೆ ಎಂಬ ಪ್ರಶ್ನೆ ಎದುರಾಗಿದೆ.

ಎರಡು ದಿನಗಳ ಇಂಡಿಯಾ ಟ್ರಾವೆಲ್ ಮಾರ್ಟ್ ಪ್ರದರ್ಶನ

ಪ್ರವಾಸೋದ್ಯಮ ಕ್ಷೇತ್ರದ ಪಾಲುದಾರರು ಭಾಗಿ



ಮೈಸೂರಿನ ರುಚಿ ದಿ ಪ್ರಿನ್ಸ್ ಹೋಟೆಲ್ ನಲ್ಲಿ ಶುಕ್ರವಾರ ಆರಂಭವಾದ 2 ದಿನಗಳ ಇಂಡಿಯಾ ಟ್ರಾವೆಲ್ ಮಾರ್ಟ್ ಪ್ರದರ್ಶನವನ್ನು ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ಉದ್ಘಾಟಿಸಿದರು.

ಮೈಸೂರು, ಜೂ.28(ಬಿಎಲ್‌ಯು)– ಮೈಸೂರಿನ ರುಚಿ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ಇಂದಿನಿಂದ ಎರಡು ದಿನಗಳ ಇಂಡಿಯಾ ಟ್ರಾವೆಲ್ ಮಾರ್ಟ್ ಪ್ರದರ್ಶನ ಆರಂಭವಾಗಿದ್ದು, ದೇಶ ವಿದೇಶದ ಪ್ರವಾಸಿ ತಾಣಗಳ ಬಗ್ಗೆ ಮಾಹಿತಿ ನೀಡುವ ಪ್ರವಾಸೋದ್ಯಮ ಕ್ಷೇತ್ರದ ಪಾಲುದಾರರು ಪಾಲ್ಗೊಂಡಿದ್ದಾರೆ. ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ಪ್ರದರ್ಶನಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮೈಸೂರು ಸೇರಿದಂತೆ ಸುತ್ತಲಿನ ಪ್ರವಾಸಿ ತಾಣಗಳ ಬಗ್ಗೆ ಈ ಮೇಳದಲ್ಲಿ ಮಾಹಿತಿ ದೊರೆಯಲಿದೆ ಎಂದು ಹೇಳಿದರು. ಟ್ರಾವೆಲ್ ಏಜೆಂಟರು, ಟೂರ್ ಆಪರೇಟರ್‌ಗಳು, ಕಾರ್ಪೋರೇಟ್ ಕಂಪನಿಗಳು ಸೇರಿದಂತೆ ಪ್ರವಾಸೋದ್ಯಮ ಕ್ಷೇತ್ರದ ಪಾಲುದಾರರು ಈ ಮೇಳದಲ್ಲಿ ಭಾಗವಹಿಸಿದ್ದಾರೆ. ಇವರ ನಡುವೆ ಸಂಪರ್ಕ ಕಲ್ಪಿಸಿ ಪ್ರವಾಸೋದ್ಯಮವನ್ನು ಮತ್ತಷ್ಟು ಬೆಳೆಸುವ ದೃಷ್ಟಿಯಿಂದ ಈ ಮೇಳ ಆಯೋಜಿಸಲಾಗಿದೆ ಎಂದರು. ಮೈಸೂರಿಗೆ ಪ್ರತಿ ವರ್ಷ 40 ಲಕ್ಷಕ್ಕೂ ಹೆಚ್ಚು ಪ್ರವಾಸಿಗರು ಭೇಟಿ ನೀಡುತ್ತಾರೆ. ವರ್ಷವಿಡೀ ಉತ್ತಮ ಹವಾಮಾನ ಇರುವ ಮೈಸೂರು ಪ್ರವಾಸಿಗರನ್ನು ಅತ್ಯಾಕರ್ಷಿಸಲಿದೆ ಎಂದು ಸವಿತಾ ಹೇಳಿದರು. ಜುಪಿಟರ್ ಟ್ರಾವೆಲ್ ಎಕ್ಸಿಬಿಷನ್ಸ್ ನಿರ್ದೇಶಕ ಟಿ.ಜೆ.ಪಿ.ರಾಜು ಮಾತನಾಡಿ, ಪ್ರವಾಸೋದ್ಯಮ ಅಭಿವೃದ್ಧಿಗೆ ಮೈಸೂರಿನಲ್ಲಿ ವಿಫುಲ ಅವಕಾಶಗಳಿವೆ. ಪ್ರತಿ ವರ್ಷ ಮೈಸೂರಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯಲ್ಲಿ ಸರಾಸರಿ ಶೇ.20ರಷ್ಟು ಹೆಚ್ಚಳವಾಗುತ್ತಿದೆ ಎಂದರು.

ನಗರದ ಅರ್ಥ ವ್ಯವಸ್ಥೆಗೆ ಪ್ರವಾಸೋದ್ಯಮದ ಆತಿಥ್ಯ ಕ್ಷೇತ್ರ ಶೇ.25 ರಷ್ಟು ಕೊಡುಗೆ ನೀಡುತ್ತಿದೆ. ಆಧುನಿಕ ಮತ್ತು ಇತಿಹಾಸದ ಸಂಗಮಿಸುವ ಅಪರೂಪದ ಸ್ಥಳ ಮೈಸೂರಾಗಿದೆ. ಭವಿಷ್ಯದ ಪ್ರವಾಸೋದ್ಯಮ ಸ್ವರೂಪ ರೂಪಿಸಲು ಮೈಸೂರು ಮಹತ್ವದ ಪಾತ್ರ ವಹಿಸಿದೆ ಎಂದು ಹೇಳಿದರು.

ಪ್ರವಾಸೋದ್ಯಮ ಮೇಳ ನಡೆಸಲು ಮೈಸೂರು ಸೂಕ್ತವಾದ ಸ್ಥಳವಾಗಿದೆ. ಮುಂದಿನ ಮೇಳವನ್ನು ಬೆಂಗಳೂರಿನಲ್ಲಿ ಆಯೋಜಿಸಲಾಗುತ್ತಿದೆ ಎಂದು ರಾಜು ತಿಳಿಸಿದರು. ಎರಡು ದಿನಗಳ ಮೇಳದಲ್ಲಿ ಕರ್ನಾಟಕ ಮಾತ್ರವಲ್ಲದೆ ಕೇರಳ, ತಮಿಳುನಾಡು, ಚಂಡೀಗಢ, ಗೋವಾ, ತಮಿಳುನಾಡು, ಪುದುಚೇರಿ, ದೆಹಲಿ, ಅಂಡಮಾನ್, ನೇಪಾಳ, ಥಾಯ್ಲೆಂಡ್ ದೇಶಗಳ ಪ್ರವಾಸೋದ್ಯಮ ಪಾಲುದಾರರು ಭಾಗವಹಿಸಿದ್ದಾರೆ. ಮೇಳದ ಉದ್ಘಾಟನೆ ಕಾರ್ಯಕ್ರಮದಲ್ಲಿ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಮೈಸೂರು ಟ್ರಾವೆಲ್ ಅಸೋಸಿಯೇಷನ್ ಅಧ್ಯಕ್ಷ ಬಿ.ಎಸ್.ಪ್ರಶಾಂತ್, ಗೌರವಾಧ್ಯಕ್ಷ ಸಿ.ಎ.ಜಯಕುಮಾರ್ ಉಪಸ್ಥಿತರಿದ್ದರು.

ಮೈಸೂರು ಪ್ರವಾಸಿ ತಾಣಗಳ ಪರಿಚಯ, ಟಿಕೆಟ್ ಖರೀದಿಗೆ ಜೇನಿ ಆ್ಯಪ್

ಮೈಸೂರು, ಜೂ.28(ಬಿಎಲ್‌ಯು)– ಮೈಸೂರಿಗೆ ಭೇಟಿ ನೀಡುವ ಪ್ರವಾಸಿಗರಿಗೆ ಅರಮನೆ ಸೇರಿದಂತೆ ಹಲವು ಪ್ರವಾಸಿ ತಾಣಗಳ ಬಗ್ಗೆ ನಿಖರ ಮಾಹಿತಿ ನೀಡುವುದು ಹಾಗೂ ಆನ್‌ಲೈನ್ ಮೂಲಕ ಟಿಕೆಟ್ ಖರೀದಿಸಲು ಅನುಕೂಲವಾಗುವಂತೆ ಟಿಕೆಟ್ ಜೇನಿ ಆ್ಯಪ್ ಪರಿಚಯಿಸಲು ಚಿಂತನೆ ನಡೆಯುತ್ತಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ತಿಳಿಸಿದ್ದಾರೆ.

ಮೈಸೂರಿಗೆ ದೇಶ–ವಿದೇಶದ ಲಕ್ಷಾಂತರ ಪ್ರವಾಸಿಗರು ಆಗಮಿಸುತ್ತಾರೆ. ಆದರೆ ಮೈಸೂರು ಅರಮನೆ, ಮೃಗಾಲಯ, ಚಾಮುಂಡಿಬೆಟ್ಟ ಸೇರಿದಂತೆ ಇತರೆ ಪ್ರವಾಸಿ ತಾಣಗಳ ಪ್ರವೇಶ ಸಮಯ, ಅಲ್ಲಿನ ಟಿಕೆಟ್ ದರ ಇನ್ನಿತರೆ ಮಾಹಿತಿ ತಿಳಿಯುತ್ತಿಲ್ಲ. ಇದನ್ನು ಬಹಳಷ್ಟು ಮಂದಿ ದುರುಪಯೋಗ ಮಾಡಿಕೊಂಡು ಪ್ರವಾಸಿಗರಿಗೆ ತಪ್ಪು ಮಾಹಿತಿ ನೀಡಿ ಹಣ ಸುಲಿಗೆ ಮಾಡುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಪ್ರವಾಸಿಗರಿಗೆ ಸ್ಪಷ್ಟ ಮಾಹಿತಿ ನೀಡಲು ಜೇನಿ ಆ್ಯಪ್ ಪರಿಚಯಿಸಲಾಗುತ್ತಿದೆ. ಇದನ್ನು ಮೊದಲು ಮೈಸೂರು ಅರಮನೆಗೆ ಪರಿಚಯಿಸಿ, ಅದರ ಯಶಸ್ವಿ ನಂತರ ಇತರೆ ಪ್ರವಾಸಿ ತಾಣಗಳನ್ನು ಅದರಲ್ಲಿ ಅಡಕಗೊಳಿಸಲು ತೀರ್ಮಾನಿಸಲಾಗಿದೆ. ಈ ಸಂಬಂಧ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಂಬಂಧಿಸಿದ ಏಜೆನ್ಸಿ ಜೊತೆ ಮಾತುಕತೆ ನಡೆಸುತ್ತಿದ್ದಾರೆ ಎಂದರು.

ಜೊತೆಗೆ ಕ್ಯೂಆರ್ ಕೋಡ್ ಮೂಲಕ ಆನ್‌ಲೈನ್‌ನಲ್ಲೆ ಟಿಕೆಟ್ ಪಾವತಿ ಮಾಡಬಹುದು. ಇದರಿಂದ ಪ್ರವಾಸಿಗರು ಟಿಕೆಟ್ ಗಾಗಿ ಸರದಿ ಸಾಲಿನಲ್ಲಿ ನಿಲ್ಲುವ ಪರಿಸ್ಥಿತಿ ಬರುವುದಿಲ್ಲ. ಪ್ರವಾಸಿಗರಿಗೆ ಆಧುನಿಕ ತಂತ್ರಜ್ಞಾನದ ಇಂತಹ ಹಲವು ಸೌಲಭ್ಯ ನೀಡಲಾಗುತ್ತಿದೆ. ಇದರಿಂದ ಪ್ರವಾಸಿಗರಿಗೆ ತಪ್ಪು ಮಾಹಿತಿ ನೀಡಿ ಅವರಿಂದ ಹಣ ಸುಲಿಯುವ ಪ್ರಮೇಯ ಬರುವುದಿಲ್ಲ ಎಂದರು.

ನಾಲ್ಕಕ್ಕಿಂತ ಹೆಚ್ಚು ಪ್ರವಾಸಿ ತಾಣಗಳನ್ನು ವೀಕ್ಷಿಸುವ ಒಂದೇ ಕುಟುಂಬದ ಹೆಚ್ಚಿನ ಪ್ರವಾಸಿಗರಿದ್ದರೆ ಅವರಿಗೆ ಟಿಕೆಟ್ ದರದಲ್ಲಿ ರಿಯಾಯಿತಿ ಕೂಡ ನೀಡಲು ಚಿಂತನೆ ನಡೆಯುತ್ತಿದೆ ಎಂದು ಸವಿತಾ ತಿಳಿಸಿದರು.

ವಾಲ್ಮೀಕಿ ನಿಗಮದ ಹಗರಣಕ್ಕೆ ಸಿಎಂ ಸಿದ್ದರಾಮಯ್ಯ ಕಾರಣ

ರಾಜ್ಯ ಬಿಜೆಪಿ ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕೃಷ್ಣನಾಯಕ ಆರೋಪ

ಹೆಚ್.ಡಿ.ಕೋಟೆ, ಜೂ.28– ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ರೂ. ಹಗರಣದ ಹೊಣೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹೊರಬೇಕು. ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ರಾಜ್ಯ ಬಿಜೆಪಿ ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕೆ.ಎಂ.ಕೃಷ್ಣ ನಾಯಕ ಒತ್ತಾಯಿಸಿದರು.

ಶುಕ್ರವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುತ್ತಿಗೆ ಕಾರ್ಯಕ್ರಮಕ್ಕೆ ಹೊರಡುವ ಮುನ್ನಾ ತಾಲೂಕಿನ ಮಾದಾಪುರ ಬಳಿ ಹೆಚ್.ಡಿ.ಕೋಟೆ, ಸರಗೂರು ತಾಲೂಕಿನ ನಾಯಕ ಸಮುದಾಯದ ಮುಖಂಡರು ಸೇರಿದಂತೆ 2 ಸಾವಿರಕ್ಕೂ ಹೆಚ್ಚು ಬಿಜೆಪಿ ಕಾರ್ಯಕರ್ತರೊಂದಿಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದಾಗಲೇ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಹಗರಣ ನಡೆದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಹಣಕಾಸು ಸಚಿವರಾಗಿದ್ದರೂ ಹಣ ಹೇಗೆ ಲೂಟಿಯಾಗಿದೆ ಎಂದು ಪ್ರಶ್ನಿಸಿದ ಅವರು, ತೆಲಂಗಾಣದಲ್ಲಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸುವ ಉದ್ದೇಶದಿಂದ ಇಲ್ಲಿ ಹಣ ಲೂಟಿ ಮಾಡಿ ಅಲ್ಲಿಗೆ ರವಾನಿಸಲಾಗಿದೆ ಎಂದು ಆರೋಪಿಸಿದರು.



ಮಾದಾಪುರ ಬಳಿ ರಾಜ್ಯ ಬಿಜೆಪಿ ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕೆ.ಎಂ.ಕೃಷ್ಣನಾಯಕ ಮಾತನಾಡಿದರು.

> ಮುಖ್ಯಮಂತ್ರಿಗಳು ನಿರ್ವಹಿಸುವ ಆರ್ಥಿಕ ಇಲಾಖೆಗೆ ಮಾಹಿತಿ ಇಲ್ಲದೆ ನಿಗಮದಲ್ಲಿ ಹಗರಣ ನಡೆಯಲು ಸಾಧ್ಯವೇ ಇಲ್ಲ. ಆದರೆ, ಮುಖ್ಯಮಂತ್ರಿಗಳ ಉತ್ತರ ಲಭಿಸಿಲ್ಲ. ಅದರಲ್ಲಿ ನಿಮ್ಮ ಪಾಲು ಎಷ್ಟು? ಹೈದರಾಬಾದ್‌ನ ಖಾತೆಗಳಿಗೆ ಏಕೆ ಹಣ ವರ್ಗಾವಣೆಯಾಯಿತು. ಇದನ್ನು ಚುನಾವಣೆಗಾಗಿ ಕಳುಹಿಸಲಾಗಿತ್ತೋ ಅಥವಾ ಬೇರೆ ಉದ್ದೇಶಕ್ಕೋ? ಎಂಬುದು ಬಂಯಲಾಗಬೇಕು.
> -ಕೆ.ಎಂ.ಕೃಷ್ಣನಾಯಕ, ರಾಜ್ಯ ಬಿಜೆಪಿ ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ.

ಈ ಹಿಂದೆ ಪರಿಶಿಷ್ಟ ಜಾತಿ ನಿಗಮದಿಂದ 11 ಸಾವಿರ ಕೋಟಿ ರೂ. ದುರುಪಯೋಗಪಡಿಸಿಕೊಂಡಿದ್ದರು. ಈಗ ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ಅನುದಾನವನ್ನು ತೆಗೆದು ಸ್ವಕಾರ್ಯಕ್ಕೆ ಬಳಸಿಕೊಳ್ಳಲಾಗಿದೆ. ಪ್ರಕರಣದಲ್ಲಿ ನಾಮಕಾವಸ್ಥೆಗೆ ಸಚಿವ ನಾಗೇಂದ್ರ ಅವರಿಂದ ರಾಜೀನಾಮೆ ಪಡೆಯಲಾಗಿದೆ. ಆದರೆ ಹಣ ವರ್ಗಾವಣೆ ಪ್ರಕ್ರಿಯೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೂಡ ಕಾರಣರಾಗಿದ್ದಾರೆ ಎಂದರು.

ರಾಜ್ಯದಲ್ಲಿ ಪರಿಶಿಷ್ಟ ಜಾತಿಗೆ ಮೀಸಲಿಟ್ಟ ಹಣ ದುರ್ಬಳಕೆಯಾಗಿದೆ. ಇದು ಕಾಂಗ್ರೆಸ್ ಸರ್ಕಾರ ಮಾಡಿದ ಹಗಲು ದರೋಡೆಯಾಗಿದೆ. ಕಾಂಗ್ರೆಸ್ ಸರ್ಕಾರ ಜನರಿಗೆ ಶಾಪವಾಗಿ ಪರಿಣಮಿಸಿದೆ ಎಂದು ದೂರಿದರು. ಇದೇ ವೇಳೆ ನಾಯಕ ಸಮುದಾಯದ ಮುಖಂಡರು ಬಿತ್ತಿ ಪತ್ರ ಹಿಡಿದು ರಾಜ್ಯ ಸರ್ಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಘೋಷಣೆ ಕೂಗಿದರು. ಬಳಿಕ ಅಲ್ಲಿಂದ ತೆರಳಿದ ಮುಖಂಡರು ಮೈಸೂರಿನ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿದರು.

ಈ ವೇಳೆ ಹೆಚ್.ಡಿ.ಕೋಟೆ, ಸರಗೂರು ತಾಲೂಕು ಬಿಜೆಪಿ ಅಧ್ಯಕ್ಷರಾದ ಶಂಬೇಗೌಡ, ಕೆ.ಪಿ.ಗುರುಸ್ವಾಮಿ, ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ್, ವಕೀಲ ಪ್ರಶಾಂತ್, ಗುರುಸ್ವಾಮಿ, ವೆಂಕಟಸ್ವಾಮಿ, ನಂದೀಶ್, ಬಿಡುಗಲು ರಾಜು, ಶಿವರಾಜ್, ವಿವೇಕ್, ಕೇರಳ ಮಂಜು, ವಿವೇಕಾನಂದ, ಅಂಕಪ್ಪ, ಸೋಮನಾಯಕ, ಪ್ರಕಾಶ್, ಗುರುಸ್ವಾಮಿ, ವೆಂಕಟಸ್ವಾಮಿ, ಸೋಮೇಶ್, ರವೀಂದ್ರ ಸೋಮಣ್ಣ, ಬಸವರಾಜು, ಗೋಪಾಲಯ್ಯ, ರವಿಕುಮಾರ್, ಶಿವರಾಜು, ಕುಮಾರಣ್ಣ, ಸಿದ್ದನಾಯಕ, ಲೋಕೇಶ್, ಗೋಪಾಲಯ್ಯ, ಜವರಯ್ಯ, ರವಿ, ಭಾನುಪ್ರಕಾಶ್, ವಿ.ಜಿ.ಸುಬ್ರಹ್ಮಣ್ಯ, ಗಿರೀಶ್, ಗೋಪಾಲಯ್ಯ, ನಾಗನಾಯಕ, ಮಂಜು, ಗೋವಿಂದ ನಾಯಕ, ಮಹದೇವಪ್ಪ, ಜ್ಯೋತಿ ಕುಮಾರ್, ವೆಂಕಟನಾಯಕ, ಪ್ರಕಾಶ್, ಕೃಷ್ಣಕುಮಾರ್, ಗೋವಿಂದರಾಜ, ಮಹೇಶ್, ಕೃಷ್ಣ, ಪುನೀತ, ಕೃಷ್ಣ, ಚಂದ್ರು, ಜವರಾಜು, ಬಸವರಾಜು, ಚಾಮುಂಡ ನಾಯಕ, ಲೋಕೇಶ್, ಮಂಜು ನಾಯಕ್, ಸೇರಿದಂತೆ ಸಮುದಾಯದ ಮುಖಂಡರು, ಬಿಜೆಪಿ ಕಾರ್ಯಕರ್ತರು ಹಾಜರಿದ್ದರು.

ವಿಶ್ವ ಮಾದಕ ವಸ್ತು ವಿರೋಧಿ ದಿನಾಚರಣೆ



ಮೂಗೂರು ಸಮೀಪದ ಕುರುಬೂರು ಗ್ರಾಮದ ಶ್ರೀ ವಿದ್ಯಾದರ್ಶಿನಿ ಹಾಗೂ ನಿರ್ವಾಣಸ್ವಾಮಿ ಪ್ರೌಢಶಾಲೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ವಿಶ್ವ ಮಾದಕ ವಸ್ತು ವಿರೋಧಿ ದಿನಾಚರಣೆ ಹಾಗೂ ಮಾಹಿತಿ ಕಾರ್ಯಾಗಾರ ಆಯೋಜಿಸಲಾಗಿತ್ತು. ಈ ವೇಳೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ತಾಲೂಕು ಯೋಜನಾಧಿಕಾರಿ ಹನುಮಂತಪ್ಪ ಅಂಗಡಿ, ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎನ್.ಪ್ರಭುಸ್ವಾಮಿ, ರೈತ ಸಂಘದ ಶಂಕರ್, ಮುಖ್ಯ ಶಿಕ್ಷಕ ಮಹದೇವಸ್ವಾಮಿ, ಕೃಷಿ ಮೇಲ್ವಿಚಾರಕ ಕುಮಾರ್ ಹಾಜರಿದ್ದರು.

ಇಂದು ಕುಂದುಕೊರತೆ ಸಭೆ

ತಿ.ನರಸೀಪುರ, ಜೂ.28– ಸೆಸ್ಕ್ ಉಪವಿಭಾಗದಿಂದ ಮೊದಲ ತ್ರೈಮಾಸಿಕ ವಿದ್ಯುತ್ ಗ್ರಾಹಕರ ಕುಂದು ಕೊರತೆ ಸಭೆ ಪಟ್ಟಣದಲ್ಲಿ ಜೂ.29ರಂದು ನಡೆಯಲಿದೆ. ನಂಜನಗೂಡು ಸೆಸ್ಕ್ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ 3ರಿಂದ ಸಂಜೆ 5ರವರೆಗೆ ಪಟ್ಟಣದ ಸೆಸ್ಕ್ ಕಚೇರಿಯಲ್ಲಿ ಸಭೆ ನಡೆಯಲಿದ್ದು, ಭೈರಾಪುರ, ಕಿರಗಸೂರು, ಮಾದಾಪುರ, ಮೂಗೂರು, ವಾಟಾಳು, ಕೊತ್ತೇಗಾಲ, ತಲಕಾಡು, ಆಲಗೂಡು ಕಲಿಯೂರು, ದೊಡ್ಡಪುರ, ಹೊಳೆಸಾಲು, ಕೊಳತೂರು, ಸೋಸಲೆ, ಉಕ್ಕಲಗೆರೆ ಸೇರಿದಂತೆ ವಿವಿಧ ಗ್ರಾಪಂ ವ್ಯಾಪ್ತಿಯ ವಿದ್ಯುತ್ ಗ್ರಾಹಕರು ಭಾಗವಹಿಸಿ ತಮ್ಮ ಕುಂದು ಕೊರತೆ ತಿಳಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ರೈತರ ಮೇಲೆ ಹಲ್ಲೆಗೆ ಯತ್ನ: ಪ್ರತಿಭಟನೆ

ನಂಜನಗೂಡು, ಜೂ.28– ನಗರದ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಸ್ಟಾಂಪ್ ವೆಂಡರ್‌ಗಳು ಹಾಗೂ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದ್ದು, ಇದನ್ನು ಪ್ರಶ್ನೆ ಮಾಡಿದ ರೈತರ ಮೇಲೆ ಮಧ್ಯವರ್ತಿಗಳ ಗುಂಪು ಹಲ್ಲೆಗೆ ಯತ್ನಿಸಿದೆ ಎಂದು ಆರೋಪಿಸಿ ತಾಲೂಕು ರೈತ ಸಂಘದ ಕಾರ್ಯಕರ್ತರು ಶುಕ್ರವಾರ ಉಪನೋಂದಣಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್ ಮಾತನಾಡಿ, ಮಧ್ಯವರ್ತಿಗಳು ಹಾಗೂ ಸ್ಟಾಂಪ್ ವೆಂಡರ್‌ಗಳು ಆಸ್ತಿ ನೋಂದಣಿ ಮಾಡಿಸಲು ಬರುವ ಸಾರ್ವಜನಿಕರಿಂದ ಅಕ್ರಮವಾಗಿ ಹೆಚ್ಚಿನ ಹಣ ಪಡೆಯುತ್ತಿದ್ದಾರೆ. ಇಸಿ ಪಡೆಯಲು ನಿಗದಿತ ಶುಲ್ಕ 150 ಬದಲಾಗಿ ಸಾವಿರ ರೂ. ವಸೂಲಿ ಮಾಡುತ್ತಿದ್ದಾರೆ. ಕಚೇರಿಯಲ್ಲಿ ಒಂದು ವಾರದ ಒಳಗೆ ಆಸ್ತಿ ನೋಂದಣಿ, ಭೋಗ್ಯ ಪತ್ರ, ತಿರುವಳಿ ನೋಂದಾವಣೆಗೆ ಸರ್ಕಾರ ನಿಗದಿಪಡಿಸಿರುವ ಶುಲ್ಕದ ವಿವರಗಳನ್ನು ಪ್ರಕಟಿಸಬೇಕು.



ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕಚೇರಿಯಲ್ಲಿ ಸಿಸಿಟಿವಿ ಅಳವಡಿಸಬೇಕು. ಸಬ್‌ರಿಜಿಸ್ಟರ್ ಕಚೇರಿಗೆ ಸಾರ್ವಜನಿಕರು ನೇರವಾಗಿ ಹೋದರೆ ಕೆಲಸವಾಗುವುದಿಲ್ಲ. ಅಧಿಕಾರಿಗಳು ಮಧ್ಯವರ್ತಿಗಳನ್ನು ಇಟ್ಟು ಜನರನ್ನು ಶೋಷಣೆ ಮಾಡುತ್ತಿದ್ದಾರೆ. ಪ್ರಶ್ನಿಸಲು ಹೋದ ಹಳ್ಳಿಜನರ ಮೇಲೆ ಹಲ್ಲೆ ನಡೆಸಿರುವ ಪ್ರಕರಣಗಳು ಇವೆ. ಉಪ ನೋಂದಣಾಧಿಕಾರಿ ವಿವೇಕ್ ಅವರಿಗೆ ಮಧ್ಯವರ್ತಿಗಳಿಗೆ ಕಚೇರಿಗೆ ಪ್ರವೇಶ ನೀಡದಂತೆ ಎಚ್ಚರಿಕೆ ನೀಡಿದ್ದೇವೆ. ಸರಿಪಡಿಸದಿದ್ದರೆ ಉಪ ನೋಂದಣಿ ಕಚೇರಿ ಮುಂಭಾಗ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದರು. ಪ್ರತಿಭಟನೆಯಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಸತೀಶ್ ರಾವ್, ರೈತ ಮುಖಂಡರಾದ ರಘು, ವೇಣುಗೋಪಾಲ್, ರಾಜಶೇಖರ್ ಉಪಸ್ಥಿತರಿದ್ದರು.

ಕಳಸ ಪ್ರತಿಷ್ಠಾಪನೆ

ಸರಗೂರು, ಜೂ.28– ಪಟ್ಟಣದ 9ನೇ ವಾರ್ಡ್‌ನಲ್ಲಿ ಜೂ.29 ಹಾಗೂ 30ರಂದು ಶ್ರೀಅಂತರಘಟ್ಟಮ್ಮ ದೇವಸ್ಥಾನ ಜೀರ್ಣೋದ್ಧಾರ ಮತ್ತು ಕಳಸ ಪ್ರತಿಷ್ಠಾಪನಾ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಶನಿವಾರ ಮತ್ತು ಭಾನುವಾರ ದೇವಸ್ಥಾನದಲ್ಲಿ ಹೋಮ ಹವನ, ಪೂಜಾ ಕೈಂಕರ್ಯಗಳು ನಡೆಯಲಿದ್ದು, ಬಳಿಕ ಕಪಿಲಾ ನದಿಗೆ ತೆರಳಿ ಗಂಗೆಪೂಜೆ ನಡೆಸಿ ಪೂರ್ಣಕುಂಭ, ವಿವಿಧ ಜಾನಪದ ಕಲಾ ಪ್ರಕಾರಗಳೊಂದಿಗೆ ರಥದಲ್ಲಿ ಶ್ರೀ ಅಂತರಘಟ್ಟಮ್ಮನವರ ಉತ್ಸವ ಮೂರ್ತಿಯನ್ನು ಪಟ್ಟಣದ ಪ್ರಮುಖ ರಸ್ತೆಯಲ್ಲಿ ಮೆರವಣಿಗೆ ನಡೆಸಿ ಬಳಿಕ ದೇವಾಲಯದಲ್ಲಿ ಮಹಾಮಂಗಳಾರತಿ ನೆರವೇರಿಸಿ ಪ್ರಸಾದ ವಿನಿಯೋಗ ಮಾಡಲಾಗುವುದು. ಈ ವೇಳೆ ಶಾಸಕರಾದ ಪುಟ್ಟರಂಗಶೆಟ್ಟಿ, ಅನಿಲ್ ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ಉಪ್ಪಾರ ಸಮಾಜದ ಮುಖಂಡರು ತಿಳಿಸಿದ್ದಾರೆ.

ತಿಪ್ಪಲಾಪುರದಲ್ಲಿ ಕೆಂಪೇಗೌಡರ ಜಯಂತಿ ಆಚರಣೆ



ತಿಪ್ಪಲಾಪುರ ಸರ್ಕಾರಿ ಶಾಲೆಯಲ್ಲಿ ಕೆಂಪೇಗೌಡರ ಜಯಂತಿ ಆಚರಿಸಲಾಯಿತು.

ಪಿರಿಯಾಪಟ್ಟಣ ... ಹಿರೀಕ್ಯಾತನಹಳ್ಳಿ, ಜೂ.28– ಹುಣಸೂರು ತಾಲೂಕಿನ ತಿಪ್ಪಲಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಿಸಲಾಯಿತು.

ತಾಲೂಕು ಕಸಾಪ ಅಧ್ಯಕ್ಷ ಹರವೆ ಮಹದೇವ್ ಮಾತನಾಡಿ, ವಿಜಯನಗರ ಸಾಮ್ರಾಜ್ಯದ ಅಡಿ ಒಂದು ಸಂಸ್ಥಾನವಾಗಿದ್ದ ಯಲಹಂಕ. ಇದರ ಸುತ್ತಮುತ್ತಲಿನ ಪ್ರದೇಶವನ್ನು ನಾಡಪ್ರಭುಗಳು ಆಳುತ್ತಿದ್ದರು. ಅವರಲ್ಲಿ ಶ್ರೇಷ್ಠರಾದವರು ಕೆಂಪೇಗೌಡರು. ಪ್ರಜೆಗಳ ಹಿತರಕ್ಷಣೆಯೇ ಮುಖ್ಯವೆಂದು ಮನಗಂಡಿದ್ದ ಕೆಂಪೇಗೌಡರು ದೂರದೃಷ್ಟಿ ವ್ಯಕ್ತಿತ್ವವುಳ್ಳವರಾಗಿದ್ದರು. ಬೆಂಗಳೂರನ್ನು ಕಟ್ಟಿ ಬೆಳೆಸಿದ ಕೀರ್ತಿ ಕೆಂಪೇಗೌಡರಿಗೆ ಸಲ್ಲುತ್ತದೆ. ಅಂದಿನ ಕಾಲದಲ್ಲೇ ಬೆಂಗಳೂರಿನಲ್ಲಿ ವಿವಿಧ ಕಸುಬುಗಳನ್ನು ಆಧರಿಸಿ ಜೀವನ ಮಾಡುತ್ತಿದ್ದ ಜನರಿಗೆ ವಿವಿಧ ಪೇಟೆ ಗಳನ್ನು ನಿರ್ಮಿಸಿದ್ದರು. ಜನರ ಕುಡಿಯುವ ನೀರಿನ ಬವಣೆ ನೀಗಿಸಲು ಅನೇಕ ಕೆರೆಗಳನ್ನು ನಿರ್ಮಿಸಿದರು. ಧರ್ಮಂಬೂದಿ ಕೆರೆ, ಲಿಂಗಾಂಬೂದಿ ಕೆರೆ, ಸಂಪಂಗಿ ಕೆರೆ, ಅಲಸೂರು ಕೆರೆ ಹೀಗೆ ಹಲವಾರು ಕೆರೆಗಳನ್ನು ಕಟ್ಟಿಸಿದ ಇವರಿಗೆ ಸಾವಿರ ಕೆರೆಗಳ ಸರದಾರ ಎನಿಸಿಕೊಂಡರು ಎಂದರು.

ಕೆಂಪೇಗೌಡರು ಶಿವಗಂಗೆಯ ಗಂಗಾಧರೇಶ್ವರನ ಮಹಾನ್ ದೈವ ಭಕ್ತನಾಗಿದ್ದರು. ಬೆಂಗಳೂರಿನಲ್ಲಿ ಅನೇಕ ದೇವಸ್ಥಾನಗಳನ್ನು ಕಟ್ಟಿಸಿದ್ದಾರೆ. ಅದರಲ್ಲಿ ಪ್ರಸಿದ್ಧವಾದದ್ದು ಗವಿ ಗಂಗಾಧರೇಶ್ವರ ದೇವಾಲಯ. ಪ್ರಜೆಗಳ ಹಿತ ರಕ್ಷಣೆಯೇ ಬಹಳ ಮುಖ್ಯವೆಂದು ಮನಗಂಡಿದ್ದರು. ಪ್ರಸ್ತುತ ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ಹಾಗೂ ಬೆಂಗಳೂರಿನ ಹೃದಯ ಭಾಗದಲ್ಲಿ ಕೆಂಪೇಗೌಡ ರಸ್ತೆ ಎಂದು ನಾಮಕರಣ ಮಾಡಿದ್ದಾರೆ. ಜನರಿಗೆ ಮಾಡಿದ ಸೇವೆಗಾಗಿ ಇವರಿಗೆ ಪ್ರಜಾವತ್ಸಲ ಎಂದು ಬಿರುದನ್ನು ನೀಡಿದ್ದರು ಎಂದರು.

ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ರಾಜೇಶ, ಸದಸ್ಯರಾದ ಬೋರೇಗೌಡ, ಮಹೇಶ್, ಶಿವಪ್ಪ ರಾಜಶೇಖರ್, ಸಣ್ಣದಾಸಯ್ಯ, ಶಿಲ್ಪ, ನಾಡಪ್ರಭು ಕೆಂಪೇಗೌಡ ಸಮಿತಿ ಅಧ್ಯಕ್ಷ ಮಂಜುನಾಥ್, ಶಾಲಾ ಮುಖ್ಯ ಶಿಕ್ಷಕಿ ಲೀಲಾಂಬ, ಸಹ ಶಿಕ್ಷಕರಾದ ಪ್ರಸನ್ನ ಕುಮಾರ್, ಪ್ರೇಮ್ ಕುಮಾರ್, ಶಾಲಾ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಹಾಜರಿದ್ದರು.

ನಂಜನಗೂಡಿನಲ್ಲಿ ವ್ಯಕ್ತಿ ಬರ್ಬರ ಹತ್ಯೆ

ನಂಜನಗೂಡು, ಜೂ.28– ವ್ಯಕ್ತಿ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ನಗರದ ಶ್ರೀಕಂಠೇಶ್ವರ ದೇವಾಲಯದ ಹದಿನಾರು ಕಾಲು ಮಂಟಪದ ಬಳಿ ಶುಕ್ರವಾರ ಜರುಗಿದೆ.



ಚಾಮರಾಜನಗರ ತಾಲೂಕಿನ ಹರದನಹಳ್ಳಿ ಗ್ರಾಮದ ಬಂಗಾರು (47) ಹತ್ಯೆಗೊಳಗಾದವರು. ತರಕಾರಿ ವ್ಯಾಪಾರಿಯಾಗಿದ್ದ ಬಂಗಾರು ತಮಿಳುನಾಡಿಗೆ ತರಕಾರಿ ಸಾಗಿಸುತ್ತಿದ್ದ ಎನ್ನಲಾಗಿದೆ. ಶುಕ್ರವಾರ ಮದುವೆಗೆಂದು ನಂಜನಗೂಡಿಗೆ ಬಂದಿದ್ದಾನೆ. ಆದರೆ ಅಪರಿಚಿತರು ನಗರದ ಹದಿನಾರು ಕಾಲು ಮಂಟಪದ ಬಳಿ ತಲೆ ಮೇಲೆ ಕಲ್ಲು ಎತ್ತಿಹಾಕಿ ಭೀಕರವಾಗಿ ಕೊಲೆಗೈದು ಪರಾರಿಯಾಗಿದ್ದಾರೆ. ಯಾವ ಕಾರಣಕ್ಕಾಗಿ ಕೊಲೆಗೈಯ್ಯಲಾಗಿದೆ? ಯಾರು ಕೊಲೆ ಮಾಡಿದ್ದಾರೆ ಎಂಬುದು ಪೊಲೀಸರ ತನಿಖೆಯಿಂದ ಬೆಳಕಿಗೆ ಬರಬೇಕಿದೆ.

ವಿಷಯ ತಿಳಿದು ಸ್ಥಳಕ್ಕೆ ಶ್ವಾನದಳದೊಂದಿಗೆ ಆಗಮಿಸಿದ ಎಎಸ್ಪಿ ನಾಗೇಶ್, ಡಿವೈಎಸ್ಪಿ ರಘು, ಪಟ್ಟಣ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಬಸವರಾಜು ಪರಿಶೀಲಿಸಿದರು. ಅಲ್ಲದೇ ಆರೋಪಿಗಳ ಪತ್ತೆಗಾಗಿ ತಂಡವನ್ನು ರಚಿಸಿ ತನಿಖೆ ಕೈಗೊಂಡಿದ್ದಾರೆ. ಶವವನ್ನು ಸರ್ಕಾರಿ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ. ಈ ಸಂಬಂಧ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸರಗೂರಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ

ಸರಗೂರು, ಜೂ.28– ನಾಡಪ್ರಭು ಕೆಂಪೇಗೌಡರ ದೂರದೃಷ್ಟಿಯ ಫಲವೇ ಇಂದು ಬೃಹತ್ ಬೆಂಗಳೂರು ನಿರ್ಮಾಣವಾಗಿದೆ ಎಂದು ತಹಸೀಲ್ದಾರ್ ರುಕಿಯಾ ಬೇಗಂ ತಿಳಿಸಿದರು.

ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ನಡೆದ ಕೆಂಪೇಗೌಡ ಜಯಂತಿಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಬೆಂಗಳೂರಿನಲ್ಲಿ 500 ವರ್ಷಗಳ ಹಿಂದೆಯೇ ಕೆಂಪೇಗೌಡರು ಎಲ್ಲಾ ಸಮುದಾಯಗಳ ವೃತ್ತಿಗಳಿಗೆ ಮತ್ತು ವ್ಯಾಪಾರ ವಹಿವಾಟುಗಳಿಗೆ ಪೇಟೆಗಳನ್ನು ನಿರ್ಮಾಣ ಮಾಡಿ ಅನುಕೂಲ ಕಲ್ಪಿಸಿದ್ದರು. ಅಲ್ಲದೇ ಕೆರೆ, ಕಟ್ಟೆಗಳು ಹಾಗೂ ಕಲ್ಯಾಣಿಗಳನ್ನು ನಿರ್ಮಿಸಿದ್ದರು. ಧಾರ್ಮಿಕ, ಸಾಂಸ್ಕೃತಿಕ, ಜಾನಪದ ಕಲೆಗಳ ಬೆಳವಣಿಗೆ ಜೊತೆಗೆ ಎಲ್ಲಾ ಸಮುದಾಯದವರಿಗೆ ಅಧಿಕಾರ, ಶಿಕ್ಷಣ, ಸವಲತ್ತನ್ನು ನಾಡಪ್ರಭು ಕೆಂಪೇಗೌಡರು ನೀಡಿದ್ದರು. ಕೃಷ್ಣದೇವರಾಯನ ಸಾಮಂತರಾಗಿದ್ದ ಕೆಂಪೇಗೌಡರು ರಾಜಭಕ್ತಿಯ ಸಾಕಾರ ಮೂರ್ತಿಯಾಗಿದ್ದರು. ಇವರ ಪ್ರಗತಿಪರ ಚಿಂತನೆಗಳು, ಅಭಿವೃದ್ಧಿ ಮುನ್ನೋಟ ವಿಜಯನಗರ ಅರಸರಿಗೆ ಮೆಚ್ಚುಗೆಯಾಗಿತ್ತು. ಬೆಂಗಳೂರು ನಿರ್ಮಾಣ ಕಾರ್ಯದಲ್ಲಿ ಅರಸರಿಂದ ಅಪಾರ ಸಹಾಯ ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಇತಿಹಾಸದ ಅರಿವು ಹೊಂದಿದ್ದ ಅವರು ಹೊಸ ಇತಿಹಾಸ ಸೃಷ್ಟಿಸಿದರು ಎಂದರು.




ಸರಗೂರಿನ ತಹಸೀಲ್ದಾರ್ ಕಚೇರಿಯಲ್ಲಿ ಕೆಂಪೇಗೌಡ ಜಯಂತಿ ಆಚರಿಸಲಾಯಿತು. ರುಕಿಯಾ ಬೇಗಂ ಇದ್ದರು.

ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಕೆಂಡಗಣ್ಣಸ್ವಾಮಿ ಮಾತನಾಡಿ, ನಾಡಪ್ರಭು ಕೆಂಪೇಗೌಡರ ಆದರ್ಶಗಳನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕು. ಕೆಂಪೇಗೌಡ ಜಯಂತಿಯನ್ನು ಸರ್ಕಾರದಿಂದ ಆಚರಿಸುತ್ತಿರುವುದು ಸಂತಸ ತಂದಿದೆ. ಬೃಹತ್ ಬೆಂಗಳೂರು ನಗರ ನಿರ್ಮಿಸಿದ ಪ್ರಭುಗಳು ಕನ್ನಡನಾಡಿಗೆ ಅಭೂತಪೂರ್ವ ಕೊಡುಗೆ ನೀಡಿದ್ದಾರೆ. ಅವರು ಹಾಕಿಕೊಟ್ಟ ಹಾದಿಯಲ್ಲಿ ಎಲ್ಲರೂ ನಡೆಯಬೇಕು ಎಂದರು.

ಈ ವೇಳೆ ಗ್ರೇಡ್–2 ತಹಸೀಲ್ದಾರ್ ಪರಶಿವಮೂರ್ತಿ, ಎಪಿಎಂಸಿ ಕಾರ್ಯದರ್ಶಿ ವಸಂತಕುಮಾರ್, ನೀರಾವರಿ ಇಲಾಖೆ ಅಧಿಕಾರಿ ಕೆಉಷಾ, ಗುರುರಾಜ್, ಉಪತಹಸೀಲ್ದಾರ್ ಸುನೀಲ್, ರವೀಂದ್ರ, ರಾಜಸ್ವ ನಿರೀಕ್ಷಕ ಮುಜೀಬ್, ಶ್ರೀನಿವಾಸ, ಸುಶ್ಮಿತಾ, ಚೈತ್ರ ಇನ್ನಿತರರಿದ್ದರು.

ನಿವೃತ್ತ ಮುಖ್ಯ ಶಿಕ್ಷಕರಿಗೆ ಸನ್ಮಾನ

ಪಿರಿಯಾಪಟ್ಟಣ ತಾಲೂಕಿನ ಆಲನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನಿವೃತ್ತ ಮುಖ್ಯಶಿಕ್ಷಕ ಕೆ.ಜಿ.ಪುಟ್ಟರಾಜು ಅವರನ್ನು ಶಾಲೆಯ ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು ಮತ್ತು ಗ್ರಾಮಸ್ಥರು ಸನ್ಮಾನಿಸಿದರು. ಈ ವೇಳೆ ಹುಣಸವಾಡಿ ಗ್ರಾಪಂ ಸದಸ್ಯ ಅಶೋಕ್, ಮಾಜಿ ಸದಸ್ಯ ಗಣೇಶ್, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನವೀನ್ ಕುಮಾರ್, ಶಿಕ್ಷಕರಾದ ಪರಮೇಶ್, ಕೃಷ್ಣೇಗೌಡ, ಜ್ಯೋತಿ, ಯಶೋಧಾ, ಕುಮಾರ್, ಸಜ್ಜನ್, ಮುಖಂಡರಾದ ಬಸವೌಡ ಶ್ರೀನಿವಾಸ್ ಇತರರಿದ್ದರು.



ಗ್ಯಾರಂಟಿಗಳನ್ನು ಜನರಿಗೆ ಸಮರ್ಪಕವಾಗಿ ತಲುಪಿಸಿ

ಶಿಕ್ಷಣ ಸಚಿವ ಮಧು ಬಂಗಾರಪ್ಪ

ತಿ.ನರಸೀಪುರ, ಜೂ.28– ರಾಜ್ಯದ ಜನತೆ ಕಾಂಗ್ರೆಸ್ ಮೇಲೆ ನಂಬಿಕೆ ಇಟ್ಟು ಅಧಿಕಾರ ನೀಡಿರುವುದರಿಂದ ಕಾರ್ಯಕರ್ತರು ಚುನಾವಣೆ ಪೂರ್ವದಲ್ಲಿ ನೀಡಿದ್ದ 5 ಗ್ಯಾರಂಟಿಗಳನ್ನು ಜನರಿಗೆ ಸಮರ್ಪಕವಾಗಿ ತಲುಪಿಸಲು ಶ್ರಮಿಸಬೇಕು ಎಂದು ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷರಾದ ಶಿಕ್ಷಣ ಸಚಿವ ಎಸ್.ಮಧು ಬಂಗಾರಪ್ಪ ತಿಳಿಸಿದರು.



ಬೆಂಗಳೂರಿನಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರನ್ನು ಸನ್ಮಾನಿಸಲಾಯಿತು.

ಬೆಂಗಳೂರಿನ ತಮ್ಮ ಕಚೇರಿಯಲ್ಲಿ ವರುಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ತಾಲೂಕಿನ ಬಿಳಿಗೆರೆಹುಂಡಿ ಗ್ರಾಮದ ಎಂ.ರಮೇಶ್ ಅವರನ್ನು ನೇಮಮಾಡಿ ನೇಮಕಾತಿ ಪತ್ರ ವಿತರಿಸಿ ಮಾತನಾಡಿದ ಅವರು, ಬಡವರ ಬದುಕನ್ನು ಹಸನುಗೊಳಿಸುವ ಸರ್ಕಾರದ ಮಹತ್ವಾಕಾಂಕ್ಷೆ ಗ್ಯಾರಂಟಿಗಳ ಬಗ್ಗೆ ವಿಪಕ್ಷಗಳು ಗೊಂದಲ ಸೃಷ್ಟಿಸಿದ್ದು, ಪಕ್ಷದ ಕಾರ್ಯಕರ್ತರು ಜನರ ಸಂಪರ್ಕದೊಂದಿಗೆ ಯೋಜನೆಗಳು ಅವರಿಗೆ ತಲುಪುವಂತೆ ನೋಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ನಾನೂ ಕೂಡ ಪಂಚಾಯಿತಿ ಮಟ್ಟದಲ್ಲಿ ಭೇಟಿ ಕೊಟ್ಟು ಜನರು ಹಾಗೂ ಕಾರ್ಯಕರ್ತರ ಅಹವಾಲು ಆಲಿಸುತ್ತಿದ್ದೇನೆ. ಕ್ಷೇತ್ರದ ಜನರ ಜೊತೆ ನಿರಂತರ ಸಂಪರ್ಕದಲ್ಲಿದ್ದುಕೊಂಡು ಸಮಸ್ಯೆಗಳಿಗೆ ಸ್ಪಂದಿಸೋಣ. ಹಾಗಾಗಿ ಯಾವುದೇ ಅಪಪ್ರಚಾರಕ್ಕೆ ಜನತೆ ಕಿವಿಗೊಡದೆ ಸಾರ್ವಜನಿಕ ಸಮಸ್ಯೆಗಳನ್ನು ಖುದ್ದಾಗಿ ನನ್ನ ಗಮನಕ್ಕೆ ತರಬೇಕು ಎಂದರು.


ನೂತನ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ರಮೇಶ್ ಮಾತನಾಡಿದರು. ಕನಕ ರೈಸ್ ಮಿಲ್ ಮಾಲೀಕ ಬಿ.ಎನ್.ಸುರೇಶ್‌ಕುಮಾರ್, ಪೆಟ್ರೋಲ್ ಬಂಕ್ ಮಾಲೀಕ ಬಿ.ಎಲ್.ಲಿಂಗರಾಜು, ವರುಣ ಕ್ಷೇತ್ರದ ಕಾರ್ಮಿಕ ಘಟಕದ ಅಧ್ಯಕ್ಷ ಬಣ್ಣ ಬಸವರಾಜು, ಸುನೀಲ್ ಬೋಸ್ ಯುವ ಬ್ರಿಗೇಡ್ ಅಧ್ಯಕ್ಷ ಕುಮಾರ್, ರಾಮೇಗೌಡ ಉಪಸ್ಥಿತರಿದ್ದರು.

ಚಾ.ನಗರ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ

ಸಂಸದ ಸುನೀಲ್ ಬೋಸ್ ಭರವಸೆ

ತಿ.ನರಸೀಪುರ, ಜೂ.28– ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಕೇಂದ್ರದ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದು ಸಂಸದ ಸುನೀಲ್ ಬೋಸ್ ಭರವಸೆ ನೀಡಿದರು.

ದೆಹಲಿಯಲ್ಲಿ ನಡೆಯುತ್ತಿರುವ ಅಧಿವೇಶದ ವೇಳೆ ಪಟ್ಟಣದ ಕಾಂಗ್ರೆಸ್ ಮುಖಂಡರಿಂದ ಸನ್ಮಾನ ಸ್ವೀಕರಿಸಿ, ಕೇಂದ್ರ ಸರ್ಕಾರದ ಯೋಜನೆಗಳ ಮೂಲಕ ಚಾಮರಾಜನಗರ ಲೋಕಸಭಾ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವಂತೆ ಸಲ್ಲಿಸಿದ ಮನವಿ ಸ್ವೀಕರಿಸಿ ಮಾತನಾಡಿದ ಅವರು, ಕ್ಷೇತ್ರದ ಜನಸಾಮಾನ್ಯರ ಸಮಸ್ಯೆಗಳನ್ನು ಆಲಿಸಿ ಪರಿಹರಿಸುವ ಮೂಲಕ ಮಾಜಿ ಸಂಸದ ಧ್ರುವನಾರಾಯಣ್ ಅವರಂತೆ ಮಾದರಿ ಸಂಸದನಾಗುವೆ ಎಂದರು. ಚುನಾವಣೆ ವೇಳೆ ನನ್ನ ವಿರುದ್ಧ ಅಪಪ್ರಚಾರ ಮಾಡಿದವರಿಗೆ ಕ್ಷೇತ್ರದ ಮತದಾರರು ನನ್ನನ್ನು ಭಾರೀ ಅಂತರದಲ್ಲಿ ಗೆಲ್ಲಿಸುವ ಮೂಲಕ ತಕ್ಕ ಉತ್ತರ ನೀಡಿದ್ದಾರೆ. ಹೀಗಾಗಿ ಮತದಾರರ ಋಣ ನನ್ನ ಮೇಲಿದೆ. ಚಾಮರಾಜನಗರದಲ್ಲಿ ಸುಸಜ್ಜಿತ ಕಚೇರಿ ತೆರೆದು ಕ್ಷೇತ್ರದ ಮತದಾರರು ಮತ್ತು ಮುಖಂಡರೊಂದಿಗೆ ಮುಕ್ತವಾಗಿ ಚರ್ಚಿಸಿ ಸಂಸದರ ನಿಧಿಯನ್ನು ಸಂಪೂರ್ಣವಾಗಿ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸುವ ಮೂಲಕ ಹಿಂದುಳಿದ ಗಡಿ ಜಿಲ್ಲೆಯಾಗಿರುವ ಚಾಮರಾಜನಗರವನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸಲಾಗುವುದು ಎಂದರು.



ಹಿಂದಿನ ಸಂಸದರು ಉತ್ತಮ ಕೆಲಸ ಮಾಡಿದ್ದು, ನಾನು ಅದನ್ನು ಮುಂದುವರೆಸಿಕೊಂಡು ಹೋಗುವೆ ಎಂದ ಅವರು, ಇದಕ್ಕೆ ಎಲ್ಲರ ಸಹಕಾರ ಅಗತ್ಯ ಎಂದರು. ಉಳಿದಂತೆ ತಿ.ನರಸೀಪುರ, ನಂಜನಗೂಡು ಸೇರಿದಂತೆ ನನ್ನ ಕ್ಷೇತ್ರ ವ್ಯಾಪ್ತಿಗೆ ಒಳಪಡುವ ಎಲ್ಲಾ ತಾಲೂಕುಗಳು ಮತ್ತು ಗ್ರಾಮಗಳಿಗೆ ಭೇಟಿ ನೀಡಿ ಅಲ್ಲಿನ ಸಮಸ್ಯೆಗಳನ್ನು ಆಲಿಸಿ ಅಭಿವೃದ್ಧಿಪಡಿಸಲು ಶಕ್ತಿ ಮೀರಿ ಪ್ರಯತ್ನಿಸುವೆ. ಇದರೊಂದಿಗೆ ನಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಉದ್ಯಮಿಗಳಿಗೆ ಅವಕಾಶ ನೀಡಿ ನಿರುದ್ಯೋಗ ಸಮಸ್ಯೆ ನಿವಾರಿಸಲು ಶ್ರಮಿಸುವೆ ಎಂದರು.

ಇದೇ ವೇಳೆ ಮಾತನಾಡಿದ ಮುಖಂಡರು ಕ್ಷೇತ್ರ ವ್ಯಾಪ್ತಿಯಲ್ಲಿ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲು ಕೈಗಾರಿಕೋದ್ಯಮಗಳನ್ನು ಸ್ಥಾಪಿಸಲು ಆದ್ಯತೆ ನೀಡಬೇಕು. ಉದ್ಯೋಗಕ್ಕಾಗಿ ಯುವಕರು ನೆರೆ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದಾರೆ. ಸ್ಥಳೀಯವಾಗಿ ಅವರಿಗೆ ಉದ್ಯೋಗ ದೊರಕಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಮನವಿ ಮಾಡಿದರು. ಬನ್ನೂರು ಪುರಸಭಾ ಮಾಜಿ ಅಧ್ಯಕ್ಷ ಮುನಾವರ್ ಪಾಷ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆಮಚ್ಚೇಗೌಡ, ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನ ಸ್ವಾಮಿ, ಮುಖಂಡರಾದ ಲಕ್ಷ್ಮಿ ನಾರಾಯಣ, ಧೀರಜ್ ಪ್ರಸಾದ್, ರಾಜೇಶ್ ಮತ್ತಿತರರಿದ್ದರು.

ಗುಂಪು ಘರ್ಷಣೆ ನಡೆದಿದ್ದ ಹಲ್ಲರೆ ಗ್ರಾಮದಲ್ಲಿ

ತಾಲೂಕು ಆಡಳಿತದಿಂದ ಅಂಬೇಡ್ಕರ್ ನಾಮಫಲಕ ಅಳವಡಿಕೆ

ನಂಜನಗೂಡು/ಮಲ್ಲುಂಡಿ, ಜೂ.28– ತಾಲೂಕಿನ ಹಲ್ಲರೆ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ನಾಮಫಲಕ ಅಳವಡಿಸುವ ವಿಚಾರವಾಗಿ 2 ಗುಂಪಿನ ನಡುವೆ ಉಂಟಾಗಿದ್ದ ಘರ್ಷಣೆ ಪ್ರಕರಣವನ್ನು ತಾಲೂಕು ಆಡಳಿತ ವಿವಾದಿತ ಜಾಗದಲ್ಲಿ ಡಾ.ಬಿ.ಆರ್.ಅಂಬೆಡ್ಕರ್ ಅವರ ನಾಮಫಲಕ ಅಳವಡಿಸುವ ಮೂಲಕ ಬಗೆಹರಿಸಿದೆ.

ಗ್ರಾಮದಲ್ಲಿ ಕೆಲ ದಿನಗಳ ಹಿಂದೆ ಅಂಬೇಡ್ಕರ್ ನಾಮಫಲಕ ಅಳವಡಿಸುವ ವಿಚಾರವಾಗಿ 2 ಗುಂಪಿನ ನಡುವೆ ಘರ್ಷಣೆ ಉಂಟಾಗಿ ನಾಮಫಲಕವನ್ನು ಧ್ವಂಸಗೊಳಿಸಲಾಗಿತ್ತು. ಅಲ್ಲದೇ ಗ್ರಾಮದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಒಂದು ಗುಂಪಿನವರ ಮನೆಗಳ ಮೇಲೆ ಕಲ್ಲು ತೂರಾಟ ನಡೆಸಿದ್ದಲ್ಲದೆ ಸಿಕ್ಕಸಿಕ್ಕವರ ಮೇಲೆ ಕಲ್ಲು ತೂರಾಟ ನಡೆಸಿ, ದೊಣ್ಣೆಯಿಂದ ಹಲ್ಲೆ ನಡೆಸಿ ನೂರಾರು ಜನರು ಗಾಯಗೊಂಡಿದ್ದರು. ಜೊತೆಗೆ ಪೊಲೀಸರ ಮೇಲೂ ಸಹ ದಾಳಿ ನಡೆಸಲಾಗಿತ್ತು. ದಲಿತ ಸಂಘಟನೆಗಳು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಡ ಹೇರಿದ್ದರು. ನಾಮಫಲಕ ಅಳವಡಿಸಲು ಮುಂದಾಗದ ತಾಲೂಕು ಆಳಿತದ ವಿರುದ್ಧ ದಲಿತ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಜೂ.29ಕ್ಕೆ ಹಲ್ಲರೆ ಚಲೋ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಈ ಮಧ್ಯೆ ತಾಲೂಕು ಆಡಳಿತದಿಂದ ಶುಕ್ರವಾರ ನಾಮಫಲಕ ಅಳವಡಿಕೆ ಮಾಡಲಾಯಿತು. ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ಡಿವೈಎಸ್ಪಿ ರಘು, ಎಎಸ್‌ಪಿ ಪೊಲೀಸ್ ವರಿಷ್ಠಾಧಿಕಾರಿ ನಾಗೇಶ್, ತಾಪಂ ಇಓ ಜೆರಾಲ್ಡ್ ರಾಜೇಶ್, ಸಮಾಜ ಕಲ್ಯಾಣಾಧಿಕಾರಿ ಭೀಮರಾವ್ ವಡ್ಡಾರ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ವಿವಾದಿತ ಜಾಗದಲ್ಲೇ ನಾಮಫಲಕ ಅಳವಡಿಸುವ ಮೂಲಕ ಸಮಸ್ಯೆಯನ್ನು ಇತ್ಯರ್ಥ ಪಡಿಸಿದರು.



ಹಲ್ಲರೆ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ನಾಮಫಲಕ ಅಳವಡಿಸಿರುವುದು.

ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ನಾಮಫಲಕ ಅಳವಡಿಸಲು ಗ್ರಾಮಸಭೆಯಲ್ಲಿ ಗ್ರಾಮಸ್ಥರು ಮನವಿ ಮಾಡಿಕೊಂಡಿದ್ದರು. ಅದರಂತೆ ಗ್ರಾಮಸಭೆಯಲ್ಲಿ ನಡಾವಳಿಯನ್ನು ಮಾಡಲಾಗಿತ್ತು. ಅದರಂತೆ ಗುರುವಾರ ಗ್ರಾಮದಲ್ಲಿ ಎಲ್ಲಾ ಸಮುದಾಯದವರ ಸಭೆ ಕರೆದು ಅಭಿಪ್ರಾಯ ಸಂಗ್ರಹಿಸಿ ಗ್ರಾಮಸಭೆ ನಡಾವಳಿಯಂತೆ ನಾಮಫಲಕವನ್ನು ಅಳವಡಿಸುವ ಮೂಲಕ ಪ್ರಕರಣ ಇತ್ಯರ್ಥಪಡಿಸಲಾಗಿದೆ. ಜೊತೆಗೆ ನಾಯಕ ಸಮುದಾಯದವರೂ ಸಹ ನಮ್ಮ ಬೀದಿಗಳಿಗೂ ವಾಲ್ಮೀಕಿ, ಮದಕರಿ ನಾಯಕ ನಾಮಫಲಕವನ್ನು ಅಳವಡಿಸಿಕೊಡುವಂತೆ ಮನವಿ ಮಾಡಿದ್ದಾರೆ. ಕಾನೂನುಬದ್ಧವಾಗಿ ನಾಮಫಲಕ ಅಳವಡಿಸಲು ಕ್ರಮವಹಿಸುವುದಾಗಿ ಭರವಸೆ ನೀಡಲಾಗಿದೆ. ಅಲ್ಲದೆ ಪ್ರಕರಣವನ್ನು ಇತ್ಯರ್ಥಪಡಿಸುವ ಮೂಲಕ ಗ್ರಾಮದಲ್ಲಿ ಸೌಹಾರ್ದಯುತ ವಾತಾವರಣ ನಿರ್ಮಿಸಲಾಗಿದೆ ಎಂದರು. ಇದೇ ಸಂದರ್ಭ ಡಿವೈಎಸ್ಪಿ ರಘು, ಎಎಸ್‌ಪಿ ನಾಗೇಶ್, ತಾಪಂ ಇಓ ಜೆರಾಲ್ಡ್ ರಾಜೇಶ್, ಸಮಾಜ ಕಲ್ಯಾಣಾಧಿಕಾರಿ ಭೀಮರಾವ್ ವಡ್ಡಾರ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಪಾರಿವಾಳಗಳಿಗೆ ಆಹಾರ ಧಾನ್ಯ: ಅರಮನೆ ಸ್ವಚ್ಛತೆ, ಸೌಂದರ್ಯಕ್ಕೆ ಧಕ್ಕೆ

ಸೂಕ್ತ ಕ್ರಮಕ್ಕೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚನೆ

ಮೈಸೂರು,ಜೂ.28– ಪಾರಿವಾಳಗಳ ಹಿಕ್ಕೆ ಹಾಗೂ ಪ್ರವಾಸಿಗರು, ಸಾರ್ವಜನಿಕರು ಪಾರಿವಾಳಗಳಿಗೆ ಹಾಕುವ ಅತಿಯಾದ ಆಹಾರ ಧಾನ್ಯಗಳ ವ್ಯರ್ಥದಿಂದ ಅರಮನೆಯ ಸ್ವಚ್ಛತೆ ಹಾಗೂ ಸೌಂದರ್ಯ ಹಾಳಾಗುತ್ತಿದ್ದು, ಇದರ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮೈಸೂರು ಅರಮನೆ ನೋಡಲು ಬರುವ ಪ್ರವಾಸಿಗರಿಗೆ, ಪಾರಿವಾಳಗಳ ಹಿಂಡು ಸೆಲ್ಫಿಗೆ ಬಂದು ಖುಷಿಕೊಡುತ್ತಿವೆಂತಾದರೂ ಇದು ಅರಮನೆ ಕಟ್ಟಡಕ್ಕೆ ಅಪಾಯ ಕಾರಿಯಾಗಿವೆ ಎಂಬ ಸಾರ್ವಜನಿಕರಿಂದ ಅಭಿಪ್ರಾಯ ವ್ಯಕ್ತವಾದ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮಾತನಾಡಿದರು.

ಜೈನ್ ಸಂಸ್ಥೆಯ ವತಿಯಿಂದಲೂ ಸಹ ಪ್ರತಿನಿತ್ಯ ಪಾರಿವಾಳಗಳಿಗೆ 2 ಮೂಟೆ ಗೋಧಿ, ಜೋಳ, ಭತ್ತವನ್ನು ನೀಡುತ್ತಿದ್ದು, ಜೊತೆಗೆ ಪ್ರವಾಸಿಗರು ಹಾಗೂ ಸಾರ್ವಜನಿಕರು ಆಹಾರ ಧಾನ್ಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನೀಡುತ್ತಿದ್ದಾರೆ. ಇದರಿಂದ ಪಾರಿವಾಳಗಳು ಅರಮನೆಯ ಕಟ್ಟಡದ ಮೇಲೆಲ್ಲಾ ಹಿಕ್ಕೆಗಳನ್ನು ಹಾಕಿ ಅರಮನೆಗೆ ಹಾನಿಯುಂಟು ಮಾಡುತ್ತಿವೆ. ಇದು ಹೀಗೆ ಮುಂದುವರೆದರೆ ಮುಂಬರುವ ದಿನಗಳಲ್ಲಿ ಸಾಂಸ್ಕೃತಿಕ ಕಟ್ಟಡ ತನ್ನ ಸೌಂದರ್ಯವನ್ನು ಕಳೆದುಕೊಳ್ಳಲಿದೆ ಹಾಗಾಗಿ ಈಗಲೇ ಅದನ್ನು ತಡೆಗಟ್ಟಬೇಕು ಎಂದರು.

ಮೈಸೂರು ಅರಮನೆಯ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ನಿತ್ಯ ಮುಂಜಾನೆ ಮೂಟೆಗಳಲ್ಲಿ ಗೋಧಿ ಕಾಳುಗಳನ್ನು ತಂದು ಸುರಿಯುತ್ತಾರೆ. ಇದನ್ನು ತಿನ್ನಲು ಸಾವಿರಾರು ಪಾರಿವಾಳಗಳು ಅಲ್ಲಿಯೇ ಬೀಡು ಬಿಟ್ಟಿವೆ. ಕಾಳು ತಿನ್ನುವ ಸಂದರ್ಭ ಅವುಗಳ ಹಾರುವ ದೃಶ್ಯ ಮನೋಹರವಾಗಿರುತ್ತದೆ. ಇದನ್ನು ಶೂಟ್ ಮಾಡಲು ಖ್ಯಾತ ಛಾಯಾಗ್ರಾಹಕರೂ ಆಗಮಿಸುತ್ತಾರೆ. ಪಾರಿವಾಳಗಳಿಗೆ ಕಾಳು ಹಾಕುವುದನ್ನು ಪಾರಂಪರಿಕ ತಜ್ಞರು ಹಾಗೂ ಪರಿಸರ ಪ್ರೇಮಿಗಳು ಅಪಾಯಕಾರಿ ಎಂದು ಪರಿಗಣಿಸಿದ್ದಾರೆ. ಹಾಗಾಗಿ ಸಾರ್ವಜನಿಕರು ತಮ್ಮ ಖುಷಿಗಾಗಿ ಪಕ್ಷಿಗಳಿಗೆ ತೊಂದರೆ ನೀಡದಂತೆ ಪ್ರವಾಸಿಗರು ಹಾಗೂ ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು ಎಂದರು.

ಅರಮನೆಯ ಅಧಿಕಾರಿಗಳು ಜೈನ್ ಸಂಸ್ಥೆಯೊಂದಿಗೆ ಮಾತನಾಡಿ, ಅವಶ್ಯಕತೆಗೆ ತಕ್ಕಷ್ಟು ಆಹಾರವನ್ನು ನೀಡುವಂತೆ ಅವರಿಗೆ ಮಾಹಿತಿ ನೀಡಬೇಕು. ಸಾರ್ವಜನಿಕರು ಹಾಗೂ ಪ್ರವಾಸಿಗರು ನೀಡುವ ಆಹಾರ ಧಾನ್ಯಗಳಿಗೆ ಅನುಗುಣವಾಗಿ ಅವಶ್ಯವಿದ್ದರೆ ಜೈನ್ ಸಂಸ್ಥೆ ಅವರು ಪಾರಿವಾಳಗಳಿಗೆ ಪಕ್ಷಿಗಳಿಗೆ ಆಹಾರ ಧಾನ್ಯಗಳನ್ನು ಒದಗಿಸುವಂತೆ ಸಂಸ್ಥೆಗೆ ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿ ಡಾ.ರಾಜೇಂದ್ರ ಅಧಿಕಾರಿಗಳಿಗೆ ಸಲಹೆ ನೀಡಿದರು.

ಒಂದೇ ಸ್ಥಳದಲ್ಲಿ ಅತಿ ಹೆಚ್ಚು ಧಾನ್ಯಗಳನ್ನು ಹಾಕುತ್ತಿರುವುದರಿಂದ ಅರಮನೆಯ ಸ್ವಚ್ಛತೆಗೆ ಧಕ್ಕೆ ಉಂಟಾಗುತ್ತಿದ್ದು, ಅದರ ಬಗ್ಗೆ ಪ್ರವಾಸಿಗರು ಹಾಗೂ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಒಬ್ಬ ಸಹಾಯಕನನ್ನು ನೇಮಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಒಂದೇ ಕಡೆ ಹೆಚ್ಚು ಆಹಾರ ಧಾನ್ಯ ಹಾಕುವ ಬದಲು ಹಂತ ಹಂತವಾಗಿ ಪಾರಂಪರಿಕ ಕಟ್ಟಡಗಳಿಂದ ದೂರದಲ್ಲಿ ಪಕ್ಷಿಗಳಿಗೆ ಆಹಾರ ಧಾನ್ಯ ಹಾಕುವುದನ್ನು ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಈ ಸಲಹೆಯನ್ನು ಒಪ್ಪಿದ ಜೈನ್ ಸಂಸ್ಥೆಯವರು ಒಪ್ಪಿ ಈ ರೀತಿ ಕ್ರಮವಹಿಸಲಾಗುವುದು ಎಂದರು.



ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ತಮ್ಮ ಕಚೇರಿ ಸಭಾಂಗಣದಲ್ಲಿ ಅರಮನೆ ಸ್ವಚ್ಛತೆ ಹಾಗೂ ಸೌಂದರ್ಯಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳ ಸಭೆ ನಡೆಸಿದರು.

ಈ ಕಾರ್ಯದಲ್ಲಿ ಪಕ್ಷಿಗಳು ಹಾಗೂ ಪಾರಂಪರಿಕ ಕಟ್ಟಡಗಳಿಗೆ ತೊಂದರೆಯಾಗದಂತೆ ನೋಡಿಕೊಂಡು ಎರಡನ್ನು ಉಳಿಯುವಂತೆ ನೋಡಿಕೊಳ್ಳಬೇಕು. ಅರಮನೆಯ ಆಡಳಿತ ಅಧಿಕಾರಿಗಳು ಸ್ವಚ್ಛತೆಯನ್ನು ಕಾಪಾಡುವಲ್ಲಿ ಮೈಸೂರು ಮಹಾನಗರ ಪಾಲಿಕೆಯೊಂದಿಗೆ ಕೈಜೋಡಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ನಗರಪಾಲಿಕೆ ಆಯುಕ್ತ ಅಸಾದ್ ಉರ್ ರೆಹಮಾನ್ ಶರೀಫ್, ಅರಮನೆ ಆಡಳಿತ ಮಂಡಳಿ ಉಪ ನಿರ್ದೇಶಕ ಸುಬ್ರಹ್ಮಣ್ಯ ಹಾಗೂ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಪಕ್ಷಿಗಳಿಗೆ ಧಾನ್ಯ ನೀಡಲು ನಿಗದಿತ ಪ್ರದೇಶ ಗುರುತಿಸಲು ಆದೇಶ

ಡಿಸಿಗೆ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಸೂಚನೆ



ಮೈಸೂರು, ಜೂ.28(ಬಿಎಲ್‌ಯು)–ವಿಶ್ವ ವಿಖ್ಯಾತ ಮೈಸೂರು ಅರಮನೆಯ ಸ್ವಚ್ಛತೆ ಕಾಪಾಡುವ ದೃಷ್ಟಿಯಿಂದ ಪಕ್ಷಿಗಳಿಗೆ ಧಾನ್ಯ ನೀಡುವುದಕ್ಕೆ ನಿಗದಿತ ಪ್ರದೇಶ ಗುರುತಿಸಿ ಎಂದು ಪ್ರವಾಸೋದ್ಯಮ ಸಚಿವ ಹೆಚ್.ಕೆ. ಪಾಟೀಲ್ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅವರಿಗೆ ಸೂಚನೆ ನೀಡಿದ್ದಾರೆ. ಐತಿಹಾಸಿಕವುಳ್ಳ ತಾಣವಾದ ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ದ್ವಾರದ ಮಂಭಾಗ ಪಾರಿವಾಳಗಳಿಗೆ ಧಾನ್ಯ ತಂದು ಚೆಲ್ಲುತ್ತಿರುವುದರಿಂದ ನೂರಾರು ಸಂಖ್ಯೆಯಲ್ಲಿ ಪಾರಿವಾಳಗಳು ಹಾರಿ ಬರುತ್ತಿವೆ. ಇದರಿಂದ 10ನೇ ಚಾಮರಾಜೇಂದ್ರ ಒಡೆಯರ್ ಅವರ ಪ್ರತಿಮೆ ಹಾಗೂ ಅರಮನೆ ಸೌಂದರ್ಯ ಮತ್ತು ಅದರ ಅಸ್ತಿತ್ವಕ್ಕೆ ಧಕ್ಕೆ ಉಂಟಾಗುತ್ತಿದೆ ಎಂದು ರಾಜ್ಯ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ರಘು ಕೌಟಿಲ್ಯ ಅವರು ಬರೆದಿರುವ ಪತ್ರವನ್ನು ಉಲ್ಲೇಖಿಸಿರುವ ಹೆಚ್.ಕೆ.ಪಾಟೀಲ್ ಅರಮನೆ ಆವರಣದ ಸ್ವಚ್ಛತೆ ಕಾಪಾಡುವ ದೃಷ್ಟಿಯಿಂದ ಹಾಗೂ ಪ್ರವಾಸಿಗರ ಹಿತದೃಷ್ಟಿಯಿಂದ ಪಕ್ಷಿಗಳಿಗೆ ಧಾನ್ಯ ನೀಡಲು ನಿಗದಿತ ಪ್ರದೇಶ ಗುರುತಿಸಿ. ಈ ಮೂಲಕ ಅರಮನೆ ಆವರಣದ ಸ್ವಚ್ಛತೆ ಬಗ್ಗೆ ಕ್ರಮ ಕೈಗೊಳ್ಳಿ ಎಂದು ಡಿಸಿ ಡಾ.ರಾಜೇಂದ್ರ ಅವರಿಗೆ ಸೂಚನೆ ನೀಡಿದ್ದಾರೆ.

ಮೈಸೂರಲ್ಲಿ ಪಾರಿವಾಳಗಳ ಸಂತತಿ ಹೆಚ್ಚಳ; ಕಾಗೆ, ಮೈನಾಗಳ ಸಂಖ್ಯೆ ಇಳಿಮುಖ

● ಪಾರಿವಾಳದ ಪಿಕ್ಕೆಯಿಂದ ಅಸ್ತಮಾ, ಇತರೆ ಖಾಯಿಲೆ ಆತಂಕ ● ಪಾರಂಪರಿಕ ಕಟ್ಟಡಗಳಿಗೂ ಹಾನಿ; ಪಕ್ಷಿ ಪ್ರಿಯರಲ್ಲಿ ಕಳವಳ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಜೂ.28– ಮೈಸೂರು ಅರಮನೆ ಸೇರಿದಂತೆ ವಿವಿಧೆಡೆ ಪಾರಿವಾಳಗಳಿಗೆ ಕಾಳು, ಎಣ್ಣೆಯಿಂದ ಕರಿದ ತಿನಿಸು ಸೇರಿದಂತೆ ವಿವಿಧ ಆಹಾರ ಪದಾರ್ಥ ಹಾಕಲಾಗುತ್ತಿದೆ. ಇದರಿಂದ ಸುತ್ತಮುತ್ತಲ ಪಾರಂಪರಿಕ ಹಾಗೂ ಪ್ರಮುಖ ವಾಣಿಜ್ಯ ಕಟ್ಟಡಗಳಿಗೆ ಹಾನಿ ಜೊತೆಗೆ ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟು ಮಾಡುತ್ತಿವೆ. ಈ ನಡುವೆ ಕಾಗೆ ಮತ್ತು ಮೈನಾ ಪಕ್ಷಿಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗುತ್ತಿರುವುದಕ್ಕೆ ಪರಿಸರ ಪ್ರೇಮಿಗಳು ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ.

ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದ ಆವರಣದಲ್ಲಿ ಕೆಲ ವರ್ಷಗಳಿಂದ ಪಾರಿವಾಳಗಳಿಗೆ ದಿನಸಿ, ಧಾನ್ಯದೊಂದಿಗೆ ಚೌಚೌ, ಚಿಪ್ಸ್, ಮುರ್ಖಿ, ಕೋಡುಬಳೆ ಸೇರಿದಂತೆ ನಾನಾ ಧಾನ್ಯ–ತಿನಿಸು ಹಾಕುತ್ತಾ ಬರಲಾಗುತ್ತಿದೆ. ಇದರಿಂದ ಪಾರಿವಾಳಗಳಿಗೆ ಯಥೇಚ್ಛವಾಗಿ ಆಹಾರ ದೊರಕುತ್ತಿದೆ ಹಾಗಾಗಿ ಪಾರಿವಾಳಗಳ ಸಂಖ್ಯೆ ಹೆಚ್ಚಳವಾಗುತ್ತಿದ್ದು, ಪಾರಂಪರಿಕ ಕಟ್ಟಡಗಳಾದ ಅರಮನೆ, ಅರಮನೆಯ ವಿವಿಧ ದ್ವಾರಗಳು, ಚಾಮರಾಜ ವೃತ್ತ, ಪುರಭವನ ಕಟ್ಟಡ, ಕೆ.ಆರ್.ಆಸ್ಪತ್ರೆ ಕಟ್ಟಡ, ಹಳೆ ಲೈಬ್ರರಿ ಕಟ್ಟಡ ಸೇರಿದಂತೆ ವಿವಿಧ ಪಾರಂಪರಿಕ ಕಟ್ಟಡಗಳ ಮೇಲೆ ಪಾರಿವಾಳಗಳು ವಾಸ್ತವ್ಯ ಹೂಡುತ್ತಿದ್ದು, ಇಂತಹ ಕಟ್ಟಡಗಳು ತೀವ್ರ ಅನೈರ್ಮಲ್ಯಗೊಳ್ಳುತ್ತಿವೆ.




ಆಕ್ಷೇಪ ಆರಂಭ: ಅರಮನೆ ಮುಂಭಾಗ ಪಾರಿವಾಳಗಳಿಗೆ ಆಹಾರ ಧಾನ್ಯ ಹಾಕುತ್ತಿರುವುದರಿಂದ ಪಾರಂಪರಿಕ ಕಟ್ಟಡಗಳಿಗೆ ಆಗುತ್ತಿರುವ ಹಾನಿ ಕುರಿತಂತೆ ಬಿಜೆಪಿ ಮುಖಂಡ ಆರ್.ರಘು ಕೌಟಿಲ್ಯ ಈಗಾಗಲೇ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಪ್ರವಾಸೋದ್ಯಮ ಸಚಿವ ಹೆಚ್.ಕೆ. ಪಾಟೀಲ್, ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅವರಿಗೆ ಪತ್ರ ಬರೆದು ಅರಮನೆ ಮುಂಭಾಗ ಪಾರಿವಾಳಗಳಿಗೆ ಆಹಾರ ಧಾನ್ಯ ಹಾಕುತ್ತಿರುವುದನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದಾರೆ. ಆದರೂ, ಪಾರಿವಾಳ ಪ್ರಿಯರು ಮುಂಜಾನೆಯೇ ಧಾನ್ಯ ತಂದು ಸುರಿಯುವುದನ್ನು ಮುಂದುವರೆಸಿದ್ದಾರೆ.

ಪರಿವರ್ತನೆ ಅಗತ್ಯ: ವೈಲ್ಡ್‌ಲೈಫ್ ಕನ್ಸರ್ವೇಶನ್ ಫೌಂಡೇಷನ್ ಮುಖ್ಯಸ್ಥ ರಾಜ್‌ಕುಮಾರ್ ಡಿ.ದೇವರಾಜ ಅರಸ್ ಮಾತನಾಡಿ, ಪಾರಿವಾಳಗಳಿಗೆ ಎಲ್ಲೆಂದರಲ್ಲಿ ಆಹಾರ ಪೂರೈಕೆ ಮಾಡಬೇಡಿ ಎಂದು ಕೆಲವು ವರ್ಷಗಳಿಂದ ಮನವಿ ಮಾಡಿಕೊಳ್ಳುತ್ತಿದ್ದರೂ ನಿರಂತರವಾಗಿ ಧಾನ್ಯ ಮಾತ್ರವಲ್ಲದೆ ಎಣ್ಣೆಯಿಂದ ಕರಿದ ತಿಂಡಿ ಪದಾರ್ಥಗಳನ್ನು ಹಾಕುತ್ತಿದ್ದಾರೆ. ಇದರಿಂದ ಪಾರಿವಾಳ ಜೀವನ ಶೈಲಿ ಬದಲಾಗಿದ್ದು, ವಿವಿಧ ದುಷ್ಪರಿಣಾಮ ಬೀರುತ್ತಿದೆ. ಜನ ಪಾರಿವಾಳಗಳ ಮುಂದೆ ಫೋಟೋ, ವಿಡಿಯೋ ತೆಗೆಸಿಕೊಳ್ಳುವುದಕ್ಕೆ ಇಚ್ಛಿಸುತ್ತಿದ್ದು, ಅವುಗಳಿಂದಾಗುತ್ತಿರುವ ದುಷ್ಪರಿಣಾಮ ಯಾರಿಗೂ ಗೊತ್ತಿಲ್ಲ. ಅವುಗಳ ಆಹಾರ ಪದ್ಧತಿಯನ್ನು ಹಾಳು ಮಾಡಲಾಗುತ್ತಿದೆ. ಹೆಚ್ಚು ಪ್ರೋಟೀನ್ ಇರುವ ಆಹಾರ ಸಿಗುತ್ತಿರುವುದರಿಂದ ಪಾರಿವಾಳಗಳ ಸ್ಥಿತಿಗತಿ ಬದಲಾಗುತ್ತಿದೆ. ಆಹಾರ ಹುಡುಕಿಕೊಂಡು ಹೋಗಬೇಕಾದ ಪಕ್ಷಿಗಳು ಕುಂತಲ್ಲಿಯೇ ಆಹಾರ ದೊರಕುತ್ತಿರುವುದರಿಂದ ಅವುಗಳು ನಿಷ್ಕ್ರಿಯಗೊಂಡಿವೆ. ಸಂತಾನೋತ್ಪತ್ತಿ ಹೆಚ್ಚಾಗುತ್ತಿದೆ. ಪಾರಂಪರಿಕ ಕಟ್ಟಡ ಮಾತ್ರವಲ್ಲದೆ, ಅಂಗಡಿಗಳ ಬೋರ್ಡ್‌ಗಳ ಹಿಂದೆಯೂ ಗೂಡು ಕಟ್ಟಿಕೊಳ್ಳುತ್ತಿವೆ. ಅವುಗಳ ಪಿಕ್ಕೆಯಲ್ಲಿ ಟಾಕ್ಸಿಕ್ ಅಂಶ ಇರುವುದರಿಂದ ಪಾರಂಪರಿಕ ಕಟ್ಟಡಗಳು ಮಾತ್ರವಲ್ಲದೆ ಇನ್ನಿತರೆ ಕಟ್ಟಡಗಳಿಗೂ ಹಾನಿಯಾಗುತ್ತಿದೆ. ಪಾರಿವಾಳಗಳಿಗೆ ಆಹಾರ ಹಾಕಬೇಡಿ ಎಂದು ನಿಯಮಾವಳಿ ಜಾರಿಗೊಳಿಸುವುದಕ್ಕಿಂತ ಪ್ರೀತಿಯಿಂದ ಮನವರಿಕೆ ಮಾಡಿಕೊಡುವ ಅವಶ್ಯಕತೆ ಇದೆ. ಇದನ್ನು ಜನರೂ ಅರ್ಥ ಮಾಡಿಕೊಳ್ಳಬೇಕಾಗಿದೆ ಎಂದರು.

ಇತರೆ ಪಕ್ಷಿ, ಜನರ ಆರೋಗ್ಯದ ಮೇಲೂ ದುಷ್ಪರಿಣಾಮ: ಪ್ರಾಣಿ ಸಂರಕ್ಷಕ ಪ್ರದೀಪ್ ಮಾತನಾಡಿ, ಮೈಸೂರು ಅರಮನೆ ಮುಂಭಾಗ, ದಸರಾ ವಸ್ತುಪ್ರದರ್ಶನದ ಮುಂಭಾಗ, ಸರ್ಕಾರಿ ಅತಿಥಿ ಗೃಹ ಹೀಗೆ ಪ್ರಮುಖ ಕಟ್ಟಡಗಳ ಬಳಿ ಪಾರಿವಾಳಗಳಿಗೆ ಜನರು ಧಾನ್ಯ, ಎಣ್ಣೆಯಲ್ಲಿ ಕರಿದ ಕುರುಕು ತಿನಿಸನ್ನು ಹಾಕಲಾಗುತ್ತಿರುವುದರಿಂದ ಆಹಾರ ಸರಪಳಿಯಲ್ಲಿ ನ್ಯೂನತೆಯುಂಟಾಗುತ್ತಿದೆ. ಅವುಗಳ ಪಿಕ್ಕೆಯಲ್ಲಿ ಟಾಕ್ಸಿನ್ ಅಂಶ ಹೆಚ್ಚಾಗಿದ್ದು, ಅದು ಕಟ್ಟಡಗಳ ಮೇಲ್ಭಾವಣಿಯನ್ನು ದುರ್ಬಲಗೊಳಿಸುತ್ತದೆ. ಅಲ್ಲದೆ, ಅವುಗಳ ಪಿಕ್ಕೆಗಳಿಂದ ಜನರಲ್ಲಿ ಅಸ್ತಮಾ ರಕ್ತ ಸಮಸ್ಯೆ ಉಂಟಾಗುತ್ತಿದೆ. ಇದರ ಬಗ್ಗೆ ಜನ ಗಮನಿಸುತ್ತಿಲ್ಲ. ಮೈಸೂರಲ್ಲಿ ಪಾರಿವಾಳಗಳ ಸಂಖ್ಯೆ ಹೆಚ್ಚಾದ ಕಾರಣ, ಕಾಗೆ ಹಾಗೂ ಮೈನಾ ಪಕ್ಷಿಗಳ ಸಂಖ್ಯೆ ಕ್ಷೀಣಿಸುತ್ತಿದೆ. ಪ್ರಕೃತಿ ನಿಯಮಕ್ಕೆ ವಿರುದ್ಧವಾಗಿ ಹೋಗುತ್ತಿರುವುದರಿಂದ ಪರಿಸರ ಸಮತೋಲನ ತಪ್ಪುತ್ತಿದೆ. ಇದನ್ನು ಜನ ಅರ್ಥ ಮಾಡಿಕೊಳ್ಳಬೇಕು. ಆಹಾರ ಹಾಕದೇ ಇದ್ದರೆ ಅವುಗಳು ಸಾಯುವುದಿಲ್ಲ. ಬದುಕುವ ಹಾದಿಯನ್ನು ಕಂಡುಕೊಳ್ಳುತ್ತವೆ. ಗಿಡ–ಮರಗಳ ಮೇಲಿರುವ ಕೀಟ, ಹುಳಗಳನ್ನು ತಿಂದು ನೈಸರ್ಗಿಕ ನಿಯಮದಂತೆ ಬದುಕುತ್ತವೆ. ಮಹಾರಾಷ್ಟ್ರದಲ್ಲಿ ಪಾರಿವಾಳಗಳಿಗೆ ಆಹಾರ ಹಾಕುವುದನ್ನು ನಿಷೇದಿಸಲಾಗಿದೆ. ಮೈಸೂರಲ್ಲೂ ನೈಸರ್ಗಿಕ ನಿಯಮ ಮಾನ್ಯ ಮಾಡಬೇಕು. ಇತರೆ ಪಕ್ಷಿಗಳ ಸಂಕುಲದ ರಕ್ಷಣೆಗಾಗಿ ಪಾರಿವಾಳಗಳಿಗೆ ಆಹಾರ ಪೂರೈಕೆ ನಿಲ್ಲಿಸಬೇಕು ಎಂದು ಮನವಿ ಮಾಡಿದರು.

ಮೈಸೂರು ಪಾಲಿಕೆಯ ವಿವಿ ವಾಟರ್ ವರ್ಕ್ಸ್‌ನಲ್ಲಿ ವ್ಯರ್ಥ ನೀರು ಸಂಸ್ಕರಣ ಘಟಕ

1.73 ಕೋಟಿ ವೆಚ್ಚದಲ್ಲಿ 30-40 ಲಕ್ಷ ಲೀಟರ್ ವ್ಯರ್ಥ ನೀರು ಸದ್ಬಳಕೆಗೆ ನಿರ್ಧಾರ





ಮೋಹನ್ ಕಾಯಕ

ಮೈಸೂರು, ಜೂ.28– ಜೀವ ಜಲದ ಮರು ಬಳಕೆಗೆ ಮುಂದಾಗಿರುವ ಮೈಸೂರು ನಗರಪಾಲಿಕೆ ವಾಣಿ ವಿಲಾಸ ವಾಟರ್ ವರ್ಕ್ಸ್, ಬೆಂಗಳೂರು ನಂತರ 'ಬ್ಯಾಕ್ ವಾಷ್ ವಾಟರ್ ಟ್ರೀಟ್‌ಮೆಂಟ್ ಪ್ಲಾಂಟ್(ವ್ಯರ್ಥ ನೀರಿನ ಮರುಬಳಕೆ ಘಟಕ)' ಹೊಂದಿರುವ ಹೆಗ್ಗಳಿಕೆಯನ್ನು ಸದ್ಯದಲ್ಲಿಯೇ ಪಡೆಯಲಿದೆ.

ಪಾಲಿಕೆಯ ವಾಣಿ ವಿಲಾಸ ವಾಟರ್ ವರ್ಕ್ಸ್ ಆವರಣದಲ್ಲಿ ಕೇಂದ್ರ ಸರ್ಕಾರದ 2020–21ರ 15ನೇ ಹಣಕಾಸು ಯೋಜನೆಯ ಮರು ನೀರು ಬಳಕೆ ಅನುದಾನದಡಿಯಲ್ಲಿ 1.73 ಕೋಟಿ ರೂ.ವೆಚ್ಚದ ಬ್ಯಾಕ್ ವಾಷ್ ವಾಟರ್ ಟ್ರೀಟ್‌ಮೆಂಟ್ ಪ್ಲಾಂಟ್ ನಿರ್ಮಾಣ ಮಾಡಲಾಗುತ್ತಿದೆ.

ಕುಡಿಯುವ ನೀರಿನ ಸದ್ಬಳಕೆ ಹಿನ್ನಲೆಯಲ್ಲಿ ಪ್ರತಿನಿತ್ಯ ವಾಣಿ ವಿಲಾಸ ವಾಟರ್ ವರ್ಕ್ಸ್‌ನಲ್ಲಿ ವ್ಯರ್ಥವಾಗುತ್ತಿರುವ 3 ರಿಂದ 4 ಎಂಎಲ್‌ಡಿ(30–40 ಲಕ್ಷ ಲೀಟರ್) ನೀರನ್ನು ಮರು ಬಳಕೆ ಮಾಡಲು ಬ್ಯಾಕ್ ವಾಷ್ ವಾಟರ್ ಟ್ರೀಟ್‌ಮೆಂಟ್ ಪ್ಲಾಂಟ್ ನಿರ್ಮಿಸುತ್ತಿದ್ದು, ಮೈಸೂರಿಗರಿಗೆ ನೀರಿನ ಸಮಸ್ಯೆ ಬಾರದಂತೆ ವಹಿಸಿರುವ ಮುನ್ನೆಚ್ಚರಿಕಾ ಕ್ರಮಗಳಲ್ಲಿ ಇದು ಕೂಡ ಒಂದಾಗಿದೆ.

ವಿವಿ ವಾಟರ್ ವರ್ಕ್ಸ್‌ನಲ್ಲಿ ಮೈಸೂರು ಮಹಾರಾಜರು ಕಟ್ಟಿಸಿರುವ ಶುದ್ಧಿಕರಣ ಘಟಕದಲ್ಲಿ ಬೆಳಗೊಳ ಯಂತ್ರಾಗಾರ (ಪಂಪ್‌ಹೌಸ್)ದಿಂದ ಬರುವ 45 ಎಂಎಲ್‌ಡಿ ಕಚ್ಚಾ ನೀರನ್ನು ಏರಿಯೇಟರ್, ಸೆಡಿಮೆಂಟೇಶನ್ ಟ್ಯಾಂಕ್, ಫಿಲ್ಟ್ರೇಶನ್, ಕ್ಲೋರಿನೇಷನ್ ಮೂಲಕ ಶುದ್ಧಿಕರಿಸಿ, ಪೂರೈಕೆ ಮಾಡಲಾಗುತ್ತಿದೆ. ನಿರಂತರವಾಗಿ ಫಿಲ್ಟ್ರೇಶನ್ ಮಾಡುವಾಗ ಮಣ್ಣಿನ ಬದಿ(ಬಗ್ಗಡ)ಯ ಅಂಶ ಮರಳಿನೊಂದಿಗೆ ಸೇರಿ ಉಳಿದುಕೊಳ್ಳುವ ನೀರನ್ನು ಶುದ್ಧಿಕರಣ ಘಟಕದಿಂದ ಹೊರತೆಗೆದು (ಬ್ಯಾಕ್ ವಾಷ್ ಮಾಡುವುದು) ಮತ್ತೊಮ್ಮೆ ಶುದ್ಧಿಕರಿಸಿ ಪೂರೈಕೆ ಮಾಡಲು ಬ್ಯಾಕ್ ವಾಷ್ ವಾಟರ್ ಟ್ರೀಟ್‌ಮೆಂಟ್ ಪ್ಲಾಂಟ್ ಅನುಕೂಲಕರವಾಗಲಿದೆ.

ನೀರನ್ನು ಹಿಡಿದಿಟ್ಟಿರುವ ಮಣ್ಣು ಮತ್ತು ಮರಳನ್ನು ಕ್ಲೀನ್ ಮಾಡಲು ಒಂದು ದಶಲಕ್ಷ ಲೀಟರ್ ಸಾಮರ್ಥ್ಯದ ಓವರ್ ಹೆಡ್ ಟ್ಯಾಂಕ್ ಮೂಲಕ ಫಿಲ್ಟರ್ ಬೆಡ್‌ಗೆ ನೀರನ್ನು ರಿವರ್ಸ್ ಬಿಟ್ಟಾಗ ಹಿಡಿದು ಕೊಂಡಿದ್ದ ಮಣ್ಣಿನ ಬಗ್ಗಡವೆಲ್ಲವೂ ನೀರಿನೊಂದಿಗೆ ಹೊರ ಬೀಳುವುದಕ್ಕೆ(ಹೊರಬರುವುದಕ್ಕೆ) ಬ್ಯಾಕ್ ವಾಷ್ ವಾಟರ್ ಎನ್ನಲಾಗುವುದು. ಈ ಬ್ಯಾಕ್ ವಾಷ್ ವಾಟರ್ ಅನ್ನು ಮತ್ತೆ ಶುದ್ಧಿಕರಿಸಿ, ಮರು ಬಳಕೆಗೆ ಮಾಡಲು 'ಬ್ಯಾಕ್ ವಾಷ್ ವಾಟರ್ ಟ್ರೀಟ್‌ಮೆಂಟ್ ಪ್ಲಾಂಟ್' ನಿರ್ಮಾಣ ಮಾಡಲಾಗುತ್ತಿದೆ ಎಂದು ನಗರ ಪಾಲಿಕೆ ವಾಣಿ ವಿಲಾಸ ವಾಟರ್ ವರ್ಕ್ಸ್‌ನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮೊಹಮ್ಮದ್ ಮುಸ್ತಫಾ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಫಿಲ್ಟರ್ ಕೆಳಗಿನಿಂದ ನೀರನ್ನು ರಿವರ್ಸ್ ಬಿಟ್ಟಾಗ ಕಚ್ಚಾ ನೀರು ಹೊರಗಡೆ ಬರುತ್ತದೆ. ಅದರಲ್ಲಿ ಬದಿಯ(ಬಗ್ಗಡದ) ಅಂಶ ಶೇ.50–60 ರಷ್ಟು ಎನ್‌ಟಿಯು (ನೆಫೆಲೋ ಮೆಟ್ರಿಕ್ ಟರ್ಬಿಡಿಟಿ ಯುನಿಟ್) ಇರಲಿದೆ. ರಿವರ್ಸ್ ಬರುವ 3 ರಿಂದ 4 ಎಂಎಲ್‌ಡಿ ನೀರನ್ನು ಮರು ಬಳಕೆ ಮಾಡ ಲಾಗುವುದು. ಈ ಮೊದಲು ಬ್ಯಾಕ್ ವಾಷ್ ವಾಟರ್ ಅನ್ನು ಕುಕ್ಕರ ಹಳ್ಳಿ ಕೆರೆಗೆ ಮತ್ತು ರೈಲ್ವೆ ನಿಲ್ದಾಣದ ನಡುವೆ ಸಾಗುವ ಕಾಲುವೆಗೆ ಬಿಡಲಾಗುತ್ತಿತ್ತು. ಆದರೆ, ಈ ನೀರನ್ನು ವ್ಯರ್ಥ ಮಾಡಬಾರದೆಂಬ ಉದ್ದೇಶದಿಂದ 'ಬ್ಯಾಕ್ ವಾಷ್ ವಾಟರ್ ಟ್ರೀಟ್‌ಮೆಂಟ್ ಪ್ಲಾಂಟ್' ನಿರ್ಮಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಹೆಚ್ಚುವರಿ ನೀರು: ವ್ಯರ್ಥವಾಗುತ್ತಿದ್ದ ನೀರನ್ನು ಮರುಬಳಕೆ ಮಾಡುವುದರಿಂದ ಹೆಚ್ಚುವರಿಯಾಗಿ 3 ಎಂಎಲ್‌ಡಿ ನೀರು ಲಭ್ಯವಾಗಲಿದೆ. ಇದರಲ್ಲಿ 5 ಲಕ್ಷ ಲೀಟರ್ ನೀರನ್ನು ಚೆಲುವಾಂಬ ಪಾರ್ಕ್ ಬಳಕೆಗೆ ನಿಗದಿ ಮಾಡಲಾಗಿದ್ದು, ಉಳಿದ ಇನ್ನೂ 2.5 ಎಂಎಲ್‌ಡಿ ನೀರನ್ನು ಜನರ ಬಳಕೆಗೆ ನೀಡಲಾಗುವುದು ಎಂದು ತಿಳಿಸಿದರು.

ಒಂದು ದಿನ ಬೇಕು: ಬ್ಯಾಕ್ ವಾಷ್ ವಾಟರ್‌ನಲ್ಲಿ ಬಗ್ಗಡದ ಪ್ರಮಾಣ ಜಾಸ್ತಿ ಇರುವುದರಿಂದ 3 ಎಂಎಲ್‌ಡಿ ನೀರನ್ನು ಶುದ್ಧೀಕರಿಸಲು ಅಥವಾ ಫಿಲ್ಟರ್ ಆಗಲು ಒಂದು ದಿನ ಬೇಕಾಗುತ್ತದೆ. ಸೆಡಿಮೆಂಟೇಶನ್ ಟ್ಯಾಂಕ್, ಪಾಲಿಸಿಂಗ್ ಟ್ಯಾಂಕ್ ಹಾಗೂ ಇತರೆ ಫಿಲ್ಟರ್ ಯಂತ್ರಗಳನ್ನು ಬಳಸಿ ಶುದ್ಧೀಕರಿಸಿದ ನೀರನ್ನು ಪಂಪ್ ಮಾಡಿ ಪೂರೈಕೆ ಮಾಡಲಾಗುವುದು. ಈ ಮೂಲಕ ಸಂಪೂರ್ಣವಾಗಿ ಶುದ್ಧಿಕರಿಸಿದ ನೀರನ್ನೇ ಬಳಕೆ ಮಾಡಲಿದ್ದೇವೆ ಎಂದರು.

ಪ್ರಸ್ತಾವನೆ ರೆಡಿಯಾಗಿರಲಿದೆ: ವಾಣಿ ವಿಲಾಸ ವಾಟರ್ ವರ್ಕ್ಸ್‌ನಂತೆಯೇ ಮೇಳಾಪುರ, ಹೊಂಗಳ್ಳಿ ಮತ್ತು ಕಬಿನಿಯಲ್ಲೂ ಬ್ಯಾಕ್ ವಾಷ್ ವಾಟರ್ ಟ್ರೀಟ್‌ಮೆಂಟ್ ಪ್ಲಾಂಟ್ ನಿರ್ಮಾಣ ಮಾಡಲು ಪ್ರಸ್ತಾವನೆ ರೆಡಿಮಾಡಿಕೊಂಡಿರಲಾಗುವುದು. ಅನುದಾನ ಸಿಗುವ ಅವಕಾಶ ನೋಡಿಕೊಂಡು ಪ್ರಸ್ತಾವನೆ ಅಲ್ಲಿಸಿ, ಅನುಮತಿ ಪಡೆದು, ನಿರ್ಮಾಣ ಕಾರ್ಯಗಳನ್ನು ಪ್ರಾರಂಭಿಸುವ ಚಿಂತನೆ ಇದೆ ಎಂದು ತಿಳಿಸಿದರು.

ಶೇ.90 ರಷ್ಟು ಪೂರ್ಣ...

ಬ್ಯಾಕ್ ವಾಷ್ ವಾಟರ್ ಟ್ರೀಟ್‌ಮೆಂಟ್ ಪ್ಲಾಂಟ್ ನಿರ್ಮಾಣ ಶೇ.90 ರಷ್ಟಾಗಿದ್ದು, ಪ್ಲಾಸ್ಟರಿಂಗ್ ನಡೆಯುತ್ತಿದೆ. ಪಂಪ್ ಅಳವಡಿಕೆ ಮತ್ತು ಚೆಲುವಾಂಬ ಪಾರ್ಕ್‌ಗೆ ಪೈಪ್‌ಲೈನ್ ಮಾಡುವ ಕೆಲಸ ಬಾಕಿ ಇದೆ. ವ್ಯರ್ಥ ನೀರನ್ನು ಮರು ಬಳಕೆ ಮಾಡುವ ಶುದ್ಧೀಕರಣ ಘಟಕ ಬೆಂಗಳೂರಿನ ನಂತರ ಮೈಸೂರಿನಲ್ಲಾಗುತ್ತಿದೆ. ಇದರಿಂದ ನೀರಿನ ಉಳಿತಾಯ ಮತ್ತು ಹೆಚ್ಚುವರಿ ನೀರಿನ ಬಳಕೆಗೆ ಅನುಕೂಲವಾಗಲಿದೆ.

- **ಮೊಹಮ್ಮದ್ ಮುಸ್ತಫಾ,** ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಾಲಿಕೆ ವಾಣಿ ವಿಲಾಸ ವಾಟರ್ ವರ್ಕ್ಸ್

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಬಿಲ್ಲಾ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಲ್ಕಿ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಲ್ಕಿ (ಕ)	4 ಪ್ರದರ್ಶನಗಳು
ರಾಜಕಮಲ್	
ಗರುಡನ್ (ತ)	4 ಪ್ರದರ್ಶನಗಳು
ಸಂಗಂ	
ಕೋಟಿ (ಕ)	4 ಪ್ರದರ್ಶನಗಳು
ಲಿಡೋ	
ಪೊಕ್ರಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಮುಂಜ್ಯಾ (ಹಿಂ)	4 ಪ್ರದರ್ಶನಗಳು
ಪ್ರಭಾ	
ಶತಭಿಷ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಲ್ಕಿ 2898 ಎಡಿ(3ಡಿ) (ತೆ): ಬೆ.11.45ಕ್ಕೆ, ಮ.3.15ಕ್ಕೆ, ಕಲ್ಕಿ 2898 ಎಡಿ(3ಡಿ) (ಹಿಂ): ಸಂ.6.45ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಲವ್ ಲಿ (ಕ): ಬೆ.10.30ಕ್ಕೆ, ಮುಂಜ್ಯಾ (ಹಿಂ): ಮ.1.35ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಸಂ.4ಕ್ಕೆ, ರಾ.9.45ಕ್ಕೆ, ಪ್ಯಾರಡೈಸ್ (ಮ): ರಾ.7.30ಕ್ಕೆ.
ಸ್ಕ್ರೀನ್ 3	ಎ ಕ್ವೈಟ್ ಪ್ಲೇಸ್ ಡೇ ಒನ್ (ಇಂ): ಬೆ.10.50ಕ್ಕೆ, ರಾ.10.10ಕ್ಕೆ, ಕಲ್ಕಿ 2898 ಎಡಿ (ಕ): ಮ.1ಕ್ಕೆ, ಮಹಾರಾಜ (ತ): ಸಂ.4.25ಕ್ಕೆ, ಕೋಟಿ (ಕ): ರಾ.7.10ಕ್ಕೆ
ಸ್ಕ್ರೀನ್ 4	ಕಲ್ಕಿ 2898 ಎಡಿ(3ಡಿ) (ತೆ): ಬೆ.9.45ಕ್ಕೆ, ಮ.1.15ಕ್ಕೆ, ಸಂ.6.40ಕ್ಕೆ, ರಾ.10.10ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ಸಂ.4.40ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1	ಇನ್‌ಸೈಡ್ ಔಟ್ (3ಡಿ)(ಹಿಂ): ಬೆ.11ಕ್ಕೆ, ಇನ್‌ಸೈಡ್ ಔಟ್ (3ಡಿ)(ಇಂ): ಮ.1.20ಕ್ಕೆ, ಸಂ.4.20ಕ್ಕೆ, ಸಂ.6.40ಕ್ಕೆ, ಮುಂಜ್ಯಾ (ಹಿಂ): ರಾ.9ಕ್ಕೆ.
ಸ್ಕ್ರೀನ್ 2	ಮುಂಜ್ಯಾ (ಹಿಂ): ಬೆ.10ಕ್ಕೆ, ರಾ.7.35ಕ್ಕೆ, ರಾಕ್‌ಸ್ಟಾರ್ (ಹಿಂ): ಮ.12.45ಕ್ಕೆ, ಕೋಟಿ (ಕ): ಸಂ.4.05ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಚಂದು ಚಾಂಪಿಯನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 4	ಕೋಟಿ (ಕ): ಬೆ.10.05ಕ್ಕೆ, ಮಹಾರಾಜ (ತ): ಮ.1.35ಕ್ಕೆ, ರಾ.7.05ಕ್ಕೆ, ಶಿವಮ್ಮ ಹರೆಹಂಚಿನಾಳ (ಕ): ಸಂ.4.40ಕ್ಕೆ, ಜಿಆರ್‌ಆರ್‌ಆರ್ (ಮ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಲವ್ ಲಿ (ಕ): ಬೆ.10.45ಕ್ಕೆ, ಮ.3.35ಕ್ಕೆ, ಕರ್ಮದೋಳಗೆ (ಕ): ಮ.1.40ಕ್ಕೆ, ಕೋಟಿ (ಕ): ಸಂ.6.25ಕ್ಕೆ, ಮಹಾರಾಜ (ತ): ರಾ.9.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ(3ಡಿ) (ತೆ): ಬೆ.10.30ಕ್ಕೆ, ಮ.2.30ಕ್ಕೆ, ಸಂ.6ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ಕ): ಮ.1ಕ್ಕೆ, ಸಂ.4.25ಕ್ಕೆ, ರಾ.7.50ಕ್ಕೆ.
ಸ್ಕ್ರೀನ್ 4	ಲವ್ ಲಿ (ಕ): ಮ.1ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಸಂ.4ಕ್ಕೆ, ರಾ.7.25ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸಿಎಂ ಬೆಂಗಾವಲು ವಾಹನಕ್ಕೆ ಅಡ್ಡ ಬಂದ ಬೈಕ್ ಸವಾರನ ವಿರುದ್ಧ ಕೇಸ್

ಅಡ್ಡಾದಿಡ್ಡಿ ಚಲಿಸಿ ಬಿದ್ದವನಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ

ಮೈಸೂರು, ಜೂ.28(ಜಿಎ)–ಮುಖ್ಯಮಂತ್ರಿಗಳ ಬೆಂಗಾವಲು ವಾಹನಕ್ಕೆ ಅಡ್ಡ ಬಂದ ಬೈಕ್ ಸವಾರನ ವಿರುದ್ಧ ನಗರದ ಕೆ.ಆರ್.ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತಡವಾಗಿ ಬೆಳಕಿಗೆ ಬಂದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಜೂ.23 ರಂದು ಮೈಸೂರು ಜಿಲ್ಲಾ ಪ್ರವಾಸದ ನಿಮಿತ್ತ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದರು. ಅಲ್ಲಿಂದ ರಸ್ತೆ ಮಾರ್ಗವಾಗಿ ನಜರ್‌ಬಾದ್‌ನಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಕಾಫಿ ಕುಡಿಯಲು ತೆರಳುತ್ತಿದ್ದರು. ಈ ವೇಳೆ ಗನ್ ಹೌಸ್ ವೃತ್ತದ ಬಳಿ ಮರಣ ಗ್ರಾಮದ ಕುಂಬಾರಳ್ಳಿ ನಿವಾಸಿ ಶಿವು ಎಂಬಾತ ಅಡ್ಡಾದಿಡ್ಡಿಯಾಗಿ ಬೈಕ್ ಚಲಾಯಿಸುತ್ತ ಗನ್ ಹೌಸ್ ವೃತ್ತದ ಬಳಿ ಹಾಕಿದ್ದ ಬ್ಯಾರಿಕೇಡ್ ದಾಟಿ ಬಂದಿದ್ದಾನೆ.

ಈ ಸಂದರ್ಭದಲ್ಲಿ ಅಲ್ಲೇ ಕರ್ತವ್ಯದಲ್ಲಿದ್ದ ಪೊಲೀಸ್ ಸಿಬ್ಬಂದಿ ಅಣ್ಣಯ್ಯ ಹಾಗೂ ಉಪೇಂದ್ರ ಆತನಿಗೆ ಬೈಕ್ ನಿಲ್ಲಿಸುವಂತೆ ಸೂಚಿಸಿದ್ದರು. ಆತ ವೇಗವಾಗಿ ಬಂದು ಮುಖ್ಯಮಂತ್ರಿಯವರ ಬೆಂಗಾವಲು ವಾಹನ ಬರುತ್ತಿದ್ದ ವಿರುದ್ಧ ದಿಕ್ಕಿನತ್ತ ಚಲಿಸಿ ನಿಯಂತ್ರಣ ತಪ್ಪಿ ಬಿದ್ದಿದ್ದಾನೆ. ಗಾಯಗೊಂಡ ಆತನನ್ನು ಆಂಬ್ಯುಲೆನ್ಸ್ ಮೂಲಕ ಖಾಸಗಿ ಆಸ್ಪತ್ರೆಗೆ ಪೊಲೀಸರು ದಾಖಲಿಸಿದ್ದಾರೆ. ಇದೀಗ ಚೇತರಿಸಿಕೊಂಡಿದ್ದಾನೆ.

ಮುಖ್ಯಮಂತ್ರಿಗಳ ಬೆಂಗಾವಲು ವಾಹನಕ್ಕೆ ಹಾಗೂ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಡಿ ಬೈಕ್ ಸವಾರನ ವಿರುದ್ಧ ಕೆ.ಆರ್.ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕೆಆರ್‌ಎಸ್ ನೀರಿನ ಮಟ್ಟ




ಗರಿಷ್ಠ ಮಟ್ಟ	124.80 ಅಡಿ
ಶುಕ್ರವಾರ	90.30 ಅಡಿ
ಒಳಹರಿವು	13437 ಕ್ಯೂಸೆಕ್
ಹೊರಹರಿವು	478 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಶುಕ್ರವಾರ	2272.51 ಅಡಿ
ಒಳಹರಿವು	20113 ಕ್ಯೂಸೆಕ್
ಹೊರಹರಿವು	1000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಶುಕ್ರವಾರ	2835.28 ಅಡಿ
ಒಳಹರಿವು	2562 ಕ್ಯೂಸೆಕ್
ಹೊರಹರಿವು	200 ಕ್ಯೂಸೆಕ್

Nakhsha BUILDERS

ಕಮರ್ಷಿಯಲ್ ಕನ್ಸ್‌ಟ್ರಕ್ಷನ್

₹999/-* Sqft. ಇಂದ ಪ್ರಾರಂಭವಾಗುತ್ತ

ಈಗಲೇ ಕರೆ ಮಾಡಿ
ಉಚಿತವಾಗಿ ಸಮಾಲೋಚನೆ ಮತ್ತು ವಿನ್ಯಾಸ ಪಡೆಯಿರಿ

*T&C Applied

Contact Details:
+91 9606966266, +91 9606966299
www.nakhsha.in

PLOT FOR RENT

2 BHK with Big Studio Room, Wardrobes, Air Condition, Solar, UPS, Modular Kitchen, TV Cabinet, Queen Size Room, Car Parking & Park Facing.
@ V.V. Mohalla, Mysore

Ph.: 9845118777

SITE FOR SALE

Sand Strome Habitat Layout

MUDA APPROVED MYSORE

30x50 E/F

Near Acharya Vidyakula
Behind St. Joseph School, Yelavala

9900466811, 9980270076

ಜಮೀನು ಮಾರಾಟಕ್ಕಿದೆ

ಒಟ್ಟು ಆರು ಎಕರೆ ಹತ್ತು ಗುಂಟೆ ಜಮೀನು, ಇದು ಗ್ರೀನ್ ಜೋನ್‌ಯಿಂದ ಯಲ್ಲೋ ಜೋನ್‌ಗೆ ಪರಿವರ್ತನೆ ಆಗಿ ನಾಲ್ಕು ಎಕರೆ ಜಾಗದಲ್ಲಿ 66000ಅಡಿ FCI ಕಟ್ಟಡ (ಗೋಡೌನ್) ಇದೆ ಇನ್ನು ಉಳಿಕೆ ಖಾಲಿ ಜಾಗ ಎರಡು ಎಕರೆ ಹತ್ತು ಗುಂಟೆ ಇದೆ. ಇದು ಸಹ ಕನ್ವರ್ಷನ್ ಆಗಿದೆ. ಈ ಜಾಗವು ಚಾಮರಾಜನಗರ ಫ್ಲೈವರ್ ಸಮೀಪ ಇರುತ್ತದೆ.

ಸಂಪರ್ಕಿಸಿ:
8088959506
9880930881

INDIAN COUNCIL OF ASTROLOGICAL SCIENCES [ICAS] MYSURU CHAPTER STARTS 43rd BATCH

Courses are: JYOTHISH PRAVEENA JYOTHISH VISHARADA and VASTU
Classes are conducted both in Kannada and English by experienced faculties
New Batch Starts from 30.06.2024 Sunday
Classes are Conducted at Acharya iiT, Mysore
ONLINE & Special Classes are also Conducted. For Details Contact:
9448058965/ 9448816493/9535859348
Classes are held every Sunday

APPLY NOW

- Duty Doctors
- Nursing Staff
- Receptionist
- Welcome Female Staff
- Ambulance Driver
- House Keeping Supervisor

Walk-in-interview

AADITHYA ADHIKARI HOSPITAL
#417, Contour Road, Gokulam
Call : 81475 54766

1ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನಿಮ್ಮ ನೆನಮ ಸದಾ ನಮ್ಮ ಮನದಲ್ಲಿದೆ.
ದುಃಖತಪ್ತರು : ಕುಟುಂಬವರ್ಗ

ಶ್ರೀ ಪುಟ್ಟಯ್ಯ ನವರು

(ಶ್ರೀ ಶನೇಶ್ವರ ಗುಡ್ಡಪ್ಪನವರು) ಮಾಜಿ ಉಪಾಧ್ಯಕ್ಷರು, ತಾಲ್ಲೂಕು ಪಂಚಾಯಿತಿ, ಮೈಸೂರು, ಕೀಳನಪುರ

COMMERCIAL SITE FOR SALE

30x50 - W/F & 50x80 - E/F
80 Ft. Road
KBL GREEN WOOD
Near JSS Layout, 2nd Stage, Yandhahalli

9900466811, 9980270076

ನಿವೇಶನ ಮಾರಾಟಕ್ಕಿದೆ

ನಿವೇಶನ ಸಂಖ್ಯೆ 117, 36x50 ಪೂರ್ವ ದಿಕ್ಕು (ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಶಿಕ್ಷಕರ ಬಡಾವಣೆ) (ಮೈಸೂರು ನಗರ ಪಾಲಿಕೆಗೆ ವ್ಯಾಪ್ತಿಗೆ ಒಳಪಟ್ಟಿರುತ್ತದೆ). ಡಾ॥ ರಾಜ್‌ಕುಮಾರ್ ರಸ್ತೆ, 1ನೇ ಹಂತ, ಮೈಸೂರು. ಸಂಪರ್ಕಿಸಿ:

9341299699, 9900666189

FOR RENT

3 BHK HOUSE
First floor, T.K. Layout
Saraswathipuram.
Contact:

9480389520 / 9449814426

INVITING

Land Owners for a profitable Layout Joint Venture 1 to 3 acres in Mysore Outer Ring Road, 2 to 4km Only

9964563276 | 9448246923

ನೇರ II PUC!!

ಹಾಜರಾತಿ ಕೊರತೆಯೇ? ಪ್ರಥಮ ಪಿಯುಸಿ ಪಾಸಾಗಿಲ್ಲವೇ? ಚಿಂತಿಸದಿರಿ. ನಾವು ನಿಮಗೆ ದ್ವಿತಿಯ ಪಿಯುಸಿಗೆ ಪ್ರವೇಶ ನೀಡಿ, ಮುದ್ರಿತ ನೋಟ್ಸ್‌ಗಳೊಂದಿಗೆ ಉತ್ತಮ ಕೋಚಿಂಗ್ ನೀಡಿ ಅದ್ಭುತವಾಗಿ ಪರೀಕ್ಷೆಗೆ ಅಣಿಗೊಳಿಸುತ್ತೇವೆ.

ಜ್ಞಾನ ವರ್ಧಿನಿ ಸೆಂಟರ್
ಮರಿಮಲ್ಲಪ್ಪ ಕಾಲೇಜ್ ಎದುರು, ಮೈಸೂರು
www.direct2puc.com

9844355941, 9482674031

FOR SALE

20x30 North Facing
3 BHK newly construction House, Adjacent to Police Layout 1st Stage Mysore

Call 984 568 9999

NEWLY LAUNCHED PROJECT IN YELWALA

"PARISARA SIRI" - MYSORE

RESIDENTIAL PLOTS
@ JUST Rs. 675/- Sqft.,

2 KMS FROM YELWALA,
1 KM FROM NH 275
NEAR HORTICULTURE UNIVERSITY
MADIKERI – MYSORE HIGHWAY

DIMENSION
"30x40" "30x50" "40x60"

Contact: 9740391228

Commercial Sites near Yelwala

30x40, Rs. 2500/- per Sqft., DTCP Approved, RERA Approved, attached to Kushal Nagara express way, Ready for construction, Fully Developed, Surrounded by Houses

Call or WhatsApp: 96325 22332

11ನೇ ವರ್ಷದ ಸವಿನೆನಪು



ವಿಜಯಕುಮಾರಿ

ನನ್ನ ಬಾಳಿನ ಜ್ಯೋತಿ ನೀನು, ನಿನ್ನ ನೆನಪಲ್ಲೇ ಇರುವ ಪತಿ ಮಹಾದೇವಸ್ವಾಮಿ (ARSI), ಮಕ್ಕಳಾದ ದರ್ಶನ್, ಶಶಾಂಕ್, ಸೊಸೆ ಮಧುಶ್ರೀ ಮತ್ತು ಮೊಮ್ಮಕ್ಕಳು ಹನ್ವಿಕ್, ಹನ್ವಿತ್

LAND FOR SALE

Land of 2 acre in Banagavadi Village near Bannur. Rate 3.5 Lakh per gunta. It's very useful for opening a school, college, choultry, garmetns & investment purpose also, it will be double within 4 years. Contact:

Mob: 9206458647

Site for Sale 40x60

South face Srirampura 1st stage, near Bramaramba choultry
contact:

9739703467 | 9686895205

ESS & ESS INFRASTRUCTURE PVT. LTD.

PRM/KA/RERA/1268/378/PR/091123/006385

ESS & ESS INFRASTRUCTURE PVT. LTD. 100 + Projects

New Launch — Bookings Open

ಸಾಹಾ ಎಲೈಟ್

SAHA Elite PHASE 2

Ultra Luxury Plots

ಬೋಗಾದಿ–ಗದ್ದಿಗೆ ರಸ್ತೆ, ಕೆ.ಹೆಮ್ಮನಹಳ್ಳಿ, ಮೈಸೂರು

ನೋಂದಣಿಗೆ ಸಿದ್ಧವಾಗಿರುವ ನಿವೇಶನಗಳು

MUDA APPROVED — RERA REGISTERED

Total Area : 8 Acres 10 Guntas
Total Plots : 146
DIMENSIONS
30x40 | 30x50

Your Gateway To Luxury Life

For Free Site Visit Call Us
Call : 99011 64444

www.essandess.in

80% ಬ್ಯಾಂಕ್ ಲೋನ್ ಲಭ್ಯ

ದಿ ಕಂಟ್ರೋಲರ್ಸ್ ಆಫೀಸ್ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ

(ಎಲ್.ಐ.ಸಿ ನೌಕರರ ಬ್ಯಾಂಕ್)
#163/1, 1ನೇ ಮಹಡಿ, ರಮಾವಿಲಾಸ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು – 570024
Email : cocbmysore1916@gmail.com

ನೋಟಿಸ್

ಸಿ.ಓ.ಸಿ ಬ್ಯಾಂಕ್, ಮೈಸೂರು ಶಾಖೆ ತಾ॥ 01.07.2024 ರಿಂದ ತನ್ನ ಈಗಿನ ಸ್ಥಳದಿಂದ ಈ ಕೆಳಕಂಡ ವಿಳಾಸಕ್ಕೆ ಸ್ಥಳಾಂತರವಾಗುತ್ತಿದೆ.

ವಿಳಾಸ: #332, 1ನೇ ಮಹಡಿ, ನಾರಾಯಣ ಶಾಸ್ತ್ರಿ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು: 570024 ಗ್ರಾಹಕರು /ಸದಸ್ಯರು ಗಮನಿಸಬೇಕಾಗಿ ವಿನಂತಿ

ತಾ॥ 28.06.2024 ಸಹಿ/– ಪ್ರಧಾನ ವ್ಯವಸ್ಥಾಪಕರು/ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು

ಇಂಪೋರ್ಟೆಡ್ ಮತ್ತು ಇಂಡಿಯನ್ ಕ್ರಾಕರಿ ವಸ್ತುಗಳ ಬೃಹತ್ ಮಾರಾಟ

SALE ಕಡೆಯ 7 ದಿನಗಳು ಮಾತ್ರ

50000 ಕ್ಕೂ ಮೇಲ್ಪಟ್ಟು ಗೃಹಬಳಕೆಯ ವಸ್ತುಗಳು ಒಂದೇ ಸೂರಿನಡಿಯಲ್ಲಿ ಲಭ್ಯ

ಮೈಕ್ರೋವೇವ್‌ಗೆ ಸಂಬಂಧಿಸಿದ ಗ್ಲಾಸ್ ಮತ್ತು ಪ್ಲಾಸ್ಟಿಕ್ ಐಟಂಗಳು, ಥೈಲ್ಯಾಂಡ್, ಫ್ರಾನ್ಸ್, ಜರ್ಮನಿಯ ಗ್ಲಾಸ್‌ವೇರ್, ಫ್ಯಾನ್ಸಿ ಪ್ಲಾಸ್ಟಿಕ್ ಐಟಂಗಳು, ಬೋನ್ ಚೈನಾ ಪಿಂಗಾಣಿ ಮತ್ತು ಗ್ಲಾಸ್ ಐಟಂಗಳು

1kg Rs. 299/-
MILTON 100% FOOD GRADE PURE MELAMINE



50% ರವರೆಗೆ ಭಾರೀ ರಿಯಾಯಿತಿ

Luminarc | cello | CORELLE

ಸ್ಥಳ : ಇನ್‌ಸ್ಟ್ಯೂಷನ್ ಆಫ್ ಇಂಜಿನಿಯರ್ಸ್ (ಆಡಿಟೋರಿಯಂ ಹಾಲ್) ಜೆ.ಎಲ್.ಬಿ. ರಸ್ತೆ, ಮೈಸೂರು

